


ಬೆಳಗಲ್ಲು ವೀರಣ್ಣ

ಡಾ. ಎಂ.ಎನ್. ವೆಂಕಟೇಶ

ಬೆಳಗಲ್ಲು ವೀರಣ್ಣ

ಡಾ. ಎಂ.ಎಸ್. ವೆಂಕಟೇಶ

ವಿಸ್ತರಣೆ ಹಾಗೂ ಸಲಹಾ ಕೇಂದ್ರ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ಗೊಟಗೋಡಿ - ೫೮೧ ೧೯೭, ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

BELAGALU VEERANNA

(A BIOGRAPHY OF BELAGALU VEERANNA)

By
Dr. M.N. Venkatesh
Asst. Professor
Dravida Vishwavidyalaya
Kupam, Andhrapradesh
Mob : 07382753182

Published by
Prof. S.C. Ramesh
Director
Centre for Extension and Consultancy
Karantaka Jaanapada University
Gotagodi - 581 197
Shiggavi Taluk, Haveri Dist, Karnataka
Phone: 0836 - 2255180

Pages: xii + 46 = 58 **Price: ₹** 70/-
www.janapadauni.in
First Impression : 2014
ISBN- 978-93-83149-29-2

ಬೆಲೆ : ೭೦/-
ಮುಖಪುಟ: **ಕೆ.ಕೆ. ಮಕಾಳಿ**
ಅಕ್ಷರ ಸಂಯೋಜನೆ: **ವಿಶ್ವ ಗುಜ್ಜರ್**

ಪುಸ್ತಕ ದೊರೆಯುವ ಸ್ಥಳ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೧೯೭,
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

ಮುದ್ರಣ
ರಾಜಾ ಪ್ರಿಂಟರ್ಸ್, ಬೆಂಗಳೂರು
ದೂರವಾಣಿ : ೦೮೦-೨೨೨೩೪೦೬೬

ದೇಶ ಸುತ್ತು ಕೋಶ ಓದು

ಕನ್ನಡನಾಡು ಅಮೂಲ್ಯ ಹಾಗೂ ಸಮೃದ್ಧ ಜಾನಪದ ಸಂಪತ್ತಿನ ಆಗರವಾಗಿದೆ. ಅಪಾರವಾದ ಜ್ಞಾನದ ಅನನ್ಯತೆಯನ್ನು ಶೋಧಿಸುವ, ಸಂರಕ್ಷಿಸುವ ಹಾಗೂ ಸಂವರ್ಧಿಸುವ ಕಾರ್ಯಗಳು ಯಾವ ಕಾಲಕ್ಕೂ ಆಗಬೇಕಾದ ಕಾರ್ಯವೇ ಆಗಿದೆ. ಈ ಮಹತ್ವದ ಉದ್ದೇಶಗಳ ಈಡೇರಿಕೆಗಾಗಿ ಜಾನಪದ ವಿಶ್ವವಿದ್ಯಾಲಯದ ಸ್ಥಾಪನೆಯ ಅಗತ್ಯವಿತ್ತು. ನೆಲದ ಸಂಸ್ಕೃತಿಯನ್ನು ಉಸಿರಾಗಿಸಿಕೊಂಡು ಬದುಕುತ್ತಿರುವ ನಾಡಿನ ಸಮಸ್ತರ ಒಲವು ಮತ್ತು ನಿರೀಕ್ಷೆಗಳು ನಿಜವಾಗಬೇಕೆಂಬ ಮಹದಾಸೆಯೊಂದಿಗೆ ಜಗತ್ತಿನ ಪ್ರಪ್ರಥಮ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ. ಇದು ಕನ್ನಡದ ಮಟ್ಟಿಗೆ ಅಷ್ಟೇ ಅಲ್ಲ ದೇಶೀ ಸಂಸ್ಕೃತಿಯ ಮೂಲವನ್ನು ಶೋಧಿಸುವ ಮತ್ತು ಅದರ ಹರವು ವಿಸ್ತಾರಗೊಳ್ಳುವಂತೆ ಮಾಡಬೇಕಾದ ಮಹತ್ವದ ಜವಾಬ್ದಾರಿಯನ್ನು ಹೊತ್ತಿರುವುದರಿಂದ ವಿಶ್ವವಿದ್ಯಾಲಯದ ಸ್ಥಾಪನೆ ಚಾರಿತ್ರಿಕವಾಗಿ ಮಹತ್ವದ್ದೆನಿಸಿದೆ.

ಸಮಾಜದ ಎಲ್ಲ ಸಮುದಾಯಗಳ ಜ್ಞಾನ ಸಂಗ್ರಹಣೆ, ಸಂಪಾದನೆ, ಕಲಿಕೆ, ಪ್ರದರ್ಶನ ಕಾರ್ಯಗಳು ಇನ್ನೂ ತೀವ್ರಗತಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಪ್ರಮಾಣಬದ್ಧವಾಗಿ ಮತ್ತು ವೈಜ್ಞಾನಿಕವಾಗಿ ನಡೆಸುವ ಉದ್ದೇಶವೇ ವಿಶ್ವವಿದ್ಯಾಲಯದ ಮೂಲ ಧ್ಯೇಯವಾಗಿದೆ. ಬಹುಭಾಷಿಕ ಹಾಗೂ ಬಹುಸಂಸ್ಕೃತಿಗಳು ಇರುವ ನಾಡಿನಲ್ಲಿ ಇನ್ನೂ ಅನಾವರಣಗೊಳ್ಳಬೇಕಾದ ಜ್ಞಾನ ಸಂಪತ್ತು ಅಗಾಧ ಪ್ರಮಾಣದಲ್ಲಿದೆ. ಈವರೆಗೆ ಆದ ಜಾನಪದ ಕ್ಷೇತ್ರ ಸಂಬಂಧೀ ಕಾರ್ಯಗಳ ಬಗೆಗೆ ನಾವು ಅಷ್ಟೇನೂ ಬೀಗುವಂತಿಲ್ಲ. ಇನ್ನೂ ಆಗಬೇಕಾದ ಕೆಲಸ–ಕಾರ್ಯಗಳು ಬೇಕಾದಷ್ಟು ಇವೆ ಎಂಬ ವಿನಯದಿಂದಲೇ ಜಾನಪದ ವಿಶ್ವವಿದ್ಯಾಲಯ ಕಾರ್ಯಪ್ರವೃತ್ತವಾಗಿದೆ. ಜನಪದರ ಲೋಕದೃಷ್ಟಿ, ಅವರ ವಿವೇಕ ಹಾಗೂ ಜಾಗತೀಕರಣದಿಂದಾಗಿ ತೀವ್ರಗತಿಯಲ್ಲಿ ಬದಲಾಗುತ್ತಿರುವ ಪ್ರಪಂಚಕ್ಕೆ ಪರ್ಯಾಯ ದೇಶೀ ಜ್ಞಾನ ಆಕರವಾಗಿ ಅದರ ಪ್ರಸ್ತುತತೆಗೆ ವಿಶ್ವವಿದ್ಯಾಲಯ ವಿಶೇಷವಾಗಿ ಗಮನಹರಿಸಿದೆ. ಶಿಷ್ಟ ಭಾಷೆಯ ಯಾಜಮಾನ್ಯಕ್ಕೆ ಭಿನ್ನವಾಗಿ ಮೌಖಿಕತೆಯಲ್ಲಿನ ಸಾಂಸ್ಕೃತಿಕ ಅಭಿವ್ಯಕ್ತಿ ಹಾಗೂ ಮೌಖಿಕ ಸಂಕಥನಕ್ಕೆ ಹೆಚ್ಚು ಒತ್ತು ಕೊಡುವ ಜರೂರತ್ತು ನಮ್ಮ ಮುಂದಿದೆ.

ಜಾನಪದ ಎಂದರೆ ಆಧುನಿಕ ಜ್ಞಾನ ಮತ್ತು ತಂತ್ರಜ್ಞಾನಕ್ಕೆ ವಿರುದ್ಧವಾದುದು ಎಂಬ ತಿಳಿವಳಿಕೆ ಬಲವಾಗಿ ಬೇರೂರಿದೆ. ಅಷ್ಟೇ ಅಲ್ಲ ಹಳೆಯದನ್ನು ಸಂಗ್ರಹಿಸುವುದು, ಮುಂದಿನ ವರ್ಗಕ್ಕೆ ಕೂಡಿಟ್ಟು ಕೊಡುವುದು ಎಂಬ ಸ್ಥಾಪಿತ ತಿಳಿವಳಿಕೆಯ ಚೌಕಟ್ಟಿನಾಚೆಗೂ, ಜಾನಪದವನ್ನು ವಿಶಾಲ ಮನೋಭೂಮಿಕೆಯಲ್ಲಿ ಅರ್ಥೈಸಿಕೊಳ್ಳಬೇಕಾದುದು ಇಂದಿನ ಅಗತ್ಯ ವಾಗಿದೆ. ಜಾನಪದವು ಭೂಮಿತೂಕದ್ದು, ಆಕಾಶದಷ್ಟು ವಿಸ್ತಾರವಾದುದು, ನೀರಿನಷ್ಟು

ಚಲನಶೀಲವಾದುದು, ಗಾಳಿಯಂತೆ ನಮ್ಮ ಉಸಿರು ಎಂಬುದು ನಮ್ಮ ಅರಿವಿಗೆ ಬರಬೇಕಾಗಿದೆ. ಒಟ್ಟಿನಲ್ಲಿ ಜಾನಪದ ಎಂದರೆ ಎಲ್ಲವನ್ನೂ ಅಖಂಡವಾಗಿ ಅನುಸರಿಸಿದ ಒಂದು ಜೀವನ ವಿಧಾನ; ಜ್ಞಾನವನ್ನು ವಿಶೇಷ ರೀತಿಯಲ್ಲಿ ಹಂಚಿಕೊಂಡಿರುವ ಒಂದು ತವನಿಧಿಯಾಗಿದೆ. ಹಾಗಾಗಿ 'ಹೊನ್ನ ಬಿತ್ತೇವು ಹೊಲಕೆಲ್ಲ' ಎಂಬ ಧ್ಯೇಯ ವಾಕ್ಯವನ್ನು ತನ್ನ ಮೂಲಮಂತ್ರವಾಗಿಸಿಕೊಂಡು ವಿಶ್ವವಿದ್ಯಾಲಯ ಕಾರ್ಯೋನ್ಮುಖವಾಗಿದೆ. ಈವರೆಗೆ ಗುಪ್ತನಿಧಿಯಾಗಿದ್ದ ತವನಿಧಿ ಹೊನ್ನು ಈಗ ಜಗತ್ಪ್ರಕಟವಾಗಬೇಕಿದೆ. ವಿದ್ಯೆಯನ್ನು ಬೋಧಿಸುವುದು, ಸಂರಕ್ಷಿಸುವುದು ಅಷ್ಟೇ ಅಲ್ಲ ಹಂಚುವುದು–ಪ್ರಸರಣ ಮಾಡುವುದು ಜ್ಞಾನ ಕೇಂದ್ರವಾದ ವಿಶ್ವವಿದ್ಯಾಲಯದ ಮೂಲ ಗುರಿಯಾಗಿರಬೇಕು. ಈ ನಾಡು ಮೊದಲ ಬಾರಿಗೆ ವಿಶ್ವವಿದ್ಯಾಲಯದ ಮೂಲಕ ದೇಸೀ ಜ್ಞಾನಸಂಪತ್ತನ್ನು ಜಾಗತಿಕ ಪರಿಸರದಲ್ಲಿ ಬಿತ್ತುವ ಕಾರ್ಯಕ್ಕೆ ಕಂಕಣಬದ್ಧವಾಗಿದೆ. ಬಿತ್ತುವ, ಬೆಳೆಯುವ ಪ್ರಕ್ರಿಯೆ ಹೊಸಹುಟ್ಟಿಗೆ ನಾಂದಿ ಹಾಡುವುದಲ್ಲದೆ ಜ್ಞಾನಪರಂಪರೆಯ ಸತತ ಮುಂದುವರಿಕೆ ಸಂರಕ್ಷಣೆ, ಅಭಿವೃದ್ಧಿಯ ರೂಪವೂ ಆಗಿದೆ.

ಪಾರಂಪರಿಕ ಜ್ಞಾನ/ಸಮುದಾಯ ಜ್ಞಾನ ಮತ್ತು ಆಚರಣೆಯ ಮೂಲ ನೆಲೆಯಿಂದಲೇ ಈ ಹೊತ್ತಿನ ಜ್ಞಾನಪದ್ಧತಿ ಬೆಳೆದು ಬಂದಿದೆ. ಸಮುದಾಯ ಜ್ಞಾನದಿಂದ ತಂತ್ರಜ್ಞಾನ ಕೌಶಲಗಳ ಬಳಕೆಯನ್ವಯ ನಮ್ಮ ಗ್ರಾಮ ವ್ಯವಸ್ಥೆಯನ್ನು ಹೆಚ್ಚು ಉತ್ಪಾದಕವಾಗಿಯೂ, ಪ್ರಾಯೋಜಕವಾಗಿಯೂ, ದೃಢವಾಗಿಯೂ ರೂಢಿಸಬೇಕಾಗಿದೆ. ಆದರೆ ಇವೊತ್ತಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವದಿಂದಾಗಿ ಜಾನಪದದಲ್ಲಿ ತೀವ್ರ ಸ್ವರೂಪದ ಬದಲಾವಣೆಗಳು ಆಗಿವೆ. ಅದರಲ್ಲೂ ಉದ್ಯಮಪತಿತ್ವ ತನಗೆ ಬೇಕಾದ ಜ್ಞಾನವನ್ನು ಮಾತ್ರ ಸೆಳೆದುಕೊಂಡು ಲಾಭದಾಯಕವಲ್ಲದ್ದನ್ನು ಹಿಂದಕ್ಕೆ ತಳ್ಳುತ್ತಲೇ ಬರುತ್ತಿದೆ. ಪಾರಂಪರಿಕ ಜ್ಞಾನ –ವಿಜ್ಞಾನ ಕುರಿತು ಅತ್ಯಂತ ವೈಜ್ಞಾನಿಕ ತಳಹದಿಯ ಮೇಲೆ ಹಾಗೂ ವರ್ತಮಾನಕ್ಕೆ ಹೊಂದಿಕೆಯಾಗುವ ಅಧ್ಯಯನ ಮಾದರಿಗಳನ್ನು ರೂಪಿಸಿಕೊಳ್ಳುವುದು ಆವಶ್ಯಕವಾಗಿದೆ. ಬದಲಾದ ಸನ್ನಿವೇಶದಲ್ಲಿ ಜಾನಪದ ಎನ್ನುವುದು ನಿತ್ಯದ ಬದುಕಿನ ಒಡಲಾಳದಿಂದಲೇ ರೂಪಾಂತರವನ್ನು ಹೊಂದುತ್ತಿರುವುದರಿಂದ ಜಾನಪದದಲ್ಲಿಯೇ ಅದಕ್ಕೆ ಪರ್ಯಾಯವಾಗಿ, ಪ್ರತಿರೋಧ ಒಡ್ಡುವ ಶಕ್ತಿ ಇರುವುದನ್ನು ಗುರುತಿಸಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮದೇ ಜ್ಞಾನ, ಸಂಸ್ಕೃತಿಯನ್ನು ಆಧುನಿಕ ಸಂದರ್ಭಕ್ಕೆ ಅನ್ವಯಿಸಿಕೊಂಡು ನೋಡಲು ಯತ್ನಿಸಬೇಕಾಗಿದೆ. ಜನಪದರ ನಾಣ್ಣುಡಿಯಂತೆ, ಜ್ಞಾನ ಸಂಪಾದನೆಗೆ ಸಾಮಾನ್ಯವಾಗಿ ಅನುಸರಿಸುವ ಮಾರ್ಗಗಳು ಎರಡೇ; ಅವುಗಳಲ್ಲಿ ಒಂದು ದೇಶ ಸುತ್ತುವುದು, ಮತ್ತೊಂದು ಕೋಶ ಓದುವುದು. ಮನುಷ್ಯ ತನ್ನ ಜ್ಞಾನದಾಹವನ್ನು ನೀಗಿಸಿಕೊಳ್ಳಲು ಎರಡೂ ಮಾರ್ಗಗಳನ್ನು ಅನುಸರಿಸುವುದು ಅಗತ್ಯ. ಆದರೆ ಜ್ಞಾನ ಸಂಪಾದನೆಗೆ ಅವೆರೆಡರಲ್ಲಿ ಒಂದನ್ನಾದರೂ ಮಾಡಲೇಬೇಕು. ವಿಶ್ವವಿದ್ಯಾಲಯವು ಮೌಲಿಕವಾದ ಕೋಶಗಳನ್ನು ಪ್ರಕಟಿಸಿ ಓದುವಂತೆ ಪ್ರೇರೇಪಿಸುವ ಮೂಲಕ ಮಹತ್ವದ ಪ್ರಯತ್ನವನ್ನು ಮಾಡುತ್ತಿದೆ. ವಿಶ್ವವಿದ್ಯಾಲಯ ನೆಲಮೂಲವಾದ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ ಪರಂಪರೆಗಳ ಕುರಿತು ವಿಶೇಷ

ಅಧ್ಯಯನ, ಅಧ್ಯಾಪನ, ಸಂಶೋಧನೆ ಸೇರಿದಂತೆ ಹತ್ತು ಹಲವು ಕಾರ್ಯಯೋಜನೆಗಳನ್ನು ರೂಪಿಸಿಕೊಂಡು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಕೊಳ್ಳುತ್ತಲಿದೆ. ದೇಶೀ ಎನ್ನಬಹುದಾದ ಎಲ್ಲ ಜ್ಞಾನವನ್ನು ಸಂಗ್ರಹಿಸುವ, ನಿರಂತರವಾಗಿ ಚಲನಶೀಲಗೊಳ್ಳುವ ಜಾನಪದವನ್ನು ಅದೇ ನೆಲೆಯಿಂದಲೇ ಗ್ರಹಿಸಿ, ಹೊಸ ಹೊಸ ಜ್ಞಾನ ಶೋಧದೊಂದಿಗೆ ಜಾನಪದವನ್ನು ಇಟ್ಟು ನೋಡುವ ಮತ್ತೆ ಹೊಸದಾಗಿ ಕಟ್ಟಿಕೊಳ್ಳುವ ಕಾರ್ಯವನ್ನು ನೋಂಪಿಯಂತೆ ಮುನ್ನಡೆಸಿಕೊಂಡು ಹೋಗುವುದೇ ಜಾನಪದ ವಿಶ್ವವಿದ್ಯಾ ಲಯದ ಮೂಲ ಆಶಯವಾಗಿದೆ. ಅದರ ಭಾಗವಾಗಿ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಪುಸ್ತಕ ಪ್ರಕಟಣೆಗೆ ಮುಂದಾಗಿದೆ. ಈ ಮೂಲಕ ಅಂತರ್‌ಶಿಸ್ತೀಯ ಜ್ಞಾನಶೋಧದ ವಿನೂತನ ಮಾರ್ಗಗಳು ತೆರೆದುಕೊಳ್ಳಲು ವಿಶ್ವವಿದ್ಯಾಲಯ ನಾಂದಿ ಹಾಡಿದೆ.

ಜನಪದರಿಗೆ ಬದುಕು ಮತ್ತು ಕಲೆ ಬೇರೆ ಬೇರೆಯಲ್ಲ. ಆಧುನಿಕತೆಯ ಓಘಕ್ಕೆ ಸಿಲುಕಿರುವ ಜನಪದರು ತಮ್ಮ ಪರಂಪರಾಗತ ಕಲೆಗಳನ್ನು ಪೋಷಿಸಿಕೊಂಡು ಬರುವಲ್ಲಿ ಹೆಣಗಾಡುತ್ತಿದ್ದಾರೆ. ಅಲ್ಲದೆ, ಇಂದು ಕಲೆಯನ್ನೇ ನಂಬಿಕೊಂಡು ಜೀವನ ನಡೆಸುವ ಸ್ಥಿತಿಯಲ್ಲೂ ಕಲಾವಿದರಿಲ್ಲ. ಆದ್ದರಿಂದ ನೆಲಮೂಲಜ್ಞಾನ ಪರಂಪರೆ ಕಣ್ಮರೆಯಾಗುತ್ತಿದೆ. ಪಾರಂಪರಿಕ ಕಲೆಗಳು ಅಳಿವಿನಂಚಿನಲ್ಲಿವೆ. ಈ ನಡುವೇ ಪರಂಪರಾಗತ ಕಲೆಯನ್ನೇ ತಮ್ಮ ಜೀವನದ ಉಸಿರೆಂದು ಭಾವಿಸಿ, ಅದರ ಸಂರಕ್ಷಣೆ ಮತ್ತು ಸಂವರ್ಧನೆಗಾಗಿ ಶ್ರಮಿಸುತ್ತಿರುವ ಕಲಾವಿದರು ಇರುವುದು ಆಶಾದಾಯಕ ಬೆಳವಣಿಗೆ. ತೊಗಲುಗೊಂಬೆಯಂಥ ಅಪ್ಪಟ ಜನಪದ ಕಲೆಯನ್ನು ನಾಡಿನ ಮೂಲೆಮೂಲೆಗೂ ತಲುಪಿಸಿದ ಕೀರ್ತಿಗೆ ಭಾಜನರಾದ ಶ್ರೀ ಬೆಳಗಲ್ಲು ವೀರಣ್ಣ ಅವರು ಆ ಕಲೆಯನ್ನು ಪೋಷಿಸಿಕೊಂಡು ಬರುತ್ತಿರುವ ವಿರಳ ಕಲಾವಿದರಲ್ಲಿ ಅಗ್ರಗಣ್ಯರು. ಅವರ ಜೀವನದ ಏಳು–ಬೀಳುಗಳನ್ನು ಹಾಗೂ ಅವರ ಕಲಾಬದುಕಿನ ಯಶೋಗಾಥೆಯನ್ನು ಡಾ. ಎಂ.ಎನ್. ವೆಂಕಟೇಶ ಅವರು 'ಬೆಳಗಲು ವೀರಣ್ಣ' ಕೃತಿಯಲ್ಲಿ ಅಚ್ಚುಕಟ್ಟಾಗಿ ನಿರೂಪಿಸಿದ್ದಾರೆ. ಬೆಳಗಲ್ಲು ವೀರಣ್ಣ ಹಾಗೂ ಅವರ ಜೀವನದ ಮುಖ್ಯ ಉಸಿರೇ ಆಗಿರುವ ತೊಗಲುಗೊಂಬೆಯಾಟ ಕಲೆಯ ಬಗ್ಗೆ ಅರಿಯಲು ಈ ಕೃತಿ ಸಹಾಯಕವಾಗಿದೆ. ಕೃತಿಯನ್ನು ರಚಿಸಿಕೊಟ್ಟಿರುವ ಡಾ. ಎಂ.ಎನ್. ವೆಂಕಟೇಶ ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತುವಲ್ಲಿ ತುಂಬ ಮುತುವರ್ಜಿ ವಹಿಸಿದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರೂ, ಮೌಲ್ಯಮಾಪನ ಕುಲಸಚಿವರೂ ಆದ ಪ್ರೊ. ಸ.ಚಿ. ರಮೇಶ ಹಾಗೂ ಸಿಬ್ಬಂದಿ ವರ್ಗಕ್ಕೆ ಅಭಿನಂದನೆಗಳು

ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

[illegible]

[illegible]

[illegible]

[illegible]

ನಿರ್ದೇಶಕರ ಮಾತು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಸಮಾಜದ ಸಮಸ್ತ ಸಮುದಾಯಗಳ ಜ್ಞಾನ ಸಂಗ್ರಹಣೆ, ಅಧ್ಯಯನ, ಅಧ್ಯಾಪನ, ಸಂಶೋಧನೆಯಂತ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ರೂಪಿಸಿಕೊಂಡು ಕಾರ್ಯ ಪ್ರವೃತ್ತವಾಗಿದೆ. ವಿಶ್ವವಿದ್ಯಾಲಯವು ಇನ್ನೊಂದು ಹೆಜ್ಜೆ ಮುಂದೆ ಹೋಗಿ ತನ್ನ ಕಾರ್ಯಕ್ಷೇತ್ರಗಳನ್ನು ವಿಸ್ತರಿಸಿಕೊಳ್ಳುವ ಭಾಗವಾಗಿ 'ವಿಸ್ತರಣೆ ಹಾಗೂ ಸಲಹಾ ಕೇಂದ್ರ' ವನ್ನು ಆರಂಭಿಸಿದೆ. ವಿಶ್ವವಿದ್ಯಾಲಯಗಳು ನಿಜವಾದ ಅರ್ಥದಲ್ಲಿ ಜ್ಞಾನದ ಪುನರುತ್ಪಾದನೆಯಲ್ಲಿ ತೊಡಗಿಕೊಳ್ಳಬೇಕು. ಸ್ಥಾಪಿತ ಸಿದ್ಧ ಜ್ಞಾನದ ಸಂಗ್ರಹದ ಜೊತೆಗೆ ನಿತ್ಯನೂತನವಾದ ಜನಪದ ಸಂಸ್ಕೃತಿಯನ್ನು ಪುನರ್‌ನಿರ್ವಚಿಸುವ, ಹೊಸ ರೀತಿಯಲ್ಲಿ ಸ್ಥಾಪಿತಗೊಳಿಸುವ ಕೈಂಕರ್ಯಕ್ಕೆ ಕೈ ಹಾಕಬೇಕು. ಋತುಮಾನಗಳು ಬದಲಾದಂತೆ ಮನುಷ್ಯ ಬದುಕು ಬದಲಾಗುತ್ತಲೇ ಸಂವೇದನಾಶೀಲಗೊಳ್ಳುತ್ತ ಹೋಗುತ್ತದೆ. ನಮ್ಮ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿಗಳು ತನ್ನತನದ ಛಾಯೆಯನ್ನು ಕಳೆದುಕೊಳ್ಳುತ್ತ ನಡೆದ ಇವೊತ್ತಿನ ಸಂದಿಗ್ಧತೆಯಲ್ಲಿ ನಾವು ಮಾಡುವ ವಿನೂತನ ಜ್ಞಾನಶೋಧಗಳು, ಪ್ರಯೋಗಗಳು ಕಳೆಗುಂದುತ್ತಿರುವ ಜನಪದ ಸಂಸ್ಕೃತಿಯನ್ನು ಕಳೆಗಟ್ಟುವಂತೆ ಮಾಡದೇ ಹೋದರೆ ನಮ್ಮ ಪ್ರಯತ್ನಗಳು ನಿರರ್ಥಕ. ಆ ಎಚ್ಚರಿಕೆಯನ್ನು ಇಟ್ಟುಕೊಂಡೇ ಜಾನಪದ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಅತ್ಯುಪಯುಕ್ತ ಕಾರ್ಯಯೋಜನೆಗಳನ್ನು ರೂಪಿಸಿದೆ.

ಅಂತರ್‌ಶಿಸ್ತೀಯ ಜ್ಞಾನ ಶಾಖೆಗಳಲ್ಲಿ ಜಾನಪದವೂ ಒಂದು. ನೆಲಮೂಲ ಜೀವನ, ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಹೊಸ ಹೊಸ ಜ್ಞಾನವನ್ನು ಶೋಧಿಸಿ, ಜಗತ್ತಿನ ಮೂಲೆ ಮೂಲೆಗೆ ತಲುಪಿಸುವ ಗುರುತರ ಜವಾಬ್ದಾರಿ ವಿಶ್ವವಿದ್ಯಾಲಯದ ಮೇಲಿದೆ. ಅದನ್ನು ಸಾಧ್ಯವಾಗಿಸುವ ಉದ್ದೇಶ ಇಟ್ಟುಕೊಂಡೇ ಆರಂಭವಾದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರವು ಜಾನಪದ ಕ್ಷೇತ್ರದ ಬಾಹುಳ್ಯತೆ, ವಿಶ್ವವ್ಯಾಪಕತೆ, ಅದರ ಮೂಲ-ಚೂಲಗಳನ್ನು ಕಂಡರಿಸುವ ಪ್ರಯತ್ನ ಮಾಡುವ ಮಹದಾಸೆ ಹೊಂದಿದೆ. ಜೊತೆಗೆ ಹೊಸ ಅಧ್ಯಯನಗಳು, ನೂತನ ಮಾದರಿಯ ಸಂಶೋಧನೆಗಳು, ನಾಡಿನ ಶ್ರೇಷ್ಠ ವಿದ್ವಾಂಸರ ಕೃತಿಗಳನ್ನು ಪ್ರಕಟಿಸುವ ಮೂಲಕ ಜ್ಞಾನ ಪ್ರಸಾರದ ಉದ್ದೇಶಕ್ಕೆ ಒತ್ತಾಸೆಯಾಗಿ ನಿಲ್ಲಲಿದೆ. ಕೇಂದ್ರವು ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಮೌಲಿಕವಾದ ಪುಸ್ತಕಗಳ ಪ್ರಕಟಣೆಗೆ ಮುಂದಾಗಿದೆ. ನಾವು ಪ್ರಕಟಮಾಡುವ ವೈವಿಧ್ಯಪೂರ್ಣವಾದ ಮೌಲಿಕ ಕೃತಿಗಳು ನಾಡಿನ ಓದುಗರಿಗೆ ತಲುಪಿ, ಅವು ಸದುಪಯೋಗವಾದರೆ ಮಾತ್ರ ನಮ್ಮ ಶ್ರಮ ಸಾರ್ಥಕ ಎಂದು ಭಾವಿಸುತ್ತೇನೆ.

ತೊಗಲುಗೊಂಬೆ ಕಲೆಯು ಅತ್ಯಂತ ಪ್ರಾಚೀನ ಜನಪದ ಕಲೆ. ವರ್ತಮಾನದ ವಿದ್ಯಮಾನಗಳಿಗೆ ಸ್ಪಂದಿಸುವ ಕಲೆಗಳೆಲ್ಲವೂ ಜೀವಂತವಾಗಿರುತ್ತವೆ. ಇಂದಿಗೂ ಅಸ್ತಿತ್ವದಲ್ಲಿರುವ ಪರಂಪರಾಗತ ಕಲೆಗಳಲ್ಲಿ ತೊಗಲುಗೊಂಬೆ ಕಲೆಯು ಒಂದು. ಮೂಲ ಜನಪದ ಕಲಾವಿದರು ಪರಂಪರಾಗತ ಕಲೆಗಳನ್ನು ನಂಬಿಕೊಂಡು ಜೀವನ ನಡೆಸುವುದು ಇಂದು ದುಸ್ತರವಾಗಿದೆ. ಕಲಾವಿದರು ಹಾಗೂ ಕಲಾಪೋಷಕರಿಂದಲೇ ಕಲೆಗಳ ಸಂರಕ್ಷಣೆ ಮತ್ತು ಸಂವರ್ಧನೆ ಸಾಧ್ಯ. ಆದರೆ, ಇಂದಿನ ದಿನಗಳಲ್ಲಿ ಕಲಾವಿದರು ಬದುಕಿದ್ದರೂ ಕಲೆಗಳು ಮಾತ್ರ ಕಣ್ಮರೆಯಾಗುತ್ತಿರುವುದು ತೀವ್ರ ಕಳವಳಕಾರಿ ಸಂಗತಿ. ಶ್ರೀ ಬೆಳಗಲ್ಲು ವೀರಣ್ಣ ಅವರು ತೊಗಲುಗೊಂಬೆ ಕಲೆಯನ್ನು ಸಮಕಾಲಿನಗೊಳಿಸಿ, ಪ್ರಯೋಗಿಸಿ ಜೀವಂತಗೊಳಿಸಿದ್ದಾರೆ. 'ತೊಗಲುಗೊಂಬೆ ಅಂದರೆ ವೀರಣ್ಣನವರು, ವೀರಣ್ಣನವರು ಅಂದರೆ ತೊಗಲುಗೊಂಬೆ' ಎನ್ನುವಂತೆ ಅವರು ತೊಗಲುಗೊಂಬೆ ಕಲೆಯನ್ನು ನಾಡಿನ ತುಂಬ ಪ್ರಸಿದ್ಧಗೊಳಿದ್ದಾರೆ. ವೀರಣ್ಣನವರ ಕಲಾಬದುಕಿನ ಚಿತ್ರಣವನ್ನು ಡಾ. ಎಂ.ಎನ್. ವೆಂಕಟೇಶ ಅವರು 'ಬೆಳಗಲ್ಲು ವೀರಣ್ಣ' ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ವೀರಣ್ಣನವರ ಕಲಾಜೀವನವನ್ನು ವಾಚಕವಲಯಕ್ಕೆ ಒದಗುವಂತೆ ಮಾಡಿದ ಡಾ. ಎಂ.ಎನ್. ವೆಂಕಟೇಶ ಅವರಿಗೆ ಕೃತಜ್ಞತೆಗಳು ಸಲ್ಲಬೇಕು.

ಈ ಗ್ರಂಥವು ಅಚ್ಚುಕಟ್ಟಾಗಿ ಪ್ರಕಟಗೊಳ್ಳಲು ಸರ್ವ ರೀತಿಯಲ್ಲೂ ಸಹಕಾರ ನೀಡಿದ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಯವರಾದ ಪ್ರೊ. ಅಂಬಳಿಕೆ ಹಿರಿಯಣ್ಣ ಅವರಿಗೆ, ಕುಲಸಚಿವರಾದ ಪ್ರೊ. ಡಿ.ಬಿ. ನಾಯಕ, ನಿರ್ದೇಶಕ ಹಾಗೂ ಪ್ರಾಧ್ಯಾಪಕ ಡಾ. ಕೆ. ಪ್ರೇಮಕುಮಾರ, ಅನ್ವಯಿಕ ಜಾನಪದ ನಿಕಾಯದ ಡೀನ್‌ರಾದ ಪ್ರೊ. ಎಂ. ಚಂದ್ರ ಪೂಜಾರಿ, ತಾಂತ್ರಿಕ ಪುಟಗಳ ಸಿದ್ಧತೆ ಹಾಗೂ ಮುದ್ರಣಪೂರ್ವ ಕೆಲಸಗಳಲ್ಲಿ ಸಹಕರಿಸಿದ ಶ್ರೀ ಸಂಗಮೇಶ ಎಸ್. ಗಣಿ, ಅಕ್ಷರ ಸಂಯೋಜನೆ ಮಾಡಿಕೊಟ್ಟ ಶ್ರೀ ವಿಶ್ವ ಗುಜ್ಜರ್, ಅಂದವಾದ ಮುಖಪುಟ ವಿನ್ಯಾಸ ಮಾಡಿಕೊಟ್ಟ ಶ್ರೀ ಕೆ.ಕೆ. ಮಕಾಳಿ, ಕಚೇರಿ ಸಹಾಯಕ ಶ್ರೀ ಕೆ.ಎಲ್. ಲಕ್ಷ್ಮಣ ಅವರಿಗೆ ಹಾಗೂ ಗ್ರಂಥವು ಪ್ರಕಟಗೊಳ್ಳುವಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಶ್ರಮಿಸಿದ ಎಲ್ಲರಿಗೂ ಕೃತಜ್ಞತೆಗಳು.

ಪ್ರೊ. ಸ.ಚಿ. ರಮೇಶ
ನಿರ್ದೇಶಕ
ವಿಸ್ತರಣೆ ಹಾಗೂ ಸಲಹಾ ಕೇಂದ್ರ

ಕೃತಜ್ಞತೆಗಳು

ಕಲಾವಿದರೊಂದಿಗಿನ ಸಂವಾದದ 'ಪಟ್ಟಾಂಗ' ಕಾರ್ಯಕ್ರಮದಲ್ಲಿ 'ಕರ್ನಾಟಕ ಜಾನಪದ ವಿಶ್ವವಿದ್ಯಾಲಯ'ದ ಅತ್ಯಂತ ಮಹತ್ವಪೂರ್ಣವಾದ ಕಾರ್ಯಗಳಲ್ಲಿ ಒಂದು. ಇದರಲ್ಲಿ ಪಾಲ್ಗೊಳ್ಳುವ ಕಲಾವಿದರೆಲ್ಲ ನಾಡಿನಾದ್ಯಂತ ಹೆಸರು ಮಾಡಿರುವ ಹಾಗೂ ಬಹುತೇಕ ತಮ್ಮ ಜೀವನವನ್ನು ಕಲಾಸೇವೆಗಾಗಿ ಮುಡಿಪಿಟ್ಟ ಜನಪದ ಕಲಾವಿದರಾಗಿದ್ದಾರೆ.

ಇಂತಹ ಮಹತ್ವದ ಕಾರ್ಯಕ್ರಮದ ಸಂಯೋಜಕನಾಗಿ ಅತ್ಯಂತ ಭಾವಪೂರ್ಣ ಸಂವಾದಗಳಿಗೆ ಸಾಕ್ಷಿಯಾಗುವ ಹಾಗೂ ಮಹತ್ವದ ಕಲಾವಿದರ ಬದುಕಿನ ಸ್ಮರಣೀಯ ಕ್ಷಣಗಳನ್ನು ದಾಖಲಿಸುವ ಅವಕಾಶ ಒದಗಿಸಿದ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಸನ್ಮಾನ್ಯ ಕುಲಪತಿಗಳಾದ ಪ್ರೊ. ಅಂಬಳಿಕೆ ಹಿರಿಯಣ್ಣ ಅವರಿಗೆ ಹೃದಯಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ವಿಸ್ತರಣೆ ಹಾಗೂ ಸಲಹಾಕೇಂದ್ರದ ನಿರ್ದೇಶಕರೂ, ಕುಲಸಚಿವರು (ಮೌಲ್ಯಮಾಪನ) ಹಾಗೂ ಈ ಕೃತಿಯ ಪ್ರಕಟಣೆಗೆ ಕಾರಣಕರ್ತರೂ ಆದ ಮಿತ್ರ ಪ್ರೊ. ಸ.ಚಿ. ರಮೇಶ ಅವರಿಗೂ, ಇದಕ್ಕೆ ಪ್ರೇರಕರಾದ ಹಿರಿಯ ಸಂಶೋಧನಾ ಅಧಿಕಾರಿ ಡಾ. ಕೆ. ಪ್ರೇಮಕುಮಾರ್ ಅವರಿಗೂ ಆಡಳಿತಾಂಗದ ಚುಕ್ಕಾಣಿ ಹಿಡಿದ ಕುಲಸಚಿವರಾದ ಪ್ರೊ. ಸಿ.ಎ. ಸೋಮಶೇಖರಪ್ಪ ಅವರಿಗೂ ನಾನು ಆತ್ಮೀಯವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ.

ಜಾನಪದ ವಿಶ್ವವಿದ್ಯಾಲಯದ ಪ್ರತಿಯೊಬ್ಬ ಸಹೋದ್ಯೋಗಿಯೂ ನನ್ನೊಂದಿಗೆ ಅತ್ಯಂತ ಆತ್ಮೀಯ ಬಾಂಧವ್ಯವಿರಿಸಿಕೊಂಡಿದ್ದು ನಾನು ಇಲ್ಲಿ ಕೆಲಸ ಮಾಡಿದಷ್ಟು ದಿನವೂ ಅರ್ಥಪೂರ್ಣವಾದ ಕಾರ್ಯಚಟುವಟಿಕೆಯಲ್ಲಿ ತೊಡಗಿಕೊಳ್ಳಲು ಸಹಕಾರ ನೀಡಿದ್ದಾರೆ. ಅವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇನೆ. ಇನ್ನು ನನ್ನ ಸಂಶೋಧನಾ ಚಿಂತನೆಗಳು ಚರ್ಚಿತವಾಗುವುದು ನನ್ನ ವಿದ್ಯಾರ್ಥಿವೃಂದದ ಜೊತೆ. ನನ್ನ ಎಂ.ಎ. ವಿದ್ಯಾರ್ಥಿಗಳು, ಎಂ.ಫಿಲ್ ಮತ್ತು ಪಿಎಚ್.ಡಿ. ವಿದ್ಯಾರ್ಥಿಗಳು ನನ್ನ ಕೃತಿಗಳ ಬಗ್ಗೆ ಪ್ರಕಟಣಾ ಪೂರ್ವದಲ್ಲಿ ಬಹಳಷ್ಟು ಚರ್ಚೆ ಮಾಡಿರುತ್ತಾರೆ. ಅವರಿಗೆ ಕೃತಜ್ಞತೆಗಳು.

ನಾನು ಚಿಕ್ಕ ಅಪಘಾತದಲ್ಲಿ ಬಲಗೈಗೆ ಪೆಟ್ಟುಮಾಡಿಕೊಂಡು ಬರೆಯಲಾಗದ ಸ್ಥಿತಿಯಲ್ಲಿದ್ದಾಗ ನನ್ನ ಶಿಷ್ಯ ಮಾರುತಿ ಎನ್. ಕರ್ಜಗಿ ಅವರು ಬೆಳಗಲ್ಲು ವೀರಣ್ಣ

ಅವರ ಸಂವಾದದ ಮಾತುಗಳನ್ನು Voice Recorder ನಿಂದ ಬರಹರೂಪಕ್ಕಿಳಿಸಿ, ನಂತರ ಅದನ್ನು ಈ ಕೃತಿರೂಪಕ್ಕೆ ಸಿದ್ಧಪಡಿಸುವಾಗ ನಾನು ಹೇಳಿದ್ದನ್ನು ನಿಷ್ಠೆಯಿಂದ ಲಿಪಿರೂಪದಲ್ಲಿ ಬರಹಕ್ಕಿಳಿಸಿದ್ದಾರೆ. ಅವರಿಗೆ ವಿಶೇಷ ಕೃತಜ್ಞತೆಗಳು.

ಇನ್ನು ನನ್ನ ಎಲ್ಲ ಕೆಲಸದಲ್ಲಿ ಸಹಭಾಗಿತ್ವ ತೋರುವ ನನ್ನ ಸಹಧರ್ಮಿಣಿ ಮಾಲಾ ಹಾಗೂ ಮಕ್ಕಳಾದ ಅಭಿಲಾಷ ಹಾಗೂ ಆದರ್ಶರಿಗೆ ಸಪ್ರೇಮ ನೆನಕೆಗಳು.

ಎಲೆಮರೆಯ ಕಾಯಂತೆ ಇರುವ ಅನೇಕ ಜನಪದ ಕಲಾವಿದರ ಬದುಕಿನ ಬವಣೆಯೂ ಇದೇ ರೀತಿ ಕೃತಿರೂಪದಲ್ಲಿ ಪ್ರಕಟಗೊಳ್ಳಲಿ ಎಂದು ಹಾರೈಸುತ್ತಾ ಈ ಕೃತಿಯನ್ನು ಜನಪದರ ಪದತಲದಲ್ಲಿ ಅರ್ಪಿಸುತ್ತಿದ್ದೇನೆ.

ಡಾ. ಎಂ.ಎನ್. ವೆಂಕಟೇಶ

ಪರಿವಿಡಿ

೧. ಜನಪದರ ಅದ್ಭುತ ಜ್ಞಾನ ಜಗತ್ತು

ನಿಸರ್ಗ ನಮಗಿತ್ತ ಸುಂದರ ಪರಿಸರದ ನಡುವೆ ಬದುಕು ಕಟ್ಟಿಕೊಳ್ಳುವ ಹಾಗೂ ಆ ಮೂಲಕ ನಮ್ಮ ಮಾನಸಿಕ ನೆಮ್ಮದಿಯನ್ನು ಸಂತೋಷವನ್ನು ಹಂಚಿಕೊಳ್ಳುವ ಅದ್ಭುತ ಅವಕಾಶವನ್ನು ನಮಗೆ ಪ್ರಕೃತಿ ನೀಡಿದೆ. ಬದುಕೆಂಬುದು ಎಂದಿಗೂ ಕೇವಲ ಸುಂದರ ಕನಸುಗಳ ಸೌಧವಲ್ಲ. ಹಿಡಿ ಕೂಳಿಗೂ ಬೆವರು ಹರಿಸಿ ದುಡಿಯಬೇಕಾದ ಅನಿವಾರ್ಯತೆ ಇದೆ. ಜನಪದ ಜಗತ್ತಿನಲ್ಲಿ ಸುಂದರ ರಾಜಕುಮಾರ, ರಾಜಕುಮಾರಿಯರ ಬದುಕು ಅದ್ಭುತ ಕಿನ್ನರ ಕತೆಗಳಲ್ಲಿ ಭ್ರಮೆಗಳನ್ನು ಸೃಷ್ಟಿಸುವಂತಹುದೇ ಆಗಿದೆ. ಆದರೆ ಜನಪದರ ನಿಜ ಬದುಕು ನಿತ್ಯಸಂಕಟದ ದುಡಿಮೆಯ ಬದುಕು.

ಆದರೆ ಬದುಕಿನ ಬವಣೆಗಳ ನಡುವೆಯೂ ಜನಪದರು ತಮ್ಮದೇ ಆದ ಮನರಂಜನಾ ಲೋಕವನ್ನು ಸೃಷ್ಟಿಸಿಕೊಂಡಿರುತ್ತಾರೆ. ಅವರ ದೈನಂದಿನ ಬಡತನದ ಕಾರ್ಪಣ್ಯಗಳ ನಡುವೆಯೂ ಕಲಾವಿದರನ್ನು ಕೊಂಡಾಡುವ ಒಳ್ಳೆಯ ಮನಸ್ಸು ಜನಪದರಿಗಿರುತ್ತದೆ. ಅವರ ಮನರಂಜನೆಯ ಬದುಕೆಲ್ಲ ದೈಹಿಕಶ್ರಮದ ದಿನಗಳ ನಡುವಿನ ಇರುಳಿನ ವಿರಾಮದ ಕ್ಷಣಗಳಲ್ಲಿ ಮಾತ್ರವೇ ಅಡಗಿರುತ್ತದೆ. ಜೋಗಿ ಕತೆಯಾಗಲಿ, ಯಕ್ಷಗಾನ ಬಯಲಾಟಗಳೇ ಆಗಲಿ, ಸಣ್ಣಾಟ ಕೇಳಿಕೆಗಳಾಗಲಿ, ಪುರಾಣ ಪುರುಷರ ಪಾತ್ರಗಳನ್ನು ಬಿಡಿಸಿಡುತ್ತಾ ದಣಿದ ಜನಪದರ ಮನವರಳಿಸುತ್ತಾ ಮುದ ನೀಡುವ ಕೆಲಸ ಮಾಡುತ್ತವೆ. ಬದುಕಿನ ಮೌಲ್ಯಗಳನ್ನು ಹಿರಿಯ ತಲೆಮಾರು ಕಿರಿಯ ತಲೆಮಾರಿಗೆ ಕಲಿಸಿಕೊಡುವ ಮಾಧ್ಯಮವಾಗಿ ಈ ಜನಪದ ಪ್ರದರ್ಶನ ಕಲೆ ಕೆಲಸ ಮಾಡುತ್ತದೆ.

ಇವೆಲ್ಲದರ ನಡುವೆ ಅದ್ಭುತ ಜನಪದ ತಾಂತ್ರಿಕ ಕೌಶಲ್ಯಗಳಿಂದ ಕೂಡಿದ, ಜನಪದರ ತಾತ್ವಿಕ ಮೌಲ್ಯಗಳ ಬೋಧನೆಗೆಂದು ಮೀಸಲಾದ, ಅದ್ಭುತ ಕಲಾಕಾರರ ಕಲಾಶಕ್ತಿಗೆ ಸವಾಲೆಸೆಯುವಂತಹ ಜೀವಂತ ಜನಪದ ಕಲೆ ತೊಗಲುಗೊಂಬೆಯಾಟ. ತೆಲುಗಿನಲ್ಲಿ ತೋಲು ಬೊಮ್ಮಲಾಟ ಎನಿಸಿಕೊಳ್ಳುವ ಈ ಕಲೆ ಹಿಮ್ಮೇಳದಲ್ಲಿ ಯಕ್ಷಗಾನದ ಹಿಮ್ಮೇಳವನ್ನು ಹೋಲುತ್ತದೆ. ಸಾಹಿತ್ಯದಲ್ಲಿ ದೊಡ್ಡಾಟದ ಮತ್ತು ಯಕ್ಷಗಾನದ ಸಂಭಾಷಣಾ ಶೈಲಿಗಳನ್ನೇ ಹೊಂದಿರುತ್ತದೆ. ಇಲ್ಲಿ ಕುಣಿಯುವುದು ಮಾತ್ರ ನರಮಾನವರಲ್ಲ. ಕೆಲವೊಮ್ಮೆ ಬಣ್ಣದ ಚಿತ್ತಾರಗಳಿಂದ ಕೂಡಿದ ತೊಗಲಿನ ಬೊಂಬೆಗಳು ಮತ್ತೆ ಕೆಲವೊಮ್ಮೆ ಕಟ್ಟಿಗೆಯಿಂದ ಮಾಡಿದ ಗೊಂಬೆಗಳು ಇಲ್ಲಿ ಕುಣಿಯುತ್ತವೆ. ಇವನ್ನು ತೆಲುಗಿನಲ್ಲಿ ಚೆಕ್ಕಬೊಮ್ಮಲಾಟ ಎನ್ನುತ್ತಾರೆ. ಸೂತ್ರದ ದಾರಗಳಿಂದ ಕುಣಿಯುವ ಬೊಂಬೆಗಳನ್ನು ಸೂತ್ರದ ಗೊಂಬೆಯಾಟದಲ್ಲಿ ಬಳಸುತ್ತಾರೆ.

ನೆರಳು ಬೆಳಕಿನ ಅದ್ಭುತ ಸಂಯೋಜನೆಯ ತೊಗಲುಗೊಂಬೆಯಾಟ ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿದೆ. ಇದು ಕಿಳ್ಳೆಕ್ಯಾತರು ಅಥವಾ ಗೊಂಬೆರಾಮರು

ಎಂಬ ವೃತ್ತಿಆಧಾರಿತ ಜಾತಿಯೊಂದರ ಸ್ವಂತ ಆಸ್ತಿ. ಜನಪದರ ತಂತ್ರಗಾರಿಕೆಗೆ, ಕರಕೌಶಲ್ಯಕ್ಕೆ, ಕಲಾಪ್ರೌಢಿಮೆಗೆ ಜೀವಂತ ಸಾಕ್ಷಿ ಈ ಕಲೆ. ಇದರಲ್ಲಿನ ಪ್ರಸಂಗಗಳು ಸಾಮಾನ್ಯವಾಗಿ ರಾಮಾಯಣವನ್ನು ಆಧರಿಸುವಂತದ್ದು. ಅದರಲ್ಲಿಯೂ ಆಂಜನೇಯನ ಸಾಹಸಗಳು ಈ ಪ್ರಸಂಗಕರ್ತರಿಗೆ ಬಹುಪ್ರಿಯ.

ಆದರೆ ಕಾಲಾಂತರದಲ್ಲಿ ವಿವಿಧ ಪೌರಾಣಿಕ ಹಾಗೂ ಐತಿಹಾಸಿಕ ಕಲಾ ಪ್ರಸಂಗಗಳು ಇದರಲ್ಲಿ ಬೆರತುಬಂದಿವೆ.

ಇಂತಹ ಕಲಾಮಾಧ್ಯಮವೊಂದನ್ನು ಸಮಕಾಲೀನ ಆಶಯಗಳಿಗೆ ಸ್ಪಂದಿಸುವಂತೆ ಅಗತ್ಯ ಮಾರ್ಪಾಡುಗಳನ್ನು ಮಾಡಿಕೊಂಡು ನಮ್ಮ ಸ್ಥಳೀಯ ಕಲೆಯೊಂದನ್ನು ಸಮುದ್ರದ ಆಚೆಯ ನಾಡಿನಲ್ಲೂ ಪ್ರದರ್ಶಿಸಿ ಬಂದ ಹಿರಿಮೆ ಬೆಳಗಲ್ಲು ವೀರಣ್ಣ ಅವರದ್ದು.

Puppetry ಮತ್ತು Puppet Show ಎಂಬುದು ವಿಶ್ವವ್ಯಾಪಿ ಕಾಣಬರುವ ಜನಪದ ಕಲಾವಿಸ್ಮಯ. ಜಪಾನ್‌ನಲ್ಲಿ ಕೂಡ ಈ ಕಲೆ ಪಾರಂಪರಿಕವಾಗಿ ಬಹಳ ಪ್ರಾಮುಖ್ಯತೆ ಪಡೆದಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿ ಬಯಸುವವರು ಎಸ್.ಎ. ಕೃಷ್ಣಯ್ಯನವರ ಕೃತಿಯನ್ನು ಗಮನಿಸಬಹುದು.

ಕರ್ನಾಟಕದಲ್ಲಿ ಭಾಸ್ಕರ ಕೊಗ್ಗ ಕಾಮತ್‌ರ ಹಾಗೂ ಗೊಂಬೆಮನೆಯ ಪ್ರಕಾಶ ಗರುಡ ಅವರ ತಂಡಗಳು ಆಧುನಿಕ ಜಗತ್ತಿನ ಕರೆಗಳಿಗೆ ಓಗೊಟ್ಟ ಗೊಂಬೆಯಾಟದ ತಂಡಗಳು. ರಾಣೆಬೆನ್ನೂರಿನ ಬಳಿಯ ಅಂತರವಳ್ಳಿಯ ಜೀವನಗೌಡ್ರ ರಾಮನಗೌಡ್ರ ಅವರು ಗೊಂಬೆಗೌಡ್ರ ಎಂದೇ ಖ್ಯಾತರಾಗಿದ್ದು ಪಾರಂಪರಿಕ ಪದ್ಧತಿಯ ಗೊಂಬೆಯಾಟದ ತಂಡಕ್ಕೆ ನಿದರ್ಶನವಾಗಿದ್ದಾರೆ. ಗದಗನಲ್ಲಿಯೂ ಕೂಡ ಈ ತರಹದ ತಂಡವೊಂದಿದೆ.

ಆಂಧ್ರದಲ್ಲಿ ಅನಂತಪುರಂ ಧರ್ಮಾವರಂ ನಡುವೆ ನಿಮ್ಮಲ್‌ಕುಂಟೆ ಎಂಬ ಹಳ್ಳಿಯೊಂದಿದೆ. ತೊಗಲುಗೊಂಬೆಗಳ ಸೃಷ್ಟಿ ಹಾಗೂ ಜಾಗತೀಕರಣದ ಈ ದಿನಗಳಲ್ಲಿ ಅದನ್ನು ತಯಾರಿಸುವ ಗೊಂಬೆರಾಮರ ಬದುಕಿನ ದುಃಸ್ಥಿತಿ ಅರಿಯಬೇಕೆಂದರೆ ಆ ಹಳ್ಳಿಯನ್ನು ಒಮ್ಮೆ ದರ್ಶಿಸಬೇಕು. ಬಡತನದ ನಡುವೆ ಆರ್ಥಿಕ ಅವಲಂಬನೆಗೆ ಬೇರೆ ದಾರಿಕಾಣದೇ, ತೊಗಲಿನಿಂದ ರಾಮ–ಆಂಜನೇಯರ ಚಿತ್ರಗಳನ್ನು ತಯಾರಿಸಿ ಅದರಿಂದ ಹೊಟ್ಟೆ ತುಂಬಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಅರ್ಥೈಸಿಕೊಂಡ ಇವರು ಮನೆಗಳ ಗೋಡೆಗಳನ್ನು ಅಲಂಕರಿಸುವ ರಾಧಾ–ಕೃಷ್ಣರ, ಗೋವು–ಗೋಪಾಲಕರ ಚಿತ್ರಗಳನ್ನು ರಚಿಸಿ ಮಾರಾಟ ಮಾಡುತ್ತಿದ್ದಾರೆ. ಸುಂದರವಾದ ಟೇಬಲ್ ಲ್ಯಾಂಪ್‌ಗಳ ಬಣ್ಣದ ಕವರ್‌ಗಳನ್ನು ಮಾಡುತ್ತಿದ್ದಾರೆ. ಇವರು ತಯಾರಿಸುವ ಶೋಕೇಸ್ ಐಟಮ್‌ಗಳಿಗೆ ಒಳ್ಳೆಯ ಬೆಲೆ ಇದೆ.

ಇದು ಕಲಾವಿದರ ಬದುಕಿನ ಅನಿವಾರ್ಯತೆ. ತಮಗೆ ಗೊತ್ತಿದ್ದ ಕಲೆಯನ್ನು ಜಾಣತನದಿಂದ ಬಳಸಿಕೊಂಡು ಬದುಕುವ ಪ್ರಯತ್ನ ಇವರದ್ದು. ಆದರೆ ಇಲ್ಲಿ ಜನಪದ ಪ್ರದರ್ಶನ ಕಲೆಯೊಂದು ನಿಧಾನವಾಗಿ ಸದ್ದಡಗಿಸಿಕೊಂಡು ಮಾಯವಾಗುತ್ತಿರುವ ಮುನ್ಸೂಚನೆ ಇದೆ.

ಇಂತಹ ಸಂದಿಗ್ದ ಸಮಯದಲ್ಲಿ ಬೆಳಗಲ್ಲು ವೀರಣ್ಣ ಅಪ್ರತಿಮ ಕಲಾಕಾರನಾಗಿ ಅತ್ಯಂತ ವಿಶಿಷ್ಟತೆಯನ್ನು ಮೆರೆಯುತ್ತಿರುವುದು ವಿಶೇಷವಾಗಿ ಕಂಡುಬರುತ್ತದೆ.

ಅವರು ಹಳೆಯ ಪುರಾಣ ಕತೆಗಳನ್ನು ಅತ್ಯಂತ ಆಕರ್ಷಕವಾಗಿ ಗೊಂಬೆಗಳ ಮೂಲಕ ಹೇಳಿದರೂ ಇಂದಿನ ಪಟ್ಟಣದ ಜನತೆ ಅದಕ್ಕಿಂತ ಭಿನ್ನವಾದದನ್ನು ಬಯಸುತ್ತಾರೆ ಎಂಬುದನ್ನು ಬಹುಬೇಗ ಅರಿತುಕೊಂಡರು. ಪರಿಣಾಮವಾಗಿ ಅವರು ಗಾಂಧಿ, ಅಂಬೇಡ್ಕರ ಮೊದಲಾದ ಗೊಂಬೆಗಳನ್ನು ತಯಾರುಮಾಡಿದರು. ಮೂರು ರಾತ್ರಿ ಹಾಡಿದರೂ ಮುಗಿಯದ ಪ್ರಸಂಗಗಳನ್ನು ಒಂದು ತಾಸಿಗೆ ಇಳಿಸಿದರು. ಅತ್ಯಂತ ಸುಸಜ್ಜಿತ ಕಲಾಮಂದಿರದಲ್ಲೂ ಬೆರಗು ಹುಟ್ಟಿಸುವ ಜನಪದ ತಂತ್ರಜ್ಞಾನವನ್ನು ಅಗತ್ಯಕ್ಕೆ ತಕ್ಕಂತೆ ಮಾರ್ಪಡಿಸಿಕೊಂಡರು. ಪರಿಣಾಮವಾಗಿ ಇಂದಿಗೂ ಬೆಳಗಲ್ಲು ವೀರಣ್ಣ ಅವರ ತೊಗಲುಗೊಂಬೆಯಾಟದ ತಂಡಕ್ಕೆ ವಿಶೇಷ ಆಹ್ವಾನವಿದೆ ಮತ್ತು ಅವರ ಕಲೆಗೆ ಯೋಗ್ಯ ಬೆಲೆ ಇದೆ.

ಇಂದು ಬೆಳಗಲ್ಲು ವೀರಣ್ಣ ಎಂಬತ್ತೈದು ವರ್ಷಗಳನ್ನು ದಾಟಿದ ಹಿರಿಯ ಕಲಾವಿದರು. ಅವರ ಗಂಟಲಶಕ್ತಿ ಇಂದಿಗೂ ಕುಂದಿಲ್ಲ. ಅದೇ ಗತ್ತು, ಅದೇ ಗಂಭೀರತೆಯಿಂದ ಹಾಡುವ, ಮಾತನಾಡುವ ವೀರಣ್ಣ ಸದಾ ಚೈತನ್ಯದ ಚಿಲುಮೆ.

ಅವರು ಒಮ್ಮೆಲೇ ತೊಗಲುಗೊಂಬೆಯಾಟದ ಶ್ರೇಷ್ಠ ಕಲಾವಿದರಾಗಿ ಹೊರಹೊಮ್ಮಿದವರಲ್ಲ. ಹಂತಹಂತವಾಗಿ ಪಕ್ವಗೊಂಡು ಶ್ರೇಷ್ಠ ಕಲಾವಿದರಾಗಿ ಹೆಸರು ಪಡೆದರು. ಚಿಕ್ಕಂದಿನಲ್ಲೇ ತಂದೆ-ತಾಯಿಗಳನ್ನು ಕಳೆದುಕೊಂಡು ಬಡತನದ ಬೇಗೆ ಅನುಭವಿಸಿ, ರಂಗಭೂಮಿಯ ನಂಟು ಅಂಟಿಸಿಕೊಂಡು ಬೆಳೆದವರು. ನಂಬಿದ ಕಲಾದೇವತೆ ಈ ಕಲಾವಿದನ ಕೈ ಬಿಡಲಿಲ್ಲ. ಅದರಿಂದಾಗಿಯೇ ಹೊಸ ಪ್ರಯೋಗಗಳಿಗೆ ಕೈ ಹಾಕಿದ ಬೆಳಗಲ್ಲು ವೀರಣ್ಣ ಅದರಲ್ಲಿ ಯಶಸ್ವಿಯಾದರು. ಅವರ ಬದುಕಿನ ಬವಣೆಯ ಕಷ್ಟ ಕೋಟಲೆಗಳನ್ನು ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಸಂವಾದದ ಪಟ್ಟಂಗದಲ್ಲಿ ವಿವರವಾಗಿ ಬಿಡಿಸಿಟ್ಟಿದ್ದಾರೆ. ಅದರ ಕೆಲವು ಆಯ್ದ ವಿವರಗಳು ಹೀಗಿವೆ.

೨. ಬೆಳಗಲ್ಲು ವೀರಣ್ಣನವರ ಬಾಲ್ಯ

ತೊಗಲುಗೊಂಬೆಯಾಟದ ವೀರಣ್ಣನವರ ಹುಟ್ಟೂರು ಬಳ್ಳಾರಿ ಸಮೀಪದ ಒಂದು ಕುಗ್ರಾಮ ಬೆಳಗಲ್ಲು. ಅವರ ತಂದೆ ದೊಡ್ಡ ಹನುಮಂತಪ್ಪ, ತಾಯಿ ಈರಮ್ಮ ಇವರಿಗಿದ್ದ ಮಕ್ಕಳು ಸರಿಸುಮಾರು ಹನ್ನೆರಡು ಜನ. ಅದರಲ್ಲಿ ಐದು ಜನ ಹೆಣ್ಣುಮಕ್ಕಳು. ಹುಟ್ಟಿದ ಗಂಡುಮಕ್ಕಳಲ್ಲಿ ನಾಲ್ಕು ಜನ ಹುಟ್ಟಿದ ಕೆಲ ದಿನಗಳಲ್ಲಿಯೇ ತೀರಿಹೋಗಿದ್ದರು. ಹೀಗಾಗಿ ಬದುಕುಳಿದ ಗಂಡು ಮಗ ಬೆಳಗಲ್ಲು ವೀರಣ್ಣ. "ನನ್ನ ವರುಷ ಎಂಟಾದರೂ ಸೊಂಟದ ಮೇಲೆ ಹೊತ್ತೇ ಬೆಳೆಸಿದ್ದರು. ಅಪ್ಪನಿಗೆ ೪೬ ಎಕರೆ ಭೂಮಿ ೨ ಮನೆ ಇತ್ತು. ಪ್ರಾರಬ್ಧವೋ, ಅದೃಷ್ಟವೋ ಅಪ್ಪ ದೊಡ್ಡಹನುಮಂತಪ್ಪರಿಗೆ ಬಯಲಾಟ ಕಲಿಸುವ ಹುಚ್ಚಿತ್ತು. ಅದಕ್ಕಾಗಿಯೇ ೨೨ ಎಕರೆ ಜಮೀನು ಒಂದು ದೊಡ್ಡ ಮನೆ ಮಾರಿ ರಂಗಕಲೆಯ ಸೇವೆಯ ಬೆನ್ನುಹತ್ತಿದ್ದರು" ಎನ್ನುತ್ತಾರೆ ವೀರಣ್ಣ. ವೀರಣ್ಣ ೨೦ರ ಹರೆಯಕ್ಕೆ ಬರುವಾಗ ಅವರಿಗೆ ಮಾರಲು ೨೪ ಎಕರೆ ಜಮೀನು ಹಾಗೂ ಒಂದು ಮನೆ ಉಳಿದಿತ್ತು. ಮುಂದೆ ಅವರು ಅದನ್ನು ಮಾರಿದರೆಂಬುದು ಸತ್ಯ.

ಬೆಳಗಲ್ಲು ವೀರಣ್ಣ ಎಂಟು ವರ್ಷದವರಿದ್ದಾಗ ಅವರ ತಂದೆ ತಾಯಿ ಇಬ್ಬರೂ ಯಾವುದೋ ರೋಗಕ್ಕೆ ಬಲಿಯಾಗಿ ಬಿಟ್ಟರು. ಆಗ ಅವರಿಗೆ ೫ ವರ್ಷದ ತಮ್ಮನನ್ನು ಸಾಕುವ ಜವಾಬ್ದಾರಿಯು ಬಿತ್ತು. ೫ ಜನ ಅಕ್ಕಂದಿರಿಗೆ ಮದುವೆಯಾಗಿತ್ತು. ಅವರೆಲ್ಲ ಅವರವರ ಗಂಡಂದಿರ ಮನೆಯಲ್ಲಿದ್ದರು.

ತಮ್ಮನನ್ನು ಸಾಕುವ ಹೊಣೆ ಹೊರುವ ವಯಸ್ಸು ವೀರಣ್ಣನವರದ್ದಾಗಿರಲಿಲ್ಲ. ಆದ್ದರಿಂದ ಅವರ ಅಕ್ಕ 'ಕೆಲ ಕಾಲ ಅವನನ್ನು ತಮ್ಮೊಂದಿಗೆ ಕರೆದೊಯ್ಯುತ್ತೇವೆ' ಎಂದಾಗ ಇವರಿಗೆ ಸಮಾಧಾನವೇ ಆಗಿತ್ತು. ತಾನು ಬದುಕುವುದೆಲ್ಲಿ ಎಂಬುದು ಕೂಡ ಒಂದು ಪ್ರಶ್ನೆಯೇ ಆಗಿತ್ತು ಅವರಿಗೆ.

ಅಪ್ಪ-ಅಮ್ಮ ಮಾಡಿದ ಪುಣ್ಯ ಮಕ್ಕಳನ್ನು ಕಾಯುತ್ತದೆ ಎಂಬುದು ಸುಳ್ಳಲ್ಲ. ವೀರಣ್ಣನ ಅಪ್ಪ ದೊಡ್ಡ ಹನುಮಂತಪ್ಪನವರ ಶ್ರೀಮಂತಿಕೆಯ ದಿನಗಳಲ್ಲಿ ಆ ಊರಿನ ದೊಡ್ಡಗೌಡರ ಮನೆಯಲ್ಲಿ ಬಡತನವಿತ್ತು. ಆ ಕಾಲದಲ್ಲಿ ಆ ಮಕ್ಕಳಿಗೆ ಇವರು ಕೆಲದಿನ ಊಟಹಾಕಿ ಆಶ್ರಯ ನೀಡಿದ್ದರು. ಆ ಕೃತಜ್ಞತೆಯಿಂದ ಆ ಮನೆಯವರು ವೀರಣ್ಣನನ್ನು ಕರೆದು ಊಟಕ್ಕೆ ನಮ್ಮ ಮನೆಗೆ ಬರಬೇಕೆಂದು ತಾಕೀತು ಮಾಡಿದ್ದರು. ಅದರಿಂದ ಅವರ ಹೊತ್ತಿನ ಊಟದ ಚಿಂತೆ ಕಳೆದಿತ್ತು. ಅವರ ಅಪ್ಪನ ಕಾರಣದಿಂದ ವೀರಣ್ಣನವರಿಗೆ ರಂಗದ ನಂಟು ಬೆಳೆದಿತ್ತು. ದೊರೆವ ಪಾತ್ರಗಳನ್ನು ಅರಸಿಕೊಂಡು ವೀರಣ್ಣ ಊರೂರು ಸುತ್ತಲಾರಂಭಿಸಿದರು.

ನಾಲ್ಕು ಗಂಡು ಮಕ್ಕಳು ಹುಟ್ಟಿದ ಕೆಲ ದಿನಗಳಲ್ಲಿಯೇ ಸತ್ತು ಹೋಗಿದ್ದರಿಂದ ಆನಂತರ ಹುಟ್ಟಿದ ವೀರಣ್ಣನ ಬಗ್ಗೆ ಅಪ್ಪ-ಅಮ್ಮಂದಿರಿಗೆ ವಿಪರೀತ ಪ್ರೀತಿ. ಇದರ ಪರಿಣಾಮವಾಗಿ ಅವನನ್ನು ಶಾಲೆಗೂ ಕಳುಹಿಸಲಿಲ್ಲ. ಊರಿನ ಶಿಕ್ಷಕರು ವೀರಣ್ಣನನ್ನು ಶಾಲೆಗೆ ಕಳುಹಿಸಿ ಎಂದರೆ 'ಅಯ್ಯೋ ಬ್ಯಾಡಿ ಸ್ವಾಮಿ, ಅವನು ನಮ್ಮ ಕಣ್ಣೆದುರೇ ಆಡ್ಕೊಂಡು ಬೆಳೆದುಬಿಡಲಿ' ಎನ್ನುತ್ತಿದ್ದರು. ಯಾವತ್ತಾದರೂ ಅವನು ಅಪ್ಪಿತಪ್ಪಿ ಶಾಲೆಗೆ ಬಂದರೆ 'ಏನೋ ಮಕ್ಕಳ ಜೊತೆ ಆಟ ಆಡಿಕೊಳ್ಳಲಿ ಬಿಡಿ. ಅವನು ಓದಿದ್ರೆ ಓದಲಿ, ಇಲ್ಲದಿದ್ದರೆ ಬಿಡಲಿ' ಅನ್ನೋ ಮಟ್ಟಕ್ಕೆ ಅವನನ್ನು ಮುದ್ದು ಮಾಡಿ ಬೆಳೆಸಿದ್ದರು. ಎಲ್ಲಿ ಶಿಕ್ಷಕರು ತಮ್ಮ ಮಗನಿಗೆ ಹೊಡೆಯುತ್ತಾರೋ ಎಂಬ ಭಯ ಅವರಿಗೆ. ಹೀಗಾಗಿ ವೀರಣ್ಣನಿಗೆ ವಿದ್ಯೆಯ 'ಓಂಕಾರ' ಎಂಬುದು ಆಗಲೇ ಇಲ್ಲ.

ಶಾಲೆಗೆ ಹೋಗಿ ಓದಲು, ಬರೆಯಲು ಕಲಿಯದ ವೀರಣ್ಣ ಇಂದು ರಾಷ್ಟ್ರವೇ ಬೆರಗಾಗುವಂತಹ ಪ್ರತಿಭಾವಂತ ಜನಪದ ಕಲಾವಿದರಾಗಿ ಬೆಳೆದಿದ್ದಾರೆ. ಇದಕ್ಕೆ ಅವರು ಸಾಧನೆಯಲ್ಲಿ ತೋರಿದ ನಿಷ್ಠೆ ಬಹಳ ಕಾರಣ.

೩. ಅಪ್ಪನಿಂದ ಅಂಟಿದ ರಂಗದ ನಂಟು

ಬೆಳಗಲ್ಲು ವೀರಣ್ಣನ ಅಪ್ಪ ದೊಡ್ಡ ಹನುಮಂತಪ್ಪನವರಿಗೆ ಬಯಲು ನಾಟಕಗಳು, ಬಯಲಾಟ ಹಾಗೂ ರಂಗಕ್ರಿಯೆಯ ಬಗ್ಗೆ ತುಂಬಾ ಒಲವಿತ್ತು. ತಮ್ಮ ಆಸ್ತಿಯನ್ನು ಅದಕ್ಕಾಗಿಯೇ ಕರಗಿಸುತ್ತಿದ್ದ ಅವರಿಗೆ ಹೆಸರಾಂತ ನಟ ನಟಿಯರನ್ನು ಕರೆಸಿ ನಾಟಕವಾಡಿಸುವುದು ಹವ್ಯಾಸವಾಗಿತ್ತು.

ಸಹಜವಾಗಿಯೇ ಸುಮಧುರ ಕಂಠವನ್ನು ಹೊಂದಿದ್ದ ಮಗನಿಗೆ ರಂಗಗೀತೆಯ ಪಾಠ ಆರಂಭಿಸಿದ್ದರು. ಇನ್ನೂ ಐದಾರುವರುಷದ ಹುಡುಗನಿದ್ದಾಗಲೇ ಅವನಿಗೆ 'ಸಖಿ' ಪಾತ್ರವೊಂದನ್ನು ನೀಡಿ ರಂಗ ಪ್ರವೇಶ ಮಾಡಿಸಿದ್ದರು.

ಸಾಮಾನ್ಯವಾಗಿ ಬಯಲಾಟದಲ್ಲಿ ಕುಣಿತಕ್ಕೆ ಬಹಳ ಪ್ರಾಧಾನ್ಯತೆ ಇರುತ್ತದೆ. ಪುರುಷ ಪಾತ್ರವೊಂದು ರಂಗದ ಮೇಲೆ ಬಂದೊಡನೆ ಬಹಳ ಹುಮ್ಮಸ್ಸಿನಿಂದ ಕುಣಿಯುತ್ತದೆ. ರಾಕ್ಷಸ ಪಾತ್ರವಾದರಂತೂ ಭಯಂಕರವಾಗಿ ಆರ್ಭಟಿಸಿ ಇಡೀ ರಂಗಸ್ಥಳವೇ ನಡುಗುವಂತೆ ಕುಣಿಯುತ್ತದೆ. ಹಾಗೆ ಕುಣಿದು ಕುಣಿದು ದಣಿವಾದಾಗ ಆ ದಣಿವನ್ನು ನೀಗಿಸಲು ಸ್ವಲ್ಪ ವಿರಾಮ ನೀಡಲೆಂದು 'ಸಖಿ' ಪಾತ್ರಗಳನ್ನು ನೃತ್ಯಮಾಡಲು ಕಳುಹಿಸುತ್ತಿದ್ದರು. ಇದಕ್ಕಾಗಿ ಸಖಿ ಪಾತ್ರಧಾರಿ ಸುಶ್ರಾವ್ಯವಾಗಿ ಹಾಡುತ್ತಾ ನೃತ್ಯ ಮಾಡಬೇಕಾಗಿತ್ತು. ಇದಕ್ಕೆ ಅನೇಕಬಾರಿ ಹಿಂದಿ ಹಾಡುಗಳನ್ನು ಹಾಡಿಸಿ ಕುಣಿಸುತ್ತಿದ್ದರು. ಹಾಡಿನ ಅರ್ಥ ಗೊತ್ತಿಲ್ಲದಿದ್ದರೂ ವೀರಣ್ಣ ಈ ಹಿಂದಿ ಹಾಡುಗಳನ್ನು ಸೊಗಸಾಗಿ ಹಾಡುತ್ತಿದ್ದರು. ಹೀಗಾಗಿ ಅಪ್ಪ ಬದುಕಿದ್ದಾಗಲೇ ಹಾಡುವುದು, ನೃತ್ಯಮಾಡುವುದು, ಚಿಕ್ಕ ಪುಟ್ಟ ಸಂಭಾಷಣೆಗಳನ್ನು ಚೊಕ್ಕವಾಗಿ ಅರ್ಪಿಸುವುದು ವೀರಣ್ಣನವರಿಗೆ ಅಭ್ಯಾಸವಾಗಿ ಹೋಗಿತ್ತು. ಜೊತೆಯಲ್ಲಿ ವಾಯಿಲೆನ್ ನುಡಿಸೋದು, ಹಾರ್ಮೋನಿಯಂನ ರಾಗಗಳನ್ನು ಅನುಸರಿಸುವುದು ಅಭ್ಯಾಸವಾಗಿ ಹೋಗಿತ್ತು.

ಆದರೆ ವಿಧಿಯ ಲೀಲೆ ಬೇರೆ ರೀತಿಯೇ ಇತ್ತು. ಬದುಕಿನ ಗಂಭೀರತೆಯ ಅರಿವೇ ಇಲ್ಲದೆ ಬೆಳೆದಿದ್ದ ಚಿಕ್ಕ ಹುಡುಗ ಇದ್ದಕ್ಕಿದ್ದಂತೆ ತಮ್ಮ ತಂದೆ ತಾಯಿ ಇಬ್ಬರನ್ನು ಕಳೆದುಕೊಂಡು ಅನಾಥರಾಗಿ ಬಿಟ್ಟರು.

'ವೀರಣ್ಣ'ನ ಮುಂದೆ ಹಲವು ಆಯ್ಕೆಗಳು ಇರಲಿಲ್ಲ. ದೊಡ್ಡ ಗೌಡರ ಮನೆಯಲ್ಲಿ ಯಾವಾಗ ಹೋದರೂ ಎರಡು ಹೊತ್ತು ಊಟ ಹಾಕುತ್ತಿದುದರಿಂದ ಹಸಿವಿನ ಚಿಂತೆ ಇರಲಿಲ್ಲ. ಆದರೆ ಮುಂದಿನ ಬದುಕಿಗೊಂದು ಗುರಿ ಇರಲಿಲ್ಲ.

ಆಗೆಲ್ಲಾ ವೀರಣ್ಣ ಮಾಡುತ್ತಿದ್ದ ಕೆಲಸ ಎಂದರೆ ದೇವರ ಗುಡಿಯಲ್ಲಿ ಭಜನೆ ಮಾಡೋದು. ಎಲ್ಲೆಲ್ಲಿ ಬಯಲಾಟ ಅಭ್ಯಾಸ ಮಾಡುತ್ತಾರೆ ಅಲ್ಲಿ ಹೋಗಿ ಹಾಡುಗಳನ್ನು

ಅಭ್ಯಾಸ ಮಾಡುವುದು, ಹೊಸಹೊಸ ಹಾಡುಗಳನ್ನು ಕಲಿಯೋದು, ತನ್ನ ಪಾಲಿನ ಸಂಭಾಷಣೆಗಳನ್ನು ನೆನಪಿಟ್ಟುಕೊಳ್ಳುವುದು. ಆದರೆ ವೀರಣ್ಣನ ಹೆಚ್ಚುಗಾರಿಕೆ ಎಂದರೆ ತನ್ನ ಸಂಭಾಷಣೆಯಲ್ಲದೆ ತನ್ನ ಸ್ನೇಹಿತರ ಪಾಲಿನ ಎಲ್ಲಾ ಸಂಭಾಷಣೆಗಳನ್ನೂ, ಹಾಡುಗಳನ್ನೂ ಇವರು ಕಲಿತು ಬಿಡುತ್ತಿದ್ದರಂತೆ.

ಆ ಊರಿನ ದೊಡ್ಡ ಶ್ರೀಮಂತರ ಮನೆಯಾಕೆ ನಾಲ್ಕು ಜನ ಮಕ್ಕಳನ್ನು ಬಿಟ್ಟು ಅಕಾಲಮರಣಕ್ಕೆ ತುತ್ತಾದಾಗ ಆ ಮಕ್ಕಳನ್ನು ವೀರಣ್ಣನ ಅಪ್ಪ-ಅಮ್ಮ ಮಮತೆಯಿಂದ ಸಲಹಿದ್ದರಂತೆ. ಆ ಋಣ ವೀರಣ್ಣನ ಬಾಲ್ಯದ ಬದುಕಿಗೆ ಆಶ್ರಯ ನೀಡಿತ್ತು. ಅವರ ಮನೆಯಲ್ಲಿ ಊಟ, ತಿಂಡಿ ಮಾಡಿಕೊಂಡು ಯಾರಿಗೂ ಉಪದ್ರವಕಾರಿಯಾಗದಂತೆ ಬಯಲಾಟದ ಹಾಡು ಕುಣಿತಗಳಲ್ಲಿ ವೀರಣ್ಣ ತಲ್ಲೀನನಾಗಿ ಬೆರೆತುಬಿಟ್ಟರು.

ಹಳ್ಳಿಯ ದೇಗುಲಗಳಲ್ಲಿ ಭಜನೆಗೆ ಎಲ್ಲಿಲ್ಲದ ಪ್ರಾತಿನಿಧ್ಯತೆ. ಅಲ್ಲಿ ಜನಪದರ ನಿಜದನಿ ಹೊಮ್ಮುತ್ತಿರುತ್ತದೆ. ಅಲ್ಲಿ ಹಾಡುಗಾರರಲ್ಲಿ ಬೇಧಭಾವ ಇರುವುದಿಲ್ಲ. ಚೆನ್ನಾಗಿ ಹಾಡುವ ಎಲ್ಲರಿಗೂ ಸಮಾನ ಅವಕಾಶವಿರುತ್ತದೆ. ಒಬ್ಬ ಒಂದು ಹಾಡನ್ನು ಹಾಡಿದರೆ ಉಳಿದವರು ಅವನಿಗೆ ದನಿಗೂಡಿಸುತ್ತಾರೆ. ಆ ಹಾಡು ಮುಗಿದೊಡನೆ ಇನ್ನೊಬ್ಬ ಹಾಡಲಾರಂಭಿಸುತ್ತಾನೆ. ಅವನೊಂದಿಗೆ ಈ ಮೊದಲು ಹಾಡಿದವನು ಹಾಗೂ ಇತರರೂ ದನಿಗೂಡಿಸುತ್ತಾರೆ. ಜನಪದ ಕಲೆಯ ನಿಜದರ್ಶನ ವೀರಣ್ಣನಿಗೆ ಆಗಿದ್ದು ಈ ಭಜನೆಗಳ ಮೂಲಕವೇ ಎಂಬುದರಲ್ಲಿ ಅನುಮಾನವಿಲ್ಲ.

೪. ವೃತ್ತಿಕಲಾವಿದನಾಗಿ 'ಪ್ರಹ್ಲಾದನಾಗಿ ರಂಗವೇರಿದ ವೀರಣ್ಣ'

ಜನಪದ ಕಲಾವಿದರು ಪ್ರತಿಭೆಯಲಿ 'ಅಪ್ರತಿಮ ಶ್ರೀಮಂತರು' ಆದರೆ ಆರ್ಥಿಕವಾಗಿ ಅತ್ಯಂತ ಬಡವರು. ಬಡತನ ಒಂದು ಶಾಪ. ಆದರೆ ಕಲಾವಿದರಿಗೆ ಅದರಲ್ಲೂ ವೀರಣ್ಣನಿಗೆ ಈ ಬಡತನವೇ ಒಂದು ವರವಾಯಿತೇನೋ. ಅವರೆಂದೂ ಅದನ್ನು ಶಾಪವೆಂದು ಪರಿಗಣಿಸಲಿಲ್ಲ.

ವೀರಣ್ಣ ಅನಾಥನೂ ಅಲ್ಲ. ಬಳಗವೂ ಇಲ್ಲ ಎನ್ನುವ ಸ್ಥಿತಿಯಲ್ಲಿ ಬೆಳೆದವರು. ಹುಟ್ಟಿದ ಮನೆಯಲ್ಲಿ ಅಕ್ಕರೆಯಿಂದ ಊಟ ಇಕ್ಕುವವರಿಲ್ಲ. ಅದರಿಂದಾಗಿ ಅಕ್ಕಂದಿರ ಮನೆಗಳಿಗೆ ಭೇಟಿ ನೀಡುವುದು ಸಾಮಾನ್ಯವಾದ ಸಂಗತಿಯಾಗಿತ್ತು.

ಇವರ ಒಬ್ಬ ಅಕ್ಕನಗಂಡ ತೊಗಲುಬೊಂಬೆಯಾಟದ ವೃತ್ತಿಕಲಾವಿದರಾಗಿದ್ದರು. ಇವತ್ತು ಪ್ರಖ್ಯಾತ ಗಾಯಕರು ಎನಿಸಿರುವ ಎಂ. ವೆಂಕಟೇಶ ಕುಮಾರ ಬೆಳಗಲ್ಲು ವೀರಣ್ಣನ ಅಕ್ಕನ ಮಗ. ಅಂದರೆ ಅವರ ಭಾವನಮಗ. ಆ ಭಾವನಿಗೆ ಈ ವೀರಣ್ಣನನ್ನು ಕಂಡರೆ ಅಕ್ಕರೆ ಅದಕ್ಕಿಂತ ಮುಖ್ಯವಾಗಿ ಅವರು ಹಾಡುವ ರೀತಿ ತುಂಬಾ ಇಷ್ಟ.

ಆ ಸಮಯದಲ್ಲಿ ಅವರ ಭಾವ, ತಮ್ಮ ಸ್ನೇಹಿತರನ್ನು ಸೇರಿಸಿಕೊಂಡು ಒಂದು ತಂಡಕಟ್ಟಿ 'ಭಕ್ತಪ್ರಹ್ಲಾದ' ಬಯಲಾಟ ಆಡಬೇಕೆಂದು ಅಭ್ಯಾಸ ಆರಂಭಿಸಿದರು. ಅನಾಯಾಸವಾಗಿ ವೀರಣ್ಣನಿಗೆ 'ಭಕ್ತಪ್ರಹ್ಲಾದನ' ಪಾತ್ರ ಒದಗಿಬಂತು. ಆ ಪ್ರಹ್ಲಾದನ ಪಾತ್ರ ಮಾಡುವಾಗ ಯಾರು ಮಾತು ಹೇಳಿಕೊಟ್ಟರೋ, ಯಾರು ಹಾಡು ಹೇಳಿಕೊಟ್ಟರೋ ಒಂದೆರಡು ಬಾರಿ ಕೇಳಿದರೆ ಸಾಕು ಆ ಹಾಡು ವೀರಣ್ಣನಿಗೆ ಬಾಯಿಪಾಠವಾಗಿಬಿಡುತ್ತಿತ್ತು.

ಆದರೆ ಒಂದೇ ಎಡವಟ್ಟು, ಸಕಾರ, ನಕಾರ, ಅಲ್ಪಪ್ರಾಣ, ಮಹಾಪ್ರಾಣಗಳ ವ್ಯತ್ಯಾಸದ ಬಗ್ಗೆ ಅಲ್ಲಿ ಯಾರಿಗೂ ಗಮನ ಹೋಗುತ್ತಲೇ ಇರಲಿಲ್ಲ. ಶುದ್ಧ ಬಳ್ಳಾರಿಯ ಭಾಷೆ ಇವರ ಸಂಭಾಷಣೆಯಲ್ಲಿ ವಿಶೇಷ ಗತ್ತು ತಂದುಕೊಟ್ಟಿತ್ತು. ಇಂತಹ ಪೌರಾಣಿಕ ನಾಟಕದಲ್ಲಿ ಹಿಂದೀ ಹಾಡುಗಳು ಸಲೀಸಾಗಿ ಬಂದುಬಿಡುತ್ತಿದ್ದವು. ಜನ ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸುತ್ತಿದ್ದರು. ವೀರಣ್ಣ ರಂಗದ ಮೇಲೆ ಪ್ರಹ್ಲಾದನಾಗಿ ವಿಜೃಂಭಿಸಿ ಬಿಟ್ಟರು.

ಪ್ರಹ್ಲಾದನ ಪಾತ್ರದ ಯಶಸ್ಸಿನ ಕಾರಣ ಮುಂದಿನ ಆಟದಲ್ಲಿ 'ಚೂಡಾಮಣಿ'ಯ ಪಾತ್ರ ವೀರಣ್ಣನಿಗೆ ಅರಸಿಕೊಂಡು ಬಂತು. ಶಾಲೆಗೆ ಹೋಗಿಲ್ಲ, ಒಂದಕ್ಷರ ಓದು ಬರಹ ಕಲಿತಿಲ್ಲ. ಎದುರು ಇರುವ ಪುಸ್ತಕ ಓದಲುಬರಲ್ಲ. ಕೇವಲ ಬೇರೆಯವರು ಹೇಳಿದ್ದು ಕೇಳಿ ಸಂಭಾಷಣೆ ಕಂಠಪಾಠ ಮಾಡಬೇಕಾಗಿತ್ತು. ವೀರಣ್ಣನ ಆತ್ಮವಿಶ್ವಾಸ ಮೆಚ್ಚುವಂತಹುದಾಗಿತ್ತು.

ನಿಧಾನವಾಗಿ ಒಂದಾದನಂತರ ಮತ್ತೊಂದು ಪಾತ್ರಗಳು ಇವರಲ್ಲಿ ಪರಕಾಯ ಪ್ರವೇಶ ಮಾಡಿಬಿಟ್ಟವು. ನಡುವೆ ಹಿಂದಿ ಹಾಡುಗಳನ್ನು ಹಾಡುವುದು, ನೃತ್ಯಮಾಡುವುದು ಇವರ ನೆಚ್ಚಿನ ಅಭ್ಯಾಸವಾಯಿತು. ಹಿಂದಿ ಹಾಡು ಮೆಚ್ಚಿದ, ನೃತ್ಯ ಮೆಚ್ಚಿದ ಪ್ರೇಕ್ಷಕರು ಇವರಿಗೆ ಒಂದು ರೂಪಾಯಿ, ಎರಡು ರೂಪಾಯಿ ಮೆಚ್ಚುಗೆ ಭಕ್ಷೀಸು ಕೊಡುತ್ತಿದ್ದರು.

ಕೊನೆಗೆ ಇದು ಯಾವ ಮಟ್ಟಕ್ಕೆ ಹೋಯಿತೆಂದರೆ ನಾಟಕದಲ್ಲಿ ಪ್ರಧಾನ ಪಾತ್ರ ರಂಗ ಪ್ರವೇಶ ಮಾಡಿದ ಕೂಡಲೇ ವೀರಣ್ಣನಿಂದ ಹಾಡಿಸುವುದು, ನೃತ್ಯ ಮಾಡಿಸುವುದು, ಊರಿನ ಗೌಡರೋ ಪಟೇಲರೋ ನಾಟಕ ನೋಡಲು ಬಂದ ಕೂಡಲೇ ವೀರಣ್ಣನಿಂದ ಡ್ಯಾನ್ಸ್ ಮಾಡಿಸೋದು ಆರಂಭವಾಯಿತು. ಎಂ.ಎಲ್.ಎ. ಬಂದರೆ, ರಾಜಕೀಯ ನಾಯಕರು ಬಂದರೆ ವೀರಣ್ಣನ ಡ್ಯಾನ್ಸ್ ಇರಲೇಬೇಕು ಅನ್ನುವ ಮಟ್ಟಕ್ಕೆ ಅವರ ನೃತ್ಯಕ್ಕೆ ಬೆಲೆ ಬಂತು.

"ಈ ನಾಟಕದ ಹುಚ್ಚು ಅತಿಯಾದದ್ದು 'ಎಲ್ಲನ ಹೆಂಡತಿ' ಎಂಬ ನಾಟಕದಲ್ಲಿ ಯಾವ ಊರಿಗೆ ಹೋಗಿದ್ದೇ ಎಲ್ಲೆಲ್ಲಿ ನಾಟಕ ಮಾಡಿದೆ ಎಂಬುದು ಒಂದೂ ನೆನಪಿಲ್ಲ. ಹಸಿವಾದಾಗ ಯಾರೋ ಕೊಟ್ಟ ಊಟವೇ ಪ್ರಸಾದ" ಎನ್ನುವ ವೀರಣ್ಣ ಅವರ ತಿರುಗಾಟ ಈ ರಂಗನಾಟಕಗಳ ರೂಪದಲ್ಲಿ ಆರಂಭವಾಯ್ತು.

೫. ಗವಾಯಿಗಳ ಆಶ್ರಯದಲ್ಲಿ ಹತ್ತಿದ ಓದುವ ಗೀಳು

ಆರಂಭಿಕ ತಿರುಗಾಟಗಳ ಮಧ್ಯೆ ನಾಟಕ ರಂಗದಲ್ಲಿ ಬಿಡುವ ಸಿಕ್ಕೊಡನೆ ಊರಿಗೆ ಓಡುತ್ತಿದ್ದ ವೀರಣ್ಣನಿಗೆ ಆ ಊರ ಗೌಡ್ರು ಒಂದೆರಡು ರೂಪಾಯಿ ಕೊಡುತ್ತಿದ್ದರು. ಅಂಗಿ ಚಡ್ಡಿ ಹೊಲಿಸಿಕೊಡುತ್ತಿದ್ದರು. ನಿಮ್ಮ ತಂದೆ ತಾಯಿ ನಮ್ಮನ್ನ ಸಲಹಿದ್ರು ಅದಕ್ಕೆ ನಾನು ನಿನಗೆ ಇದನ್ನು ಕೊಡ್ತೀನಿ ಅಂತಿದ್ದರು.

ಆಗೆಲ್ಲಾ ಊರಲ್ಲಿ ಹಾಡುತ್ತಿದ್ದ ವೀರಣ್ಣನ ಕಂಠದ, ಶುದ್ಧತೆ ಕೇಳಿದ ಯಾರೋ ವೀರಣ್ಣನನ್ನು ಪಂಚಾಕ್ಷರಿ ಗವಾಯಿಗಳ ಆಶ್ರಮಕ್ಕೆ ಕರೆತಂದುಬಿಟ್ಟರು. ಅಲ್ಲಿಗೆ ಬಳ್ಳಾರಿ ರಾಘವ, ದೊಡ್ಡೇಗೌಡ್ರು, ವೈ.ಎನ್. ಚಂದ್ರೇಗೌಡ್ರು ನಾಟಕ ಕಲಿಸಲಿಕ್ಕೆ ಅಂತ ಬರುತ್ತಿದ್ದರು. ವೀರಣ್ಣ ಅಲ್ಲಿ ಚಂದ್ರೇಗೌಡರ ಶಿಷ್ಯರಾಗಿಬಿಟ್ಟರು. ವಿಷ್ಣು–ಲಕ್ಷ್ಮಿಯರ ಡ್ಯೂಯಲ್‌ಗೀತೆಗೆ ಲಕ್ಷ್ಮಿಯಾಗಿ ವೀರಣ್ಣ ಹೆಜ್ಜೆಹಾಕಿದರು. ಅಲ್ಲಿ ನಾಟಕ–ರಂಗಭೂಮಿಯ ತೆರೆಯ ಮುಂದಿನ ಹಾಗೂ ಹಿಂದಿನ ಪ್ರಪಂಚದ ಅರಿವು ವೀರಣ್ಣರಿಗಾಯಿತು.

ರಂಗದ ಮುಂದೆ ಕುಣಿಯುವಷ್ಟೇ ಕೆಲಸ ರಂಗದ ಹಿಂದೆಯೂ ಇದೆ ಎಂಬುದು ಅಲ್ಲಿ ತಿಳಿಯಿತು. ರಂಗಸಜ್ಜಿಕೆ, ಪ್ರಸಾಧನ, ಸಂಗೀತ ಸಂಯೋಜನೆ, ನಿರ್ದೇಶನ, ಸಂಭಾಷಣಾ ರಚನೆ, ಹಾಡು ಬರೆಯುವುದು, ರಂಗತಾಲೀಮು ಎಲ್ಲದರ ಬಗ್ಗೆ ವೀರಣ್ಣನಿಗೆ ನಿಧಾನವಾಗಿ ಅರಿವು ಮೂಡುತ್ತಾ ಬಂದಿತು.

ಇಷ್ಟೆಲ್ಲಾ ರಂಗಪ್ರಯೋಗ ನಡೆದರೂ ವೀರಣ್ಣ ಓದುತ್ತಿದ್ದದ್ದು ಅ ಆ ಇ ಈ ಅಥವಾ ಅ, ಹ, ರ, ವ, ಳ ಎಂಬ ಅಕ್ಷರಗಳನ್ನು ಮಾತ್ರ. ಅಲ್ಲಿದ್ದ ಜೊತೆಗಾರರಿಂದ ನಿಧಾನವಾಗಿ ಓದುವ ಅಭ್ಯಾಸ ಬೆಳೆಯುತ್ತಿತ್ತು.

ಶಾಸ್ತ್ರೀಯವಾಗಿ ಸಂಗೀತವನ್ನು ಅಭ್ಯಾಸಮಾಡುವುದು ಈ ಆಶ್ರಮದಲ್ಲಿ ಅನಿವಾರ್ಯವಾಯಿತು. ಗುರುಗಳು ಸಾಪಾಸಾವನ್ನು ಬರೆದುಕೊಟ್ಟಿದ್ದನ್ನು ಓದುವುದು ಅನಿವಾರ್ಯವಾಯಿತು. ಹೀಗಾಗಿ ಶಾಲೆಯ ಮೆಟ್ಟಿಲು ಹತ್ತದಿದ್ದರೂ ಅಕ್ಷರಗಳ ಪರಿಚಯವಾಯಿತು. ಹಿಂದುಸ್ತಾನಿ ಹಾಗೂ ಕರ್ನಾಟಕ ಸಂಗೀತ ಕಲಿಯುವುದರ ಜೊತೆಗೆ ಪುಸ್ತಕ ಓದುವುದನ್ನು ಅಭ್ಯಾಸಮಾಡಲಾರಂಭಿಸಿದರು ವೀರಣ್ಣ.

ಈ ಮಧ್ಯೆ ಗುರುಗಳಾದ ವೈ.ಎನ್. ಚಂದ್ರೇಗೌಡರು ಒಂದು ಚಿಕ್ಕ ಪುಸ್ತಕವನ್ನು ಕೊಟ್ಟು ಆ ಪುಸ್ತಕವನ್ನು ಓದಿ ಅದರಲ್ಲಿರುವ ವಿವರಗಳನ್ನು ಒಪ್ಪಿಸಬೇಕು ಎಂದರು. ಅದು ಕೇವಲ ೧೦ ಪುಟಗಳ ಪುಸ್ತಕ. ವೀರಣ್ಣ ಹೇಳುತ್ತಾರೆ. "ಅದನ್ನೇ ಒಂದು ತಿಂಗಳು ಓದಿದ್ದೇನೆ ಆ ಗುರುಗಳು 'ಅದರಲ್ಲಿ ಇರುವುದನ್ನು ಓದಿ ಒಪ್ಪಿಸಿದ ಮೇಲೆಯೇ ಮುಂದಿನ ಕೆಲಸ. ನನ್ನ ಹತ್ತಿರ ಬರುವ ಮೊದಲು ಅದನ್ನು ಕಲಿತು ಒಪ್ಪಿಸು' ಎಂದು

ಬಿಟ್ಟಿದ್ದರು. ಒಂದೆಡೆ ಗುರುಗಳ ಭಯ, ಇನ್ನೊಂದು ಕಡೆ ಕಲಿಯಬೇಕೆಂಬ ಆಸೆ ಹೀಗಾಗಿ ಹಟ ಹಿಡಿದು ಓದಲಾರಂಭಿಸಿದೆ. ಗುರುಗಳು ಕಾದಂಬರಿ ಓದುತ್ತಿದ್ದರೆ, ಅವರು ಅದನ್ನು ಕೆಳಗಿಟ್ಟರೆ ನಾನು ಅದನ್ನು ಎತ್ತಿಕೊಂಡು ಓದುವುದು, ಅವರು ವ್ಯಾಸಭಾರತ ಓದಿದರೆ ನಾನೂ ಅದನ್ನೆ ಓದುವುದು, ಹೀಗೆ ನನ್ನ ಓದುವ ಅಭ್ಯಾಸ ಬೆಳೆದು ಬಂತು. ಒಮ್ಮೆ ಇದ್ದಕ್ಕಿದ್ದಂತೆ ಬಹುಭಾರದ ಪುಸ್ತಕ ಒಂದನ್ನು ಕೊಟ್ಟು ಓದು ಎಂದರು. ನೋಡಿದರೆ ಕುಮಾರವ್ಯಾಸ ಭಾರತ. ನಾನು ಓದಿದೆ ಹೀಗಾಗಿ ಕೆಲವೇ ದಿನಗಳಲ್ಲಿ ಶಭರಶಂಕರವಿಲಾಸ, ಶ್ರೀಮದ್‌ಕಲ್ಯಾಣ, ಗಳಗನಾಥರ ಕಾದಂಬರಿಗಳು ಎಲ್ಲವನ್ನು ಓದುವ ಅದೃಷ್ಟ ನನ್ನ ಪಾಲಿಗೆ ದಕ್ಕಿತು".

ರಂಗಭೂಮಿಯ ನಂಟಿನ ಜೊತೆಗೆ ದೊಡ್ಡಾಟದ ಹಲವು ಪಾತ್ರಗಳನ್ನು ಮಾಡುತ್ತಾ ಅಧ್ಯಯನದ ಜ್ಞಾನವನ್ನೂ ಬೆಳೆಸಿಕೊಳ್ಳುತ್ತ ಸಾಗಿದ್ದರಿಂದ ಯುವಕನಾಗುವ ಹೊತ್ತಿಗೆ ವೀರಣ್ಣ ಸಮಾಜವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವ ಸ್ಥಿತಿಯನ್ನು ತಲುಪಿದ್ದರು. ಇಷ್ಟರಲ್ಲಾಗಲೇ ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ನಾಟಕಗಳಲ್ಲಿ ಸ್ತ್ರೀ ಪಾತ್ರ, ಬಾಲ ಪಾತ್ರ, ಹಾಸ್ಯಪಾತ್ರ ಅಭಿನಯಿಸಿ ಅಭಿನಯವೆನ್ನುವುದು ವೀರಣ್ಣರ ಪಾಲಿಗೆ ಅತಿಸಹಜ ಕ್ರಿಯೆ ಎನಿಸುವಂತಹುದಾಗಿತ್ತು.

ವೀರಣ್ಣ ಹೇಳುತ್ತಾರೆ "ಈ ಅನುಭವ ನನಗೆ ಬಹಳ ಖುಷಿಯಾಗತದ ಯಾಕಂದ್ರ ನಿರಂತರವಾಗಿ ರಂಗಭೂಮಿ ಸಂಪರ್ಕ ಅದ್ರೊಳಗ ತೊಡಗಿಸಿಕೊಳ್ಳೊ ಅವಕಾಶ ಈ ಭಗವಂತ ಕೊಟ್ಟನಲ್ಲ ಇದು ನಮ್ಮ ಗುರುಗಳ ಆಶೀರ್ವಾದ, ತಂದೆ-ತಾಯಿಗಳ ಪುಣ್ಯ. ನಿರಂತರವಾಗಿ ನಾಟಕದೊಳಗೆ ನಾನು ಸೇರಿಹೋಗ್ಬಿಟ್ಟೆ ಕುರುಕ್ಷೇತ್ರ, ಮಹಾಭಾರತದ ಭಾಗಗಳು ಇವೆಲ್ಲ ಆಗ ನಾಟಕದ ವಸ್ತುಗಳು ನಾನು ಗುರುಗಳ ಆದೇಶದಂತೆ ಕುಮಾರವ್ಯಾಸಭಾರತ ಓದಿದ್ದೆನಲ್ಲ ಅದರಲ್ಲಿನ ಮಾತುಗಳನ್ನು ನಾವು ರಂಗದ ಮೇಲೆ ಬಳಸಿಕೊಂಡು ಬಿಟ್ಟೆವು. ಕರ್ಣ-ಅರ್ಜುನರ ಪ್ರಸಂಗ ಅದರಲ್ಲಿ ಮಹಾವೈರಿಯಾಗಿರುವಂತಹ ಕರ್ಣನ ಬಗ್ಗೆ ಅರ್ಜುನ ಏನೋ ಹೇಳಬೇಕು ನನ್ನ ಬಾಯಲ್ಲಿ ಸಹಜವಾಗಿ ಕುಮಾರವ್ಯಾಸ ಬರೆದ ಪದ್ಯಗಳು ಬಂದುಬಿಟ್ಟವು. ರಂಗದ ಮೇಲೆ ಈ ಪದ್ಯಗಳು ಜನಮನವನ್ನು ಗೆದ್ದುಬಿಟ್ಟವು".

ವೀರಣ್ಣನಿಗೆ ಗೊತ್ತಿಲ್ಲದೆಯೇ ಹೊಸ-ಹೊಸ ರೀತಿಯ ಪ್ರಯೋಗಗಳು ವೀರಣ್ಣನಿಂದ ರಂಗ ನಾಟಕಗಳಲ್ಲಿ ಜರುಗಲ್ಪಟ್ಟವು. ಇಷ್ಟಾಗುವಾಗ ಗುಬ್ಬಿ ಕಂಪನಿಯಲ್ಲಿ ಕೆಲಸ ಮಾಡುವ ಅವಕಾಶ ವೀರಣ್ಣನವರಿಗೆ ಬಂತು. ಒಳ್ಳೆಯ ಕಂಠಸಿರಿಯ ವೀರಣ್ಣ ಅಲ್ಲಿಯ ಪ್ರಮುಖ ಎರಡನೆಯ ಹಾಡುಗಾರರಾದರು. ಬಹಶಃ ಅನಂತರವೇ ವೀರಣ್ಣನಿಗೆ ಆರ್ಥಿಕ ತಾಪತ್ರಯಗಳು ಕಡಿಮೆಯಾದದ್ದು.

ಕಷ್ಟದ ದಿನಗಳನ್ನು ನೆನಸಿಕೊಂಡು ವೀರಣ್ಣ ಹೇಳುತ್ತಾರೆ. "ಬಡತನ ಇರಬಾರದ್ರೀ ಅದು ನನ್ನನ್ನು ಎರಡು ಸಾರಿ ಆತ್ಮಹತ್ಯ ಮಾಡಿಕೋಬೇಕು ಅನ್ನೋ ಮಟ್ಟಕ್ಕೆ ತಂದು

ನಿಲ್ಸಿ ಬಿಟ್ಟಿತು. ಮದ್ವೇ ಮಾಡ್ಕೊಂಡೆ ಮಕ್ಳಾದ್ವು ಊಟಕ್ಕೆ ಗಂಜಿಗೆ ಗತಿ ಇಲ್ಲ ಹೆಂಡತಿಗೆ ಸೀರೆ-ಕುಪ್ಪಸ ಕೊಡಸಲಿಲ್ಲ. ಅವಳೂ ಬಂಗಾರ ಕೇಳಲಿಲ್ಲ. ಆದರೆ ಕೊಡಸಬೇಕಾದದ್ದು ನನ್ನ ಧರ್ಮ ಅಲ್ರೀ. ಮಕ್ಕಳಿಗೆ ಹಬ್ಬಕ್ಕೆ ಬಟ್ಟೆ ಇಲ್ಲ. ಹೋಳಿಗೆ ಮಾಡಸ್ಲಿಲ್ಲ ಮನಸ್ಸಿಗೆ ಬಹಳ ನೋವು ಅನ್ನಿಸಿಬಿಡ್ತು. ಈ ಬಡತನದ ಬದುಕ್ಯಾಕೆ, ಬದುಕ್ಲೇ ಬಾರ್‍ದು ಅಂತ ಆತ್ಮಹತ್ಯ ಮಾಡ್ಕೋಬೇಕು ಅಂದುಕೊಂಡೆ. ಆದರೆ ಸುದೈವವಶಾತ ಹಾಗೆ ಮಾಡ್ಕೊಳ್ಳಲಿಲ್ಲ. ನಾನು ಮೊದಲೆ ಹೇಳಿದ್ನಲ್ಲ ಹಾಗೆ ಆ ಊರಲ್ಲಿ ನಾಟಕದ ಥೇಟರ್ ಹಾಕಬೇಕು ಅಂತ, ಕಲಾವಿದರನ್ನು ಕರೆಸಬೇಕು. ಅವರ ಜೊತೆ ಪಾತ್ರ ಮಾಡಬೇಕು ಅಂತ ಹೇಳಿ ಬಡತನ ಇದ್ರೂ ನನಗೆ ದುಡ್ಡು ಇಲ್ದಿದ್ರು ಬೇರೆಯವರಿಗೆ ದುಡ್ಡು ಕೊಟ್ಟು ನಾಟಕ ಆಡಿಸಿ ಬಿಡ್ತಿದ್ದೆ. ಇದರಿಂದಾಗಿ ಉಳಿದಿದ್ದ ೨೨ ಎಕರೆ ಹೊಲಮನೆ ಮಾರ್‍ಕೊಂಡುಬಿಟ್ಟೆ. ಆದರೂ ನೋಡಿ ಯಾವುದೇ ಕೆಲಸ ಮಾಡಿದ್ರೂ ನಿಯತ್ತು ಅನ್ನೋದು ಇರಬೇಕು. ಕಲಾದೇವತೆ ಕೈ ಬಿಡಲಿಲ್ಲ. ಅಂತಹ ಬಡತನದಲ್ಲೂ ಊಟ ಮಾಡ್ಲಿಕ್ಕೆ ರೊಟ್ಟಿ-ಚಟ್ನಿ, ವಾಸಮಾಡ್ಲಿಕ್ಕೆ ಗುಡಿಸಲೋ ಮನೆಯೋ ಇರ್ತಾ ಇತ್ತು. ನಿಧಾನವಾಗಿ ಆ ಕೆಲಸದಲ್ಲೆ ಒಂದಿಷ್ಟು ನೆಮ್ಮದಿ ದೊರಕ್ತಾ ಇತ್ತು". ವೀರಣ್ಣ ಬಹುಕಾಲ ರಂಗಭೂಮಿಯಲ್ಲಿ ಇದ್ದರೂ ಅದು ಅವರಿಗೆ ಶ್ರೀಮಂತಿಕೆಯನ್ನು ತರಲಿಲ್ಲ ಎಂಬುದು ನಿಜ.

೬. ಕೈ ಬೀಸಿ ಕರೆದ ತೊಗಲುಗೊಂಬೆ ಆಟ

ನಾನು ಬಹಳ ಪ್ರೀತಿಸುವ ತೊಗಲುಗೊಂಬೆ ಆಟದ ನಂಟು ಹಚ್ಚಿಸಿಕೊಂಡಿದ್ದು ಒಂದು ಆಕಸ್ಮಿಕ ಆಹ್ವಾನದಿಂದ. ವಿಜಯ ಸಾಸನೂರು ಬೆಂಗಳೂರಿನಲ್ಲಿದ್ದ ಕಾಲ ಅದು. ಕನ್ನಡ ಸಂಸ್ಕೃತಿ ಇಲಾಖೆಯಲ್ಲಿ ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಒಂದು ವಿಶೇಷ ಕಾರ್ಯಕ್ರಮವು ನಡೆಯುತ್ತಿತ್ತು. ಬೆಳಗಲ್ಲು ವೀರಣ್ಣ ಆಗ ಗುಬ್ಬಿ ಕಂಪನಿಯಲ್ಲಿದ್ದರು. ಮಾನ್ಯ ಜಯಚಾಮರಾಜೇಂದ್ರ ಒಡೆಯರ್, ಮಾನ್ಯ ನಿಜಲಿಂಗಪ್ಪನವರು, ಗುಬ್ಬಿವೀರಣ್ಣನನವರು ಇವರುಗಳ ಮುಂದೆ ಅಂದು ಅಕ್ಕಮಹಾದೇವಿ ನಾಟಕದ ಪ್ರರ್ಶನವಾಯಿತು. ಅದು ಸುಮಾರು ೧೯೫೬ನೇ ಇಸವಿ. ಅವತ್ತೆ 'ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು' ಅನ್ನುವ ಹಾಡನ್ನು 'ಉದಯವಾಯಿತು ನಮ್ಮ ಚೆಲುವ ಕನ್ನಡ ನಾಡು' ಎಂದು ಹಾಡಿಸಿದ್ದಕ್ಕೆ ಪ್ರೇಕ್ಷಕರು ದಿಗ್ಗನೆ ಎದ್ದುನಿಂತು ಕರತಾಳವನ್ನು ಮಾಡಿ ಮೆಚ್ಚುಗೆ ಸೂಚಿಸಿದ್ದರು. ಆ ಕಾರ್ಯಕ್ರಮ ಮುಗಿದಾದ ನಂತರ ಬೆಳಗಲ್ಲು ವೀರಣ್ಣನವರು ಕನ್ನಡ ಸಂಸ್ಕೃತಿ ಇಲಾಖೆ ನಿರ್ದೇಶಕರನ್ನು ಆಕಸ್ಮಿಕವಾಗಿ ಭೇಟಿ ಮಾಡಿದರು. ಆ ಸಂಭಾಷಣೆಯನ್ನು ವೀರಣ್ಣನವರು ಹೀಗೆ ವಿವರಿಸುತ್ತಾರೆ.

"ಆ ನಿರ್ದೇಶಕರನ್ನು ನೋಡಿ 'ನಮಸ್ಕಾರ್ ಸರ್' ಎಂದೆ, 'ಬಳ್ಳಾರಿಯಿಂದ ಸಾರ್, ಬೆಳಗಲ್ಲು ವೀರಣ್ಣ ಅಂತ ನಾಟಕದವನು', 'ಹು ನಾಟಕ ಏನು ಮಾಡ್ತೀರಿ' ಅಂತ ಕೇಳಿದ್ರು. ಅವರು ಕೇಳಿದ್ದೆ ತಡ ಆ ನಾಟಕ ಈ ನಾಟಕ, ಆ ಪಾತ್ರ, ಈ ಪಾತ್ರ ಅಂತ ಹೇಳಿ ಎಲ್ಲಾ ಹೇಳೋಕೆ ಶುರು ಮಾಡಿದ್ರು ಅವರು. ಅದಿರಲಿ ನಿಮ್ಮ ಜಿಲ್ಲೆಯಾಗೆ ಬೇರೆ ಕಲೆಗಳು ಯಾವುದಾದರೂ ಇದೆಯಾ ಅಂತ ಕೇಳಿದರು. ಬಯಲಾಟ ಇದೆ, ಅಲ್ಲದೇ ತೊಗಲುಗೊಂಬೆಯಾಟ ಇದೆ ಅಂದೆ. ಅಲ್ಲಿತನಕ ಏನೋ ಬಂದಿದ್ದಾರೆ ಅಂತ ಮಾತಾಡ್ತಿದ್ದ ಅವರು 'ತೊಗಲುಗೊಂಬೆ ಆಟ ಇದೆಯಾ. ಅದನ್ನು ಇಲ್ಲೆ ಕಲಾಕ್ಷೇತ್ರದೊಳಗೆ ಆಡಿಸಿ. ಒಳ್ಳೆ ದುಡ್ಡು ಕೊಡ್ತೀನಿ' ಅಂದ್ರು, ಅವರು ಹೇಳಿದ್ರು 'ಕಿಳ್ಳೆಕ್ಯಾತರು ತೊಗಲುಗೊಂಬೆ ಆಟ ಆಡ್ತಾರೆ ಗೊತ್ತಾ' ಅಂದ್ರು. 'ಹು ಸ್ವಾಮಿ ನಾನು ಆ ಊರಿನವನೆ ನಮ್ಮ ಕಡೆ ಸಿಳ್ಳೆಕ್ಯಾತರು ಅಂತಾರೆ ಹಳೆ ಮೈಸೂರು ಕಡೆ ಗೊಂಬೆರಾಮರು ಅಂತಾರೆ ಆ ಜನಾಂಗಕ್ಕೆ ಸೇರಿದವ ನಾನು. ಅದು ಹೆಂಗೋ ರಂಗಕ್ಕೆ ಬಂದುಬಿಟ್ಟೆ. ಈಗ ಬೇಕಂದ್ರೆ ತೊಗಲುಗೊಂಬೆ ಆಡಿಸೋರನ್ನು ಕರ್ಕೊಂಡು ಬಂದು ಆಟಾ ಆಡಸ್ತೇನಿ' ಅಂದೆ. 'ಆದರೆ ನಾಟಕದ ತಂಡವಾದರೆ ನಮ್ಮದೇ ತಂಡವಿದೆ ನೀವು ಕೊಡೊ ದುಡ್ಡಲ್ಲಿ ನಾನು ೨೦೦ ರೂ ೩೦೦ ರೂ ಉಳಿಸಿಕೊಂಡು ಮನೆ ಖರ್ಚು ಮಾಡ್ಕೊಂಬಹುದು ಏನ್ ಮಾಡ್ಲಿ' ಅಂದೆ. 'ಅದಕ್ಕೆ ಅವರು ನೀನು ನಾಟಕ ಆಡಿ ಎಲ್ಲಾ ದುಡ್ಡನ್ನು ಆ ನಟರಿಗೆ ಕೊಟ್ಟು ಕೈ ಸುಟ್ಟುಕೊಂಡು ಬರಿಗೈಲಿ ಮನೆಗೆ ಹೋಗ್ತಿಯಲ್ಲ. ತೊಗಲುಗೊಂಬೆ ಆಟ ಆಡಿಸು.

ಖರ್ಚು ಕಳೆದ ಮೇಲೂ ನಿನಗೆ ಅಂತ ಬೇರೆ ದುಡ್ಡು ಕೊಡ್ತೀನಿ ತಂಡ ಕರಕೊಂಡು ಬಂದು ತೊಗಲುಗೊಂಬೆ ನಾಟಕ ಆಡಿಸು' ಅಂದರು. ಎಂತಹ ಒಳ್ಳೆಯ ಹೃದಯ ಅವರದ್ದು. ಅದು ನನ್ನ ಜೀವನದ ದೊಡ್ಡ ತಿರುವು. ಅವತ್ತಿಂದ ನಾನು ತೊಗಲುಗೊಂಬೆ ಆಟ ಆಡಿಸಬೇಕು ಎಂದು ನಿರ್ಧಾರ ಮಾಡಿಬಿಟ್ಟೆ. ಊರಿಗೆ ಬಂದೆ ನಮ್ಮ ಮಾವ ಒಳ್ಳೆಯ ತೊಗಲುಗೊಂಬೆ ಕಲಾವಿದರು'. ಅವರು ಅವರ ಮಕ್ಕಳು ಎಲ್ಲಾ ಸೇರಿ ಆರೆಂಟು ಜನ Practice ಶುರುಮಾಡಿದರು. ಅಲ್ಲಿಗೆ ಶುರುವಾಯಿತು ನನ್ನ ಪೀಕಲಾಟ. ಒಂದ್ಗಂಟೆ ಕಾರ್ಯಕ್ರಮಕ್ಕೆ ಸಿದ್ಧರಾಗಿ ಅಂದೆ ಹೋಗಪ್ಪ ಅದೆಲ್ಲ ಆಗಲ್ಲ ನಾವು ಮೂರು-ಮೂರು ದಿನ ಗೊಂಬೆ ಆಡಿಸೋರು ಒಂದ್ಗಂಟೆಗೆ ಕಥೆ ಮುಗಿಸೋಕೆ ಆಗಲ್ಲ ಅಂದ್ರು, ಹಾಡ್ರೀ ಅಂದರೆ ಹಾಡೋಕೆ ಶುರು ಮಾಡಿದ್ರೆ ನಿಲ್ಲಸೊಂಗೇ ಇಲ್ಲ. ಅಲ್ಲಿ ಕೊಟ್ಟಿರೋದು ಎರಡು ಘಂಟೆ ಸಮಯ. ಏನ್‌ಮಾಡೋದು ಅಂತಹ ತುಂಬಾ ಯೋಚನೆ ಮಾಡಿದೆ. ರಾಮಾ-ಆಂಜನೇಯನ ಕತೆಯನ್ನು ನಾನೇ ಎರಡು ಘಂಟೆಗೆ ಆಗುವ ಹಾಗೆ ಬೇಕ-ಬೇಕಾದ ಸಂಭಾಷಣೆಯನ್ನು ಉಳಿಸಿಕೊಂಡು ಹಾಡುಗಳನ್ನು ಸಂಕ್ಷಿಪ್ತಗೊಳಿಸಿ ಸ್ಕ್ರಿಪ್ಟ್ ಸಿದ್ಧಪಡಿಸಿಬಿಟ್ಟೆ. ತೊಗಲುಗೊಂಬೆ ಆಟದವರು ಅಭ್ಯಾಸ ಮಾಡ್ತಾ-ಮಾಡ್ತಾ ಸಂಜೆಯಾಗುತ್ತಿದ್ದಂತೆ ಇನ್ನೇನೋ ಬೇಕು, ಅಂದ್ರು ಮಾವ ನನ್ನ ಹೊರಗೆ ಕರೆದು, ವೀರಣ್ಣ ಇವರು ಕುಡಿಯಾಕೆ ಕೇಳ್ತಾರಪ್ಪ ಬರೀಕೈಲಿದ್ದೇವಿ ಅಂತ ಹೇಳಿದ್ರು. ನಾನು ಕೂಡಲೇ ಕಿರಾಣಿ ಅಂಗಡಿಯಲ್ಲಿ ಸಾಲ ಹೇಳಿ ರಾಗಿ, ಜೋಳ, ಬೇಳೆ ಉದ್ರಿ ತಗೊಂಡೆ. ಒಬ್ಬ ಯಜಮಾನನಿಗೆ ಸರಾಯಿ ಅಂಗಡೀಲಿ ಬೆಂಗಳೂರಲ್ಲಿ ಆಟ ಆಡ್ತೀವಿ ಬಂದು ದುಡ್ಡು ಕೊಡ್ತೇವಿ ಅಂತ ಸರಾಯಿ ಕೊಡು ಅವರಿಗೆ ಅಂದೆ. ಇದು ಸತ್ಯ ಸಂಗತಿ ಸ್ವಾಮಿ. ಇಂತಹ ಕಷ್ಟದ ದಿನಗಳನ್ನು ದಾಟಿ ಇವತ್ತು ನಿಮ್ಮ ಮುಂದೆ ಮನುಷ್ಯನಾಗಿ ನಿಂತಿದ್ದೇನೆ. ಅವತ್ತೇ ನಾನು ಬೆಂಗಳೂರಿನಲ್ಲಿ ತೊಗಲುಗೊಂಬೆ ಆಟದ ಹಿಮ್ಮೇಳದ ಹಾಡು ಹೇಳಿದೆ. ನನ್ನ ಅದೃಷ್ಟ ನಾವು ರಾಮ-ಲಕ್ಷ್ಮಣರ ಕತೆಯನ್ನು ಮನಸ್ಸಿಟ್ಟು ಹೇಳಿದ್ವಿ, ಆಟ ತುಂಬಾ ಚೆನ್ನಾಗಿ ಮೂಡಿಬಂತು. ಅವತ್ತು ಆ ಪ್ರದರ್ಶನಕ್ಕೆ ೨ ರೂಪಾಯಿ ಟಿಕೇಟ್ ಮಾಡಿದ್ರು. ಕಲಾಕ್ಷೇತ್ರ ಭರ್ತಿಯಾಗಿತ್ತು. ನಾನು ಸಂಕ್ಷಿಪ್ತವಾಗಿ ಹೇಳಿ ಮುಗಿಸಿದ್ರೆ ನಮ್ಮ ಹಳ್ಳಿ ಆಟದವರಿಗೆ ನನ್ನ ಮೇಲೆ ಸಿಟ್ಟು ಬಂದ್ಬಿಟ್ಟಿತ್ತು. ಅವರು ೬೦-೭೦ ವರ್ಷದವರು. ನಾನು ಸಣ್ಣವನು. ಏನ್ಮಾಡೋದು ಪಟ್ಟಣದ ಜನಕ್ಕೆ ಹಳ್ಳೀ ಕಲೆಯನ್ನು ಬೇರೆ ತರಹನೇ ತೋರಿಸಬೇಕು. ನನಗೆ ಅರ್ಥವಾಗಿತ್ತು; ನಮ್ಮವರಿಗೆ ಅರ್ಥವಾಗಿರಲಿಲ್ಲ. ಅವರಿಗೆಲ್ಲಾ ನಿಮಗೆಲ್ಲಾ ೫೦೦-೫೦೦ ರೂಪಾಯಿ ಕೊಡ್ತೇನಿ ಅಂತ ಹೇಳಿಬಿಟ್ಟೆ. ಅದಕ್ಕೆ ಅವರು ನಾನು ಹೇಳಿದಕ್ಕೆಲ್ಲಾ ಸೈ ಎಂದರು. ದೇವರ ದಯೆ ಅವರಿಗೆಲ್ಲ ೫೦೦-೫೦೦ ಕೊಟ್ಟಮೇಲೂ ನನಗೆ ೧೫೦೦ ರೂಪಾಯಿ ಉಳಿದು ಬಿಟ್ಟಿತ್ತು.

ಈ ಹಿಂದೆ ಎಷ್ಟೇ ಚೆನ್ನಾಗಿ ನಾಟಕ ಆಡಿದ್ರೂ ಇಷ್ಟು ದುಡ್ಡು ಉಳಿದಿರಲಿಲ್ಲ. ಇನ್ನು ತೊಗಲುಗೊಂಬೆಗಳನ್ನು ಬಿಡಬಾರದು ಅಂತ ತೀರ್ಮಾನಿಸಿಬಿಟ್ಟೆ. ಅಂದಿನಿಂದ ತೊಗಲುಗೊಂಬೆ ಆಟ ನನ್ನ ಬಾಳಿನ ಏಕೈಕ ಕಾಯಕ ಎಂಬಂತಾಯಿತು. ೭ ಅಡಿಯ ರಾಮನಗೊಂಬೆ, ೬ ಅಡಿಯ ಆಂಜನೇಯನಗೊಂಬೆ, ೫ ಅಡಿಯ ಸೀತೆಯ ಗೊಂಬೆ

ಹೊತ್ತು ಊರೂರು ತಿರುಗಿದೆ. ತೊಗಲುಗೊಂಬೆ ಆಟದ ಸಂಪ್ರದಾಯಿಕ ಹಾಡುಗಳನ್ನು ನಾನು ನಾಟಕದಿಂದ ಬಂದವನಾದರೂ ಒಂದು ಮಾತನ್ನೂ ಬದಲಾಯಿಸಲಿಲ್ಲ. ತೊಗಲುಗೊಂಬೆಯ ಪರಂಪರೆಗೆ ಧಕ್ಕೆ ತರಲಿಲ್ಲ. ನಮ್ಮ ಹಿರಿಯರು ಏನು ಹಾಡುತ್ತಿದ್ದರೋ ಅವೇ ಹಾಡುಗಳನ್ನು, ಏನು ಸಂಭಾಷಣೆಗಳನ್ನು ಹೇಳುತ್ತಿದ್ದರೋ ಅವುಗಳನ್ನು ಸ್ವಲ್ಪವೂ ಅಪಭ್ರಂಶವಾಗದಂತೆ ಪದ ಪ್ರಯೋಗಗಳಿಗೆ ತೊಂದರೆಯಾಗದಂತೆ ಸಂದರ್ಭಕ್ಕೆ ಹೊಂದಿಕೆಯಾಗುವ ಹೆಜ್ಜೆಗತಿಗಳೊಂದಿಗೆ ಸಮಯವನ್ನು ಸಂಕ್ಷೇಪಗೊಳಿಸಿಕೊಂಡು ತೊಗಲುಗೊಂಬೆ ಆಟ ಆಡಿಸಿದ್ದೇನೆ. ಈ ಕಲೆ ನನ್ನ ಕೈ ಹಿಡಿದಿದೆ. ಪ್ರತಿ ಪ್ರದರ್ಶನದಿಂದಲೂ ಸಾವಿರಾರು ರೂಪಾಯಿ ಹಣ ಉಳಿಯಲಾರಂಭಿಸಿತು. ನಮ್ಮ ತಂಡಕ್ಕೆ ಒಂದು ಹೆಸರಿಡಬೇಕು ಅಂದಾಗ ನನ್ನ ಹೆಂಡತಿ ಹೇಳಿದಳು 'ಯಾವಾಗಲೂ ಸಾಮಾನ್ಯವಾಗಿ ತೊಗಲುಬೊಂಬೆ ತಂಡಕ್ಕೆ ಶ್ರೀರಾಮ ತೊಗಲುಗೊಂಬೆ ತಂಡ ಅಂತ ಹೆಸರು ಇಡುತ್ತಾರೆ. ಆದರೆ ರಾಮನ ಸೇವೆಯನ್ನು ಮಾಡ್ತೀದಿ ಅದಕ್ಕಾಗಿಯೇ ನೀನು ಈ ತಂಡಕ್ಕೆ **ಶ್ರೀ ರಾಮಾಂಜನೇಯ ತೊಗಲುಗೊಂಬೆ ತಂಡ** ಅಂತ ಹೆಸರಿಡು' ಅಂದಳು. ಅದೇ ಹೆಸರಿನಿಂದ ತಂಡ ಬೆಳೆದು ಬಂದಿತು". ವೀರಣ್ಣ ನೆನಪಿನಂಗಳದಿಂದ ಈ ತಂಡ ಬೆಳೆದುಬಂದ ಬಗೆಯನ್ನು ವಿವರಿಸಲಾರಂಭಿಸಿದರು.

೭. ಆರ್ಥಿಕ ಅನುದಾನ ಪಡೆಯುವತ್ತ

ವೀರಣ್ಣ ತಮ್ಮ ತಂಡಕ್ಕೆ ಆರ್ಥಿಕ ಅನುದಾನ ದೊರಕಿದ ಬಗ್ಗೆ ವಿವರಿಸುತ್ತಾ "ವೀರಣ್ಣ ಅವರ ತಂಡ ಆರಂಭದಲ್ಲಿ ರಾತ್ರಿ ಎಲ್ಲಾ ನಡೆಯುತ್ತಿದ್ದ ಕಾರ್ಯಕ್ರಮವನ್ನು ಎರಡುಘಂಟೆಗೆ ಇಳಿಸಿ ಕಾರ್ಯಕ್ರಮಗಳನ್ನು ನೀಡಲಾರಂಭಿಸಿತು. ೮–೧೦ ಪ್ರಯೋಗಗಳು ಯಶಸ್ವಿಯಾದವು ಆ ಸಮಯದಲ್ಲಿ ಪ್ರಜಾವಾಣಿ ಹಾಗೂ ಕನ್ನಡಪ್ರಭದೊಳಗೆ ಜಾನಪದ ಕಲೆಗೆ ಕೇಂದ್ರ ಸರ್ಕಾರದ ಸಂಸ್ಕೃತಿ ಇಲಾಖೆ ಸಹಾಯ ಮಾಡುತ್ತದೆ ಅನ್ನುವ ಪ್ರಕಟಣೆ ಬಂದಿತ್ತು. ಅದನ್ನು ಓದಿದ ವೀರಣ್ಣರಿಗೆ ರಾತ್ರಿ ಇಡೀ ನಿದ್ದೆಬರಲಿಲ್ಲ. ಏನಾದರೂ ಮಾಡಿ ಈ ಧನಸಹಾಯ ಪಡೆದು ಒಂದು ಒಳ್ಳೆಯ ಪ್ರದರ್ಶನ ನೀಡುವ ಪ್ರಯತ್ನ ಮಾಡಬೇಕು ಎಂದುಕೊಂಡರು. ಒಬ್ಬ ಇಂಗ್ಲಿಷ್ ಮೇಸ್ಟ್ರು ಹತ್ತಿರ ಹೋಗಿ ಅರ್ಜೀಲಿ ಏನೇನು ತುಂಬಬೇಕು ಎಂದು ತಿಳಿದುಕೊಂಡರು. ಆ ನಂತರ ಎಲ್ಲಾ ಮಾಹಿತಿಗಳನ್ನು ಭರ್ತಿಮಾಡಿ ಅರ್ಜಿಹಾಕಿದರು. ಆ ಅರ್ಜಿ ಹಾಕಿದರೆ ಒಂದು ಟೆಸ್ಟ್ ಇಲ್ಲ, ಪರೀಕ್ಷೆ ಇಲ್ಲ, ಒಂದು ಮೀಟಿಂಗ್‌ನಲ್ಲಿ ಅದಕ್ಕೆ ಸಂಬಂಧಿಸಿದ ತಜ್ಞರ ಸಮಿತಿ ಅನುದಾನ ನೀಡುವ ಬಗ್ಗೆ ಶಿಫಾರಸು ಮಾಡುವುದಷ್ಟೆ. ಅಂತಹ ಮೀಟಿಂಗ್‌ನಲ್ಲಿ ಈ ಅರ್ಜಿ ಕಮಲಾದೇವಿ ಚಟ್ಟೋಪಾಧ್ಯಾಯ ಅವರಿಗೆ ಪರಿಶೀಲನೆಗೆ ಸಿಕ್ಕಿದೆ.

ಕರ್ನಾಟಕಕ್ಕೆ ಸಂಬಂಧಿಸಿದ ಅರ್ಜಿಗಳು ಅಂತ ಅವನ್ನು ಪರಿಶೀಲಿಸುವಾಗ ಆ ಅಮ್ಮ ಕಮಲಾದೇವಿ ಚಟ್ಟೋಪಾಧ್ಯಾಯ ಅವರು 'ಅಳಿದು ಹೋಗ್ತಾ ಇರುವಂತಹ ಇಂತಹ ಕಲೆಗೆ ಪ್ರೋತ್ಸಾಹ ನೀಡಬೇಕು' ಅಂತ ಯೋಜನೆ ಮಾಡಿದ್ದಾರೆ ಅಂತ ತಿಳಿಸಿ ಈ ಬಗ್ಗೆ ಶಿಫಾರಸು ಮಾಡಿದ್ದರು. ಕಮಲಾದೇವಿ ಚಟ್ಟೋಪಾಧ್ಯಾಯ ಅವರು ರಾಜಸ್ಥಾನ, ಗುಜರಾತ್ ಮೊದಲಾದ ಕಡೆ ಇಂತಹ ಅಳಿದು ಹೋಗುತ್ತಿದ್ದ ಕಲೆಗೆ ಲಕ್ಷಾಂತರ ರೂಪಾಯಿ ಅನುದಾನ ನೀಡಿ ಅವುಗಳ ಉಳಿಕೆಗೆ ಕಾರಣರಾಗಿದ್ದಾರೆ. ಈ ತೊಗಲುಗೊಂಬೆಯಾಟಕ್ಕೆ ಸಹಾಯ ಮಾಡೋಣ ಅಂತ ತೀರ್ಮಾನಿಸಿದರು. "ಆ ಹೆಣ್ಣುಮಗಳಿಂದ ತುಂಬಾ ಅನುಕೂಲವಾಗಿ ಈ ಕಲೆ ಉಳಿಯೋಕೆ ಸಹಾಯ ಮಾಡಿದ ಹಾಗಾಯ್ತು" ಎನ್ನುತ್ತಾರೆ ವೀರಣ್ಣ.

ಆಮೇಲೆ ಏನಾಯ್ತಂದ್ರೆ ಒಂದಿನ ನಾನು ನಾಗೇಗೌಡ್ರಿಗೆ ಫೋನುಮಾಡಿದಾಗ ಅವರು ಬೆಂಗಳೂರಿಗೆ ಬಂದು ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶನ ನೀಡುವ ದಿನ ಬರುವುದಾಗಿ ತಿಳಿಸಿದ್ರು. ಆವಾಗ ನನ್ನ ಅಭ್ಯಾಸ ಏನೊಂದ್ರೆ ಹಿರಿಯರು, ವಿದ್ವಾಂಸರು, ದೊಡ್ಡ ಕಲಾವಿದರು, ಇವರನ್ನು ಕರೆದು ನಾವು ಕಲಾಕ್ಷೇತ್ರದಲ್ಲಿ ಅಭ್ಯಾಸಮಾಡುವಾಗ ಅಥವಾ ಪ್ರದರ್ಶನ ನೀಡುವಾಗ ಕರೆದು ಅವರಿಂದ ಅಭಿಪ್ರಾಯ ತಿಳಿದುಕೊಳ್ಳೋದು ನಮ್ಮ ಉದ್ದೇಶವಾಗಿತ್ತು. ಆದ್ರೆ ಅವತ್ತು ನಾಗೇಗೌಡರೇ ನಿಮ್ಮ ತಂಡ ಕರೆಸಿ ಎರಡು ಘಂಟೆಗೆ ಕಾರ್ಯಕ್ರಮ ನೀಡಿರಿ ಅಂದರು.

ಸರಿ ಅಂತ ನನ್ನ ತಂಡ ಕರೆದುಕೊಂಡು ಹೋಗಿ ಪ್ರದರ್ಶನ ನೀಡಿದಿವಿ. ಹಿನ್ನೆಲೆಯಲ್ಲಿ ನನ್ನ ಜೊತೆ ಬೇರೆಯವರು ಹಾಡಿದ್ರೂ ನನ್ನ ಧ್ವನಿ ಎಲ್ಲರಿಗಿಂತ ಜೋರಾಗಿ ಹೊರಗೆ ಕೇಳಿಬಂತು. ಎಲ್ಲಾ ಕಾರ್ಯಕ್ರಮ ಮುಗಿದ ಮೇಲೆ ನನ್ನ 'ಮೇಡಂ ಒಬ್ಬರು ಕರೀತಿದ್ದಾರೆ' ಎಂದರು. ಹೋಗಿ ನೋಡಿದೆ. ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ. ಅವರು ಕನ್ನಡತಿ ಅನ್ನೋದು ತಿಳಿದಿರಲಿಲ್ಲ. ಹೆಸರು ನೋಡಿ ಬಂಗಾಳಿ ಅಮ್ಮ ಇರಬೇಕು ಅಂದುಕೊಂಡಿದ್ದೆ. 'ಏನಪ್ಪಾ ಯಾರು? ವೀರಣ್ಣ ಅಂದ್ರೆ ನೀನೇನಾ' ಅಂದ್ರು 'ಹೌದಮ್ಮ ನಾನೇ ಬೆಳಗಲ್ಲು ವೀರಣ್ಣ' ಅಂದೆ. 'ಏನೂ, ಕೇಂದ್ರಸರ್ಕಾರಕ್ಕೆ ಏನಾದ್ರೂ ಅರ್ಜಿ ಹಾಕ್ಕೊಂಡಿದ್ರಾ' ಅಂದರು. 'ಹೌದಮ್ಮ ನಮ್ಮ ತೊಗಲುಗೊಂಬೆ ಕಲಾವಿದರು ಎಲ್ಲಾ ಬಡವರು. ಗೊಂಬೆಗಳು ಹೊಸಾವು ಬೇಕು ನಮ್ಮ ಹತ್ರ ಹಣ ಇಲ್ಲ. ವಾದ್ಯಗಳೂ ಇಲ್ಲ. ಧನ ಸಹಾಯ ಕೊಡ್ತಾರೆ ಅಂದ್ರು, ಅರ್ಜಿ ಹಾಕಿದೆ. ಈಗ ಈ ತಂಡವನ್ನು ಕಟ್ಟಿಕೊಂಡು ಮುಂದುವರಿಯಬೇಕೋ ಬೇಡ್ವೋ ಅನ್ನೋ ಗೊಂದಲ. ಕಾರಣವಿಷ್ಟೆ "ಆರ್ಥಿಕ ತೊಂದ್ರೆ. ಬರಿ ನಾಟಕ ಮಾಡಿಕೊಂಡು ಮುಂದುವರಿಯೋಣ ಅನ್ನಿಸುತ್ತೆ" ಅಂದೆ. 'ತೊಗಲು ಬೊಂಬೆ ಆಟ ಬಿಡಬೇಡ. ನಿನಗೆ ಬಿಡುವಿದ್ದಾಗ ನಾಟಕದಲ್ಲಿ ಅಭಿನಯಿಸಿ ಹಾಡುಹೇಳು ಬೇಡ ಅನ್ನೋಲ್ಲ. ಆದರೆ ನೀನು ವೃತ್ತಿಯಾಗಿ ನೆಲೆ ನಿಲ್ಲಬೇಕಾದ್ದು ಈ ಗೊಂಬೆಯಾಟದಲ್ಲಿ. ಇದನ್ನು ಮಾತ್ರ ಯಾವ ಕಾರಣಕ್ಕೂ ಬಿಡಬೇಡ' ಅಂದರು. ಆಮೇಲೆ ಹೇಳದರು. 'ಊರಿಗೆ ಹೋಗಿ ಸರಿಯಾಗಿ ಕೈಕೆಲಸ ಗೊತ್ತಿರೋರಿಂದ ಗೊಂಬೆ ಮಾಡಿಸಲು ಎಷ್ಟು ದುಡ್ಡು ಖರ್ಚಾಗುತ್ತೆ ಅಂತ ಎಸ್ಟಿಮೇಟ್ ಮಾಡಿಸಿ ಕಳುಹಿಸಿ. ಕವರಿಂಗ್ ಲೆಟರ್ ಹೀಗೆ ಇರಬೇಕು' ಅಂತ ಒಂದು ಮಾದರಿ ತೋರಿಸಿ ಕಳುಹಿಸಿದರು.

ನಾನು ಒಬ್ಬ ವಿದ್ವಾಂಸರ ಬಳಿಗೆ ಬಂದು ಎಸ್ಟಿಮೇಟ್ ತಯಾರು ಮಾಡಿಸೋಕೆ ಕೂತೆ. ಅವರು ಕೇಳಿದರು 'ಎಷ್ಟು ಲಕ್ಷಕ್ಕೆ ಮಾಡ್ಲಿ' ಅಂತ. ಅಯ್ಯೋ ಬ್ಯಾಡಿ ಬ್ಯಾಡಿ ಅಂದೆ. 'ಅಯ್ಯೋ, ನೀನೇನು ತಿಳಕೊಂಡಿ ಕಮಲಾದೇವಿ ಚಟೋಪಾಧ್ಯಾಯ ಅಂದರೆ. ಆಕೆ ಲಕ್ಷ ಲಕ್ಷರೂಪಾಯಿ ಅನುದಾನ ಕೊಡ್ತಾರೆ ಏಕಂದ್ರೆ ಅವರಿಗೆ ಸಂಗೀತ ಅಂದ್ರೆ ಪ್ರಾಣ. ಜನಪದ ಕಲೆ ಅಂದ್ರೆ ಇನ್ನೂ ಅಕ್ಕರೆ. ನಿನ್ನ ಬಡತನ ತೀರಿ ಹೋಗ್ತದೆ. ಎಷ್ಟು ನಾಲ್ಕು ಲಕ್ಷಕ್ಕೆ ಮಾಡ್ಲಾ. ಇಲ್ಲ ಎರಡೇ ಲಕ್ಷಕ್ಕೇ ಸಾಕ ಅಂದರು. ನಾನು ಗಾಬರಿ ಬಿದ್ದೆ. ನಾನು ಹತ್ತು ಇಪ್ಪತ್ತು ರೂಪಾಯಿಗೆ ಬೇಡಿದ ಮನುಷ್ಯ. ನನ್ನ ಮಿತಿಗೆ ಮೀರಿದ್ದು ಅನಿಸಿತು. ಅದಕ್ಕೆ ಕೊನೆಗೆ ಇಪ್ಪತ್ತೈದು ಸಾವಿರ ರೂಪಾಯಿಗೆ ಎಸ್ಟಿಮೇಟ್ ಮಾಡಿಸಿದೆ. ಸರ್ಕಾರದಾಗೆ ಸಾಮಾನ್ಯವಾಗಿ ಒಪ್ಪಿಗೆ ಆದ್ರೆ ಮುಕ್ಕಾಲುಭಾಗದ ಹಣ ಮೊದಲು ಕಳಿಸುತ್ತಾರೆ. ಪೂರ್ಣ ಕೆಲಸವಾದ ಮೇಲೆ ಉಳಿದ ಹಣ ಕೊಡುತ್ತಾರೆ. ಆದ್ರೆ ಆಯಮ್ಮ ಒಮ್ಮೆಗೇ ಇಪ್ಪತ್ತೈದು ಸಾವಿರ ರೂಪಾಯಿಗೆ ಡಿಮ್ಯಾಂಡ್ ಡ್ರಾಫ್ಟ್ ಕಳಿಸಿಬಿಟ್ಟರು. ಅಷ್ಟು ಹಣ ನನಗೆ ಒಮ್ಮೆಲೇ ದೊರಕಿದ್ದು ನೋಡಿ ನನಗೆ ಹೃದಯ ಭಾರಾಗಿ ಕಣ್ಣೆಲ್ಲಾ ಮಂಜಾಗಿಬಿಡ್ತು. ಅಂಥಾ ದೊಡ್ಡ ಹೃದಯದ ಅಮ್ಮ. ಅದು ನನ್ನ ಕೆಲಸಕ್ಕೆ ತುಂಬಾ

ಸ್ಫೂರ್ತಿಕೊಟ್ಟುಬಿಡ್ತು. ಅದರಲ್ಲಿ ಅರ್ಧದಷ್ಟು ಹಣವನ್ನು ಗೊಂಬೆಗಳಿಗೆ ಖರ್ಚು ಮಾಡೋಣ ಅಂತ ಕೆಲಸ ಶುರುಮಾಡಿದೆವು.

ಇವತ್ತಿಗೂ ನನಗೆ ಗೊಂಬೆ ಚಿತ್ರ ಬರೀಲಿಕ್ಕೆ ಬರಲ್ಲಾ ಆದ್ರೆ ನನ್ನ ಮಕ್ಕಳು ಕಲಿತಿದ್ದಾರೆ. ಆ ಕಲೆ ಗೊತ್ತಿದ್ದವರನ್ನು ಸೇರಿಸಿ ಅವರ ಜೊತೆ ಮಕ್ಕಳನ್ನೂ ಕೂಡಿಸಿಕೊಂಡು ವಿಧವಿಧದ ಗೊಂಬೆಗಳನ್ನು ತಯಾರು ಮಾಡಿದೆವು. ಒಂದಿಷ್ಟು ಹಣಕ್ಕೆ ವಾದ್ಯಗಳನ್ನು ತಂದೆವು. ಈ ಇಪ್ಪತ್ತೈದು ಸಾವಿರ ರೂಪಾಯಿ ಧನಸಹಾಯದಿಂದ ನನಗೆ ಹೊಸ ಹೊಸರೀತಿಯ ಗೊಂಬೆ ಮಾಡಿಸಲು ಆಸಕ್ತಿ ಮೂಡಿತು. ನಾನು ಮೊದಲೇ ರಂಗಭೂಮಿಯಲ್ಲಿ ನಾಟಕಗಳಲ್ಲಿ ಕೆಲಸ ಮಾಡಿದ್ದರಿಂದ ಹೊಸಹೊಸ ಸ್ಕ್ರಿಪ್ಟ್‌ಗಳನ್ನು ಬರೆಯುವ ಉತ್ಸಾಹ ಬಂದಿತ್ತು.

ಬಹುಶಃ ಇದೇ ಹುಚ್ಚಿನಾಗೆ ನಾನು ಹೀಗೆ ದುಡಿದ ಎಲ್ಲಾ ಹಣವನ್ನು ಖರ್ಚು ಮಾಡಿಬಿಡುತ್ತಿದ್ದೆ. ನನ್ನ ಹೆಂಡತಿ ಮಕ್ಕಳು ನನ್ನನ್ನು ತುಂಬಾ ಕಂಟ್ರೋಲ್ ಮಾಡಿದ್ದಾರೆ. ಇಲ್ಲವಾದರೆ ನಾನು ಎಲ್ಲಾ ಕಳೆದುಕೊಂಡು ಮತ್ತೆ ನಿರ್ಗತಿಕನಾಗಿ ಬಿಡುತ್ತಿದ್ದೆ. ನನಗೆ ವ್ಯವಹಾರದ ಜ್ಞಾನ ಕಡಿಮೆ. ಅಥವಾ ಈ ಹಣ ಉಳಿಸಿ ಸ್ವಂತಕ್ಕೆ ಇರಿಸಿಕೋಬೇಕು ಅನ್ನೋ ಆಸೆ ನನಗೆ ಇರಲಿಲ್ಲ. ಅದರಿಂದಾಗಿ ನನ್ನ ಹೆಂಡತಿ ಮಕ್ಕಳು ಈ ಬಗ್ಗೆ ಹೆಚ್ಚು ಗಮನ ನೀಡಬೇಕಾಗಿ ಬಂದಿತ್ತು ಅನಿಸುತ್ತೆ.

ಇಂತಹ ದಿನಗಳಲ್ಲಿ ನಾನು ಪ್ರಥಮ ಬಾರಿಗೆ ಹಣಕಾಸಿನ ಲಾಭದ ಕಡೆಗೆ ಗಮನನೀಡಿ ರಂಗ ನಾಟಕಕ್ಕಿಂತ ತೊಗಲುಗೊಂಬೆ ಆಟ ನನಗೆ ಹೆಚ್ಚು ಹಣ ಉಳಿಸುತ್ತೆ ಅಂತ ತೀರ್ಮಾನಿಸಿ ತೊಗಲುಗೊಂಬೆ ಆಟವನ್ನೇ ನನ್ನ ವೃತ್ತಿಯಾಗಿ ಸ್ವೀಕರಿಸಿ ಪೂರ್ಣ ಪ್ರಮಾಣದಲ್ಲಿ ನನ್ನನ್ನು ತೊಡಗಿಸಿಕೊಂಡೆ'. ವೀರಣ್ಣನವರ ಮಾತುಗಳು ಒಂದೊಂದಾಗಿ ಅವರ ಬೆಳವಣಿಗೆಯನ್ನು ವಿವರಿಸುತ್ತಾ ಸಾಗಿದವು.

೮. ಹೊಸ ಹೊಸ ಪ್ರಯೋಗಗಳತ್ತ

ಬೆಳಗಲ್ಲು ವೀರಣ್ಣ ಆರ್ಥಿಕ ಲಾಭ ಮತ್ತು ಚಿಕ್ಕದಾದ ತಂಡವನ್ನು ನಿರ್ವಹಣೆ ಮಾಡಲು ಅನುಕೂಲ ಎಂಬ ಕಾರಣಕ್ಕಾಗಿ ತೊಗಲು ಬೊಂಬೆಯಾಟವನ್ನೇ ಪ್ರಮುಖ ವೃತ್ತಿಯನ್ನಾಗಿ ಆಯ್ದುಕೊಂಡರು. ಅವರಿಗೆ ಹೊಸತನ್ನು ಸೃಷ್ಟಿಸುವ ಆಶಯ ಆಂತರ್ಯದಲ್ಲಿ ಇತ್ತು. ಈ ತುಡಿತದ ಫಲವಾಗಿಯೇ ಹೊಸಹೊಸ ಪ್ರಯೋಗಗಳು ತೊಗಲುಬೊಂಬೆಯಾಟದಲ್ಲಿ ಕಾಣಿಸಿಕೊಂಡವು. ಅವುಗಳ ಕುರಿತು ವೀರಣ್ಣ ಹೀಗೆ ಹೇಳುತ್ತಾರೆ.

'ಬೆಂಗಳೂರಿಗೆ ಒಂದುಸಾರಿ ಹೋಗಿ ಬರ್ಲಿಕ್ಕೆ ಬಳ್ಳಾರಿಯಿಂದ ಒಟ್ಟು ಐವತ್ತು ರೂಪಾಯಿ ಇದ್ದರೆ ಸಾಕಾಗ್ತಿತ್ತು. ಬೆಂಗಳೂರಿನಿಂದ ಬಳ್ಳಾರಿಗೆ ಆಗ ರೈಲು ಛಾರ್ಜು ಆರು ರೂಪಾಯಿ, ಹಾಗೂ ಐದು ರೂಪಾಯಿ ರೂಮು ಬಾಡಿಗೆ. ನಾಟಕ ಇರಲಿ, ಆಟ ಇರಲಿ ಅಥವಾ ಇನ್ನೆಂಥದೋ ಕೆಲಸ ಇರಲಿ ಬೆಂಗಳೂರಿಗೆ ಹೋಗಿ ಬರ್‍ತಾಇದ್ದೆ. ಒಂದ್ಸಾರಿ ಹೀಗೆ ಬೆಂಗಳೂರಿಗೆ ಹೋಗಿ ಫುಟ್‌ಪಾತಲ್ಲಿ ಓಡಾಡ್ತಾ ಇದ್ದಾಗ ಅಲ್ಲಿ ಪುಸ್ತಕರಾಶಿ ಹಾಕಿ ಹಳೆ ಪುಸ್ತಕ ಮಾರ್‍ತಾರಲ್ಲವಾ ಅದ್ರಲ್ಲಿ ಒಂದು ಪುಸ್ತಕ ಕೊಂಡುಕೊಂಡೆ. 'ಸ್ವಾತಂತ್ರ್ಯ ಸಂಗ್ರಾಮ' ಅಂತ. ಇಡೀ ರಾತ್ರಿ ನಿದ್ರೆ ಮಾಡದೆ ಆ ಪುಸ್ತಕ ಪೂರಾ ಓದಿ ಮುಗಿಸಿದೆ. ಯಾವುದೋ ಒಂದು ಕಾರ್ಯಕ್ರಮಕ್ಕೆ ಆಟ ಆಡಿಸೋಕೆ ಆಹ್ವಾನ ಬಂದಿತ್ತು. ಯಾವುದೋ ಕಥೆ ಮಾಡೋ ಬದಲು ಇದನ್ನೇ ಮಾಡೋಣ ಅನ್ನಿಸಿತು. ಇಂತಹ ಸಂದರ್ಭದಲ್ಲಿ ನಾನು ಒಬ್ಬ ಸಾಹಿತಿಗಳ ಜೊತೆ ಕುಳಿತು ಚರ್ಚೆ ಮಾಡುತ್ತಿದ್ದೆ. ಏಕೆಂದರೆ ನಾನು ಡೈಲಾಗ್ ಹೇಳೋದು, ಹಾಡುಹೇಳೋದು ಮಾಡ್ತಾ ಇದ್ದರೂ, ಕಥೆ ಹೀಗೇ ಇರಬೇಕು ಅಂದುಕೊಳ್ತಾ ಇದ್ದರೂ ಅದನ್ನು ಪೂರ್ಣರೂಪದಲ್ಲಿ ಬರೆದುಕೊಡುವ ಕೆಲಸವನ್ನು ನನ್ನ ಸಾಹಿತಿ ಮಿತ್ರರಾದ ವೈ. ರಾಘವೇಂದ್ರರಾವ್ ಅವರಿಗೆ ವಹಿಸುತ್ತಿದ್ದೆ. ಅವರು ಅತ್ಯಂತ ಪ್ರೀತಿಯಿಂದ ಆ ಕೆಲಸ ಮಾಡುತ್ತಿದ್ದರು. ಯಾಕೆ ನಾನು ಅವರನ್ನು ಆಶ್ರಯಿಸುತ್ತಿದ್ದೆ ಅಂದರೆ ನಾನು ಮಾಡುವ ಆಟದಲ್ಲಿ ನನಗೆ ಪ್ರೀತಿ ಇರತಕ್ಕಂತಹ ಹಾಡು, ಸಂಭಾಷಣೆ ಬರಬೇಕಲ್ಲ. ಅದಕ್ಕೆ ಆ ಜವಾಬ್ದಾರಿ ಅವರಿಗೆ ವಹಿಸುತ್ತಿದ್ದೆ.

ಕಥೆ ಸಿದ್ಧವಾಗೋದು ಒಂದು ಮಹತ್ವದ ಕೆಲಸವಾದರೆ ಅದಕ್ಕೆ ಬೇಕಾದ ಗೊಂಬೆ ತಯಾರಿಕೆ ಅದಕ್ಕಿಂತ ಕಷ್ಟದ ಕೆಲಸ ಆಗಿರ್‍ತಿತ್ತು. ಏಕೆಂದ್ರೆ ಕರ್ನಾಟಕ, ತಮಿಳುನಾಡು, ಆಂಧ್ರ ಪ್ರದೇಶ ಮೂರೂ ಕಡೆ ಗೊಂಬೆಗಳು ಇರ್‍ತಿದ್ವು. ಇವು ಒಂದು ಸಂಪ್ರದಾಯಕ್ಕೆ ಸೇರಿದ ಗೊಂಬೆಗಳು. ಬಾಂಬೆ ಸಂಪ್ರದಾಯದ ಗೊಂಬೆಗಳು ಮತ್ತೊಂದು ಸಂಪ್ರದಾಯಕ್ಕೆ ಸಂಬಂಧಿಸಿದ ಗೊಂಬೆಗಳು. ಆದರೆ ಕರ್ನಾಟಕದ ಸುಂದರವಾದ ಗೊಂಬೆಗಳು ಏನು ಇದ್ದವಲ್ಲ ಅಂತಹ ಗೊಂಬೆಗಳು ಈಗ ಇಲ್ಲ. ಯಾರೋ ಮಧ್ಯವರ್ತಿ ವ್ಯಾಪಾರಿಗಳು

ಆ ಗೊಂಬೆಗಳನ್ನು ವಿದೇಶದವರಿಗೆ ಮಾರಿಬಿಟ್ಟಿದ್ದಾರೆ. ಅವೆಲ್ಲಾ ಇಂದು ಲಂಡನ್‌ಗೋ ಅಮೇರಿಕಕ್ಕೋ ಕಳುಹಿಸಿಬಿಟ್ಟಿದ್ದಾರೆ. ನಿಜವಾಗಿ ಕನ್ನಡದವರು ಆಡುತ್ತಿದ್ದ ಗೊಂಬೆಗಳು ತುಂಬಾ ಸುಂದರವಾಗಿ ಇರ್ತಾ ಇದ್ದವು. ಅವುಗಳ ರಚನೆಯನ್ನೇ ಗಮನಿಸಿಕೊಂಡು ನಾನು ಹೊಸಹೊಸ ಗೊಂಬೆಗಳನ್ನು ತಯಾರಿಸಲು ಹೇಳಿದೆ. ನನ್ನ ಮಕ್ಕಳೂ ಈ ಗೊಂಬೆ ತಯಾರಿಕೆಯಲ್ಲಿ ತೊಡಗಿಕೊಂಡರು. ಈಗಾಗಲೇ ಗೊಂಬೆ ತಯಾರಿಸುತ್ತಾ ಇದ್ದವರ ಹತ್ರ ಹೋಗಿ ಹೀಗೇ ಇರಬೇಕು ಅಂತ ಹೇಳ್ತಾಇದ್ದೆ. ನನ್ನನ್ನು ಅರ್ಥ ಮಾಡಿಕೊಂಡ ಅವರು ಸಂಪ್ರದಾಯಕ್ಕೆ ಹೊಂದಿಕೊಂಡು ತಯಾರಿಸುವ ಗೊಂಬೆಗಳ ಜೊತೆ ನನಗೆ ಬೇಕಾದ ಗಾಂಧಿ, ಅಂಬೇಡ್ಕರ್, ಸುಭಾಷ್ ಚಂದ್ರಬೋಸ್ ಮೊದಲಾದವರ ಗೊಂಬೆಗಳನ್ನು ಮಾಡಿಕೊಟ್ಟರು.

ಈಗ ಶುರುವಾಯಿತು ನೋಡಿ ನಿಜವಾದ ಪ್ರಯೋಗ. ನಾವೇನೋ ಸ್ವಾತಂತ್ರ್ಯ ಸಂಗ್ರಾಮ ಗೊಂಬೆಯಾಟವನ್ನು ಆಡೋದು ಅಂತ ನಿರ್ಧಾರ ಮಾಡಿಬಿಟ್ಟೆ. ಆದ್ರೆ ಯಾವ ಹಾಡಿನಿಂದ ಆರಂಭ ಮಾಡಬೇಕು. ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ಇದುವರೆಗೂ ಬೇರೆ ಬೇರೆ ತರಹದಲ್ಲಿ ಕತೆ ಬರೆದವರಿದ್ದಾರೆ. ಬೇರೆ ಬೇರೆ ಜಾತಿ, ಮತ, ಧರ್ಮದವರು ಇದರಲ್ಲಿ ಬರುತ್ತಾರೆ. ಇವರಿಗೆ ಯಾವ ಹಾಡು ಹಾಡಬೇಕು? ಇದು ದೊಡ್ಡ ಪ್ರಶ್ನೆ.

ನಾವು ಹಾಡ್ತಿದ್ದ ಹಾಡೆಲ್ಲಾ ರಾಮ, ಸೀತೆ, ಲಕ್ಷ್ಮಣ, ಭರತ, ಆಂಜನೇಯ ಇವರುಗಳನ್ನು ಗಮನದಲ್ಲಿ ಇಟ್ಟುಕೊಂಡು ಹಾಡ್ತಾ ಇದ್ದದ್ದು

ನನಗೆ ಇದ್ದಕ್ಕಿದ್ದಂತೆ ರಾಮಾಯಣದ ಒಂದು ಪದ್ಯ ನೆನಪಾಯಿತು. ಸ್ವಾತಂತ್ರ್ಯ ಸಂಗ್ರಾಮದ ಕಥೆಯನ್ನು ನಾನೀಗ ಪದ್ಯರೂಪದಲ್ಲಿ ಹೇಳಬೇಕು. ಎಲ್ಲಿಂದ ಆರಂಭಮಾಡುವುದು ಅನ್ನುವಾಗ ಇಡೀ ಭಾರತಕ್ಕೆ ಉತ್ತರದ ಶಿರೋಭಾಗದಲ್ಲಿರುವ ಹಿಮಾಲಯವೆಂಬ ಉತ್ತುಂಗ ಪರ್ವತದ ನೆನಪಾಯಿತು. ಹಾಡು ನನ್ನ ಕಂಠದಿಂದ ಸಿಡಿದು ಹೊರ ಬಂದೇಬಿಟ್ಟಿತು.

ಮಂಗಳಮಯ ಉತ್ತುಂಗ ಹಿಮಾಲಯ
ತಾನೇ ನೋಡಿದಂತಹ ನೋಡಿಹೇಳಿದಂತಹ
ಕತೆಯೊಂದಿದೆ ಕೇಳಿದಿರಾ
ಭಾರತ ಮಾತೆಯ ಶತಶತಮಾನದ
ಉತ್ತುಂಗದ ಕೀರ್ತಿಗೆ ಬಂದೊದಗಿತ್ತು ಬರಸಿಡಿಲು
ತಾಯಿ ಬಂಧನವ ಬಿಡಿಸಲು
ಸಿಡಿಯಿತು ಕೋಟಿ ಕಂಠದ ಜಯಕಾರ
ಸ್ವಾತಂತ್ರ ಸಂಗ್ರಾಮದ ಶ್ರೀ ಕಾರ.......

ಅಲ್ಲಿ ರಾಮಾಯಣದ ಹಾಡುಗಳು. ಇಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಹಾಡುಗಳು. ಅದನ್ನು ರಾಗಕ್ಕಾಗಿ ಇದರಲ್ಲಿ ಸಾಹಿತ್ಯಕ್ಕಾಗಿ ಆರಿಸಿಕೊಳ್ಳುತ್ತಾ ಎರಡನ್ನೂ ಬೆರೆಸಿಕೊಂಡು

ಹಾಡುಗಳ ಸರಣಿಯೊಂದು ಸಿದ್ಧವಾಗಿಬಿಟ್ಟಿತು. ಇನ್ನು ಸಂಭಾಷಣೆಯೋ ಉರಿ ಚಟಾಕಿಗಳು. ಸ್ವಾತಂತ್ರ್ಯ ಸಂಗ್ರಾಮದ ಕಥೆ ಸಿದ್ಧವಾಗಿಬಿಟ್ಟಿತು. ಒಂದು ಹೊಸ ಪ್ರಯೋಗ ಮಾಡಿದ ಮೇಲೆ ಅಂತಹುದೇ ಮತ್ತಷ್ಟು ಪ್ರಯೋಗಗಳನ್ನು ಮಾಡುವುದು ಕಷ್ಟದ ಕೆಲಸವಾಗಿರಲಿಲ್ಲ. ಸ್ವಾತಂತ್ರ್ಯ ಸಂಗ್ರಾಮದ ಕಥೆ ನಂತರ ಮಹಾತ್ಮಾ ಗಾಂಧಿಯ ಕಥೆ ಹಾಗೂ ಬಸವಣ್ಣನ ಕಥೆ ಸಿದ್ಧವಾಯಿತು. ನಮ್ಮೆಲ್ಲರ ಕಣ್ಮಣಿ ದಲಿತೋದ್ಧಾರಕ ಅಂಬೇಡ್ಕರ್ ಅವರ ಜೀವನ ಆಧರಿಸಿ ಕಥೆ ಸಿದ್ಧಮಾಡಿದೆ. ಹೊಸ ಹೊಸ ಪ್ರಯೋಗಗಳು ಒಂದೊಂದೇ ಯಶಸ್ವಿಯಾದವು. ನನಗೆ ಹೆಸರೂ ಬಂತು. ಗೌರವವೂ ಬಂತು.

ಶೈಕ್ಷಣಿಕ ಕಾರ್ಯಕ್ರಮಗಳನ್ನು ಸಿದ್ಧಮಾಡಬೇಕು ಅಂತ ಕರೆ ಬಂತು. ಆರೋಗ್ಯ ಇಲಾಖೆಯಿಂದ ಏಡ್ಸ್ ಬಗ್ಗೆ ಕಾರ್ಯಕ್ರಮ ಮಾಡಬೇಕು ಅಂತ ಕರೆ ಬಂತು. ಒಪ್ಪಿಕೊಂಡು ಸ್ಕ್ರಿಪ್ಟ್ ಸಿದ್ಧ ಮಾಡಿಬಿಟ್ಟೆ.

ಏಡ್ಸ್ ಎಂಬ ಮಹಾಮಾರಿ ರೋಗಬಂತೋ
ಮಹಾಮಾರಿಯಂತೆ ಏಡ್ಸ್ ಎಂಬ ರೋಗ ಬಂದಿತೋ

ಅಂತ ಅದರ ಕಥೆ ಬರೀತಾಬರೀತಾ

ಶುಚಿಪಡಿಸದ ಸೂಜಿಯಿಂದ
ದೀನ ದಲಿತರ ಮೈಗೆ ಚುಚ್ಚುವ
ಏಡ್ಸ್ ಹರಡುವ ಭ್ರಷ್ಟರು ಇದ್ದಾರೋ

ಅಂತ ಹಾಡಿಬಿಟ್ಟೆ.

'ಏನ್ರೀ ಡಾಕ್ಟರ್‌ಗಳನ್ನೆಲ್ಲಾ ಬೈತೀರಲ್ಲಾ' ಅಂದು ಬಿಟ್ಟರು. 'ಇಲ್ಲಾ ಸ್ವಾಮಿ ನಾನು ಒಳ್ಳೇ ಡಾಕ್ಟರಿಗೆ ಬೈದಿಲ್ಲಾ. ಒಬ್ಬೊಬ್ರು ಒಂದೊಂಥರಾ ಹಾಡುಗಳನ್ನು ಕಂಪೋಸ್ ಮಾಡ್ತಾರೆ. ನಾನು ಹೀಗೆ ಮಾಡಿದ್ದೀನಿ. ಒಬ್ಬರ ಸೂಜಿ ತೆಗೊಂಡು ಇನ್ನೊಬ್ಬರಿಗೆ ಸೂಜೀ ಚುಚ್ಚಿದ್ರೆ ರೋಗ ಹರಡುತ್ತೆ ಅನ್ನುವ ವಿಷಯ ಜನರಿಗೆ ತಿಳಿಸಬೇಕು. ಕಲಾವಿದರಿಗೆ ಡಾಕ್ಟರ್ ಆದ್ರೆ ಏನು. ಯಾರಾದ್ರೆ ಏನು. ತಪ್ಪು ಮಾಡ್ತಾರೆ ಅಂತ ಗೊತ್ತಾದ್ರೆ ಅವರ ಬಗ್ಗೆ ಹಾಡು ಹೇಳೇ ಬಿಡ್ತಾರೆ. ಇದೂ ಹಾಗೇನೇ. ಬಡವರಿಗೆ ಗೊತ್ತಾಗಲ್ಲಾ ಅಂತ ಸೂಜಿ ಬದಲಾಯಿಸದೆ ಚುಚ್ಚುವ ಡಾಕ್ಟರಿಗೆ ಮಾತ್ರ ನಾವು ಬಯ್ದಿದ್ದು' ಅಂದುಬಿಟ್ಟೆ.

ಕಲಾವಿದರು ಎಲ್ಲರನ್ನೂ ಸಮನಾಗಿ ಗಮನಿಸಿ ಅವರಲ್ಲಿ ಸಮಾಜಕ್ಕೆ ಕಂಟಕವಾಗೋ ಗುಣ ಇದ್ದರೆ ಅದನ್ನು ಬಿಡಿಸಿ ಹೇಳ್ತಾರೆ. ಹೀಗಾಗಿ ಇದು ನಮ್ಮ ವೃತ್ತಿ ಧರ್ಮ ಆಗುತ್ತೆ. ಯಾರಿಗೋ ಬೇಜಾರಾಗುತ್ತೆ ಅಂತ ಸತ್ಯ ಹೇಳದೇ ಇರೋಕೆ ಆಗೋಲ್ಲ.

ಹೀಗೆ ಹತ್ತು ಹಲವು ಹೊಸಕಥೆಗಳನ್ನು ಸೃಷ್ಟಿಮಾಡಿ ತೊಗಲುಬೊಂಬೆ ಆಟದ ಮೂಲಕ ಹೊಸ ಪ್ರಯೋಗ ಮಾಡೋದು ನನಗೆ ಹವ್ಯಾಸ ಆಗಿಬಿಡ್ತು.

ಇದರ ಹಿಂದೇನೇ ಹಲವು ಸನ್ಮಾನ ಸಮಾರಂಭ ನಡೆದವು. ಅನೇಕ ಪ್ರಶಸ್ತಿ ಬಂದವು. ಆದರೆ ನಾನು ಯಾವತ್ತೂ ಪ್ರಶಸ್ತಿಗಳನ್ನು ಅರಸಿಕೊಂಡು ಹೋಗಲಿಲ್ಲ.

ಅಷ್ಟೇ ಅಲ್ಲ ಇವತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಪ್ರೀತಿಯಿಂದ ನನ್ನ ಕರೆದು ಸನ್ಮಾನಮಾಡಿ ನನ್ನ ಅನುಭವದ ನುಡಿ ಕೇಳಬೇಕಂತಾ ಬಯಸಿದ್ದೀರಿ. ಇಲ್ಲಿ ನಿಮ್ಮ ಪ್ರೀತಿ ದೊಡ್ಡದು. ಎಲ್ಲರಿಗಿಂತ ಹಿರಿಯರು ಮಾನ್ಯ ಕುಲಪತಿಗಳು ಪ್ರೊ. ಅಂಬಳಿಕೆ ಹಿರಿಯಣ್ಣನವರು ನನ್ನ ಮೇಲೆ ಅಭಿಮಾನವಿಟ್ಟು ನಾನು ಮಾಡಿದ ಕೆಲಸ ಸಮಾಜಕ್ಕೆ ಒಳ್ಳೇದು ಮಾಡಿದೆ ಅಂದಿದ್ದಾರೆ. ಅಷ್ಟು ಸಾಕಲ್ಲವೇ. ನಾನು ಮಾಡಿದ ಕೆಲಸ ನನ್ನ ಹೊಟ್ಟೆ ತುಂಬಿಸೋದರ ಜೊತೆಗೆ ಸಮಾಜಕ್ಕೂ ಒಳ್ಳೇದು ಮಾಡಿದೆ ಅಂದ್ರೆ ಅಲ್ಲಿಗೆ ಈ ಜನ್ಮ ಸಾರ್ಥಕವಾಯಿತು ಅಂದುಕೊಳ್ತೇನೆ". ಎಂದು ಹೇಳಿ ಕಣ್ಣುಗಳಲ್ಲಿ ಕಂಬನಿ ತುಂಬಿಕೊಂಡರು ವೀರಣ್ಣ.

೯. ವಿದೇಶದಲ್ಲಿ ಕರ್ನಾಟಕದ ತೊಗಲುಗೊಂಬೆ ಆಟದ ಪ್ರದರ್ಶನ

ಬೆಳಗಲ್ಲು ವೀರಣ್ಣನವರ ಹೊಸ ಹೊಸ ಪ್ರಯೋಗಗಳು ಜನಪ್ರಿಯವಾದಂತೆಲ್ಲ ಅವರಿಗೆ ಅವಕಾಶದ ಬಾಗಿಲು ಹೆಚ್ಚಾಗಿ ತೆರೆದುಕೊಳ್ಳಲಾರಂಭಿಸಿದವು. ಅವುಗಳಲ್ಲೆಲ್ಲಾ ಬಹಳ ಗಮನೀಯ ಅನ್ನುವಂತಹುದು ಅವರ ಯುರೋಪ್ ಪ್ರವಾಸ. ಜರ್ಮನಿ, ಸ್ವಿಟ್ಜರ್ಲೆಂಡ್‌ಗಳಲ್ಲಿ ಅವರು ಕಾರ್ಯಕ್ರಮ ನೀಡಿದ್ದಾರೆ.

'ನಮ್ಮ ಕಲಾ ಪ್ರದರ್ಶನ ನೋಡಿದ ಅವರೆಲ್ಲಾ ಚಪ್ಪಾಳೆ ಹಾಕುತ್ತಿದ್ದರು. ಎದುರಿಗೆ ಸಿಕ್ಕಾಗ ಹಾಯ್ ಹಲೋ ಎನ್ನುತ್ತಿದ್ದರು. ನಮ್ಮ ಭಾಷೆ ಅವರಿಗೆ ಬರಲ್ಲ. ಅವರ ಭಾಷೆ ನಮಗೆ ಬರ್ತಿರ್ಲಿಲ್ಲ. ಆದರೆ ಅವರು ಕಲಾವಿದರಿಗೆ ಗೌರವ ಕೊಡ್ತಿದಾರೆ ಅನ್ನೋದು ಮಾತ್ರ ನಮಗೆ ಅರ್ಥವಾಗ್ತಿತ್ತು.

ಇನ್ನು ರಂಗ ಸಜ್ಜಿಕೆ ವಿಷಯಕ್ಕೆ ಬಂದರೆ ನಾವು ಲೈಟು, ಸ್ಕ್ರೀನ್, ಬಣ್ಣಗಾರಿಕೆ, ತಂತ್ರಗಾರಿಕೆ ಇದಕ್ಕೆ ಅಷ್ಟು ಗಮನ ಕೊಡೋಲ್ಲಾ. ನಮ್ಮ ಯೋಜನೆಯಲ್ಲಿ ಮುಕ್ಕಾಲು ಭಾಗ ಸಂಗೀತ ಅಥವಾ ಹಾಡೋದು. ಇನ್ನು ಉಳಿದಿದ್ದು ಸಂಭಾಷಣೆ. ಆದ್ರೆ ವಿದೇಶದಲ್ಲಿ ಹಾಗಲ್ಲ. ಅಲ್ಲಿ ತಂತ್ರಗಾರಿಕೆ, ಅಚ್ಚುಕಟ್ಟುತನ ಇವು ಬಹಳ ಮುಖ್ಯ. ಮುಕ್ಕಾಲು ಭಾಗ ಹಾಡು, ಸಂಭಾಷಣೆ ನನ್ನದೇ ಇರುತ್ತಿತ್ತು. ಆದ್ರೆ ಈಗ ಈ ವಿದೇಶದಲ್ಲಿ ಅಲ್ಲಿನ ರಂಗ ಸ್ಥಳಕ್ಕೆ ನಮ್ಮ ತಂತ್ರ ಹೊಂದಿಸ್ಕೋ ಬೇಕಾಗಿತ್ತು. ನಿಜಕ್ಕೂ ಅದು ಹೊಸ ಅನುಭವ. ದೇಶ ಸುತ್ತಬೇಕು ಅನ್ನೋ ಮಾತಿನ ಅರ್ಥ ಈವಾಗ ನನಗೆ ಸರಿಯಾಗಿ ತಿಳೀತು. ಆದ್ದರಿಂದ ನನ್ನ ಯೋಚನಾ ಶೈಲಿ ಬದಲಾಯ್ತು. ನಾವೂ ಯಾರಿಗೇನು ಕಡಿಮೆ ಇಲ್ಲ. ನಮ್ಮಲ್ಲಿ ಕಲಾವಿದರಿಗೂ ಅಂತರ ರಾಷ್ಟ್ರೀಯ ಮಟ್ಟದ ಯೋಗ್ಯತೆ ಇದೆ ಅಂತಾ ತಿಳೀತು. ಒಂದು ವಿಷಯ ಮಾತ್ರ ನಿಜ "ಬುದ್ಧಿವಂತಿಕೆಯಲ್ಲಿ, ಬಾಂಧವ್ಯದಲ್ಲಿ, ಕರುಳು ಸಂಬಂಧದ ವಿಷಯದಲ್ಲಿ ನಮ್ಮ ಭಾರತೀಯರಿಗೆ ಬೇರೆ ಯಾರೂ ಸಮಾನರಲ್ಲ. ನಮ್ಮ ಭಾರತವೇ ಸರ್ವ ಶ್ರೇಷ್ಠ".

ಆದರೆ ಸ್ವಚ್ಛತೆ ವಿಷಯಕ್ಕೆ ಬಂದಾಗ. ಜರ್ಮನಿಗಿಂತ ಸ್ವಿಜರ್‌ಲ್ಯಾಂಡ್ ಬಹುಪಾಲು ಮೇಲು. ನಾವು ಕಾರಲ್ಲಿ ಹೋಗ್ತಾ ಇದ್ದಾಗ ಕಿಡಕೀಲಿ ಕಂಡದ್ದು. ಹುಡುಗ ಆ ಫುಟ್‌ಪಾತ್ ಮೇಲೆ ಒಂದೇ ಒಂದು ಎಲೆ ಬಿದ್ದಿತ್ತು. ಒಬ್ಬ ಹುಡುಗ ಅದನ್ನು ತೆಗೆದುಕೊಂಡು ಹೋಗಿ ಕಸದ ಬುಟ್ಟಿಗೆ ಹಾಕಿ ಬಂದ. ಅಂದ್ರೆ ಚಿಕ್ಕಮಕ್ಕಳಲ್ಲೂ ಈ ಕ್ಲೀನ್ಲಿನೆಸ್ ಬಗ್ಗೆ ಬಹಳ ತಿಳುವಳಿಕೆ ತುಂಬಿ ಬಿಟ್ಟಿದ್ದಾರೆ.

ಪರಿಸರ, ವಿಜ್ಞಾನ, ಸ್ವಚ್ಛತೆ ಹಾಗೂ ಇಂತಹುದೇ ವಿಚಾರಗಳ ಬಗ್ಗೆ ಅವರು ನಮಗಿಂತ ಬಹಳ ಮುಂದೆ ಇದ್ದಾರೆ. ಆದರೆ ಪ್ರೀತಿ, ವಿಶ್ವಾಸ ಇವುಗಳಲ್ಲಿ ನಾವು ಭಾರತೀಯರೇ ಮುಂದೆ.

ಆದರೆ ನಮ್ಮಲ್ಲಿ ಭ್ರಷ್ಟಾಚಾರ. ಕೋಟಿ ಕೋಟಿ ರೂಪಾಯಿ, ನಮಗೆ ಅದನ್ನು ಬಾಯಲ್ಲಿ ಹೇಳೋಕೂ ಬರಲ್ಲ. ಅಷ್ಟು ದುಡ್ಡನ್ನು ತಿಂದು ತೇಗಿ ಬಿಡ್ತಾರಲ್ಲ. ದಬ್ಬಾಳಿಕೆ ಮಾಡಿ ದೇಶವನ್ನು ಸರ್ವನಾಶ ಮಾಡಿ ಬಿಡ್ತಿದಾರಲ್ಲ. ಅದರ ಬಗ್ಗೆ ನಮಗೆ ತುಂಬಾ ನೋವಿದೆ. ಅವರ ದುಷ್ಟಬುದ್ಧಿ, ಕೆಟ್ಟಬುದ್ಧಿ ಬಗ್ಗೆ ಜನಕ್ಕೆ ಅರಿವು ಬರಬೇಕು. ಆವಾಗ ಮಾತ್ರ ನಮ್ಮ ದೇಶ ಉದ್ಧಾರ ಆಗ್ತದೆ.

ಭಾರತೀಯರು ಕಲೆ, ಕಲಾವಿದರು ಹಾಗೂ ಹಿರಿಯರಿಗೆ ಗೌರವ ನೀಡುವುದರಲ್ಲಿ ಹೆಚ್ಚಿಗರು. ನಾವು ನಮ್ಮ ಸಂಸ್ಕೃತಿ ಬಗ್ಗೆ ತುಂಬಾ ಹೆಮ್ಮೆ ಇದೆ. ಪ್ರೀತಿ ವಿಶ್ವಾಸಕ್ಕೆ ಭಾರತೀಯರಿಗೆ ಭಾರತೀಯರೇ ಸಾಟಿ. ಆದರೆ ರಾಜಕೀಯವಾಗಿ ಭ್ರಷ್ಟಾಚಾರ ಇಲ್ಲದ ಹಾಗೆ ಮಾಡಿದರೆ ಅಧಿಕಾರಿಗಳು ಲಂಚಕ್ಕೆ ಆಸೆ ಪಡದೇ ಇದ್ರೆ ದೇಶ ಇನ್ನೂ ಚೆನ್ನಾಗಿ ಅಭಿವೃದ್ಧಿ ಆಗುತ್ತೆ". ಜಾನಪದ ಕಲಾವಿದ ವೀರಣ್ಣನ ಹಾರೈಕೆ ನಿಜವಾಗಲಿ ಅಂತ ಎಲ್ಲರಿಗೂ ಅನ್ನಿಸುತ್ತದೆ.

೧೦. ಯುವ ಜನತೆಗೊಂದಿಷ್ಟು ಕಿವಿ ಮಾತು

ಕಲಾವಿದ ಬೆಳಗಲ್ಲು ವೀರಣ್ಣ ಹುಡುಗುತನದ ದಿನಗಳಲ್ಲಿನ ಕಷ್ಟಗಳನ್ನು ನೆನಪು ಮಾಡಿಕೊಳ್ಳುತ್ತಲೇ ತಮಗೆ ದೊರೆತ ದಿವ್ಯ ಪುರಸ್ಕಾರ ಸನ್ಮಾನ ಗೌರವಗಳನ್ನು ನೆನಪಿಸಿಕೊಳ್ಳುತ್ತಾರೆ. ಇವತ್ತಿನ ಹುಡುಗರ ಶಕ್ತಿ ಜಾಣ್ಮೆ ಕಲಿಕಾ ಶಕ್ತಿಗಳ ಕುರಿತು ಅವರಿಗೆ ಹೆಮ್ಮೆ ಇದೆ.

ಪ್ರಾಥಮಿಕ ಶಾಲೆಗೂ ಹೋಗದ ತಾನು ಕನ್ನಡ ಜನಪದ ಕಲಾವಿದರ ಮಹಾ ಸಮ್ಮೇಳನದ ಅಧ್ಯಕ್ಷನಾಗಿ ನಿಲ್ಲಲು ಮಹತ್ತಾದ ಕಾರಣ ಕಲಿಯಬೇಕೆಂಬ ಶ್ರದ್ಧೆ ಹಾಗೂ ಕೆಲಸದಲ್ಲಿ ನಿಷ್ಠೆ ಎನ್ನುತ್ತಾರೆ ಬೆಳಗಲ್ಲು ವೀರಣ್ಣ.

ಅವರು ಚಿಕ್ಕಂದಿನಲ್ಲಿ ಶಾಲೆಯಲ್ಲಿ ಕಲಿಯಲು ಸಾಧ್ಯವಾಗದೇ ಇದ್ದುದನ್ನು ಗವಾಯಿಗಳ ಆಶ್ರಮದಲ್ಲಿ ಕಲಿತರು. ಅಲ್ಲಿಂದ ಮುಂದೆ ಯಾವಾಗ ಅವಕಾಶ ದೊರೆತರೂ ಓದುವುದು, ಮನನ ಮಾಡಿಕೊಳ್ಳುವುದು ಅವರ ಹವ್ಯಾಸವಾಯಿತು. ಯಾವುದೇ ಹೊಸ ಕಲಾವಿದನನ್ನು ಕಂಡರೂ ಆತನಲ್ಲಿ ಕಲಿಯುವಂತಹುದು ಏನಿದೆ ಎಂದು ಹುಡುಕುವ ಅಭ್ಯಾಸ ಬೆಳೆಸಿಕೊಂಡರು. ಇದರ ಪರಿಣಾಮವಾಗಿ ಇಂದು ಬೆಳಗಲ್ಲು ವೀರಣ್ಣ ಇಡೀ ಕನ್ನಡ ನಾಡು ಹೆಮ್ಮೆ ಪಡುವಂತಹ ಕಲಾವಿದರಾಗಿ ಬೆಳೆದು ನಿಲ್ಲಲು ಕಾರಣವಾಯಿತು. ನಾಟಕ ರಂಗಕ್ಕೆ ಗುಬ್ಬಿ ವೀರಣ್ಣ ಹೆಸರುವಾಸಿಯಾದರು ಅವರದೆ ಗರಡಿಯುಲ್ಲಿ ಪಳಗಿದ ಬೆಳಗಲ್ಲು ವೀರಣ್ಣ ತೊಗಲು ಗೊಂಬೆಯಾಟಕ್ಕೆ ಹೆಸರುವಾಸಿಯಾದರು. ಅವರು ಯುವಕರಿಗೆ ಹೇಳುವ ಮಾತುಗಳು ಹೀಗಿವೆ.

'ಇವತ್ತಿನ ಹುಡುಗರಿಗೆ ಕ್ರಿಯಾತ್ಮಕ ಶಕ್ತಿ ಚೆನ್ನಾಗಿದೆ. ಹೊಸದನ್ನು ಬೇಗ ಗ್ರಹಿಸುತ್ತಾರೆ. ನಾನು ಈವಾಗ ಭಗವಾನ್ ಬುದ್ಧನ ಒಂದು ಕತೇನ ಸಿದ್ಧ ಮಾಡ್ತಾ ಇದೀನಿ. ಬಸವಣ್ಣನ ಕಥೆ ಆಡುವಾಗ ತುಂಬಾ ಸಂತೋಷ ಆಗ್ತದೆ. ನಾನು ನಾಟಕ ರಂಗದಲ್ಲಿದ್ದಾಗ ಶಕುನಿ ಪಾತ್ರಕ್ಕೆ ಬಹಳ ಗಮನ ನೀಡಿದ್ದೆ. ವಿಲನ್ ಪಾತ್ರಗಳು ಹಾಗೂ ಸ್ತ್ರೀ ಪಾತ್ರಗಳು ನನಗೆ ಒಗ್ಗಿದ್ದವು. ಆಗ ನಾಟಕದ ಸಂಭಾಷಣೆ ಹೇಗೆ ಕಲೀತಾ ಇದ್ವಿ ಅಂದರೆ ಆಗ ವಾಚೂ ಇಲ್ಲ. ಗಡಿಯಾರವೂ ಇಲ್ಲ. ಗುರುಗಳು ಹೇಳಿದಷ್ಟು ಸಮಯ ಅವರ ಎದುರಿಗೆ, ಅವರು ಆ ಕಡೆ ಹೋದ್ರೆ ಮತ್ತೆ ನಮ್ಮ ತಾಲೀಮು ಸುರು ಹಚ್ಕೋತಿದ್ವಿ. ಆ ಶ್ರದ್ಧೆ, ಆ ನಿಷ್ಠೆ ಇಲ್ದೇ ಇದ್ರೆ ಯಾವುದೇ ಕೆಲಸದಲ್ಲೂ ಯಶಸ್ಸು ಪಡೆಯೋಕೆ ಸಾಧ್ಯವಿಲ್ಲ.

ನಿಮಗೆ ನಾನು ಹೇಳೋದು ಕೇಳಿ 'ಏನಪ್ಪಾ ಇವ್ರು' ಅನ್ನಿಸಬಹುದು. ಹೆಂಡತಿ ಬಗಲಾಗೆ ಮಲಗಿರ್ತಿದ್ದೆ. ಅವಳಿಗೆ ನಿದ್ದೆ ಬಂದಿದೆ ಅಂತ ಗೊತ್ತಾದ ಮೇಲೆ ನಿಧಾನಕ್ಕೆ ಎದ್ದು ಗದ್ದಕ್ಕೆ ಗಡ್ಡ ಅಂಟಿಸಿಕೊಂಡು ಕನ್ನಡಿ ಎದುರು ಅಭಿನಯ ಮಾಡ್ತಿದ್ದೆ. ಇಲ್ದಿದ್ರೆ

ನಾಳೆ ರಂಗದ ಮೇಲೆ ಎಲ್ಲಿ ತಪ್ಪಿ ಬಿಡ್ತೀನೋ ಅನ್ನೊ ಚಿಂತೆ. ಏನೇ ಮಾಡಿದ್ರೂ ಅಚ್ಚುಕಟ್ಟಾಗಿ ನಾಲ್ಕು ಜನ ಒಪ್ಪಿಕೊಳ್ಳೊ ಹಾಗೇ ಮಾಡಬೇಕು ಅನ್ನೋದು ನನ್ನ ಮಹದಾಸೆ. ಆ ಪ್ರಕಾರವೇ ನಾನು ಕೆಲಸ ಮಾಡಿದ್ದೀನಿ.

ಇವತ್ತಿನ ಹುಡುಗರಿಗೆ ನಾನು ಹೇಳೋದೂ ಅದನ್ನೇ. ರಂಗ ಕಲೆಗೆ ತುಂಬಾ ಬೆಲೆ ಇದೆ. ದೇಶ ವಿದೇಶ ಸುತ್ತಬಹುದು ಅನ್ನೋಕಿಂತ ನಿಮ್ಮ ಸುತ್ತಲಿನ ಜನಕ್ಕೆ ತಿಳಿಸಬೇಕಾದ ಅಗತ್ಯ ಸಂದೇಶ ನೀಡಬಹುದು. ತಿಳುವಳಿಕೆ ಕೊಡಬೇಕು ಸಮಾಜದ ಜನಕ್ಕೆ. ಆ ಕೆಲಸ ನಿಜಕ್ಕೂ ಸಮಾಜದ ಉದ್ಧಾರದ ಕೆಲಸ.

ಕುಡಿತದ ವಿರುದ್ಧ, ಹೆಂಗಸರು ಮಕ್ಕಳನ್ನು ಅಮಾನವೀಯವಾಗಿ ನಡೆಸಿಕೊಳ್ಳೊದರ ವಿರುದ್ಧ ನೀವು ರಂಗಕಲೆ ಮೂಲಕ ತಿಳುವಳಿಕೆ ನೀಡಬಹುದು.

ರಾಮನ ಕಥೆ ಹೇಳಿ. ರಾವಣನ ಹಾಗೆ ಆಗಬೇಡಿ ಅಂತ ತಿಳುವಳಿಕೆ ಹೇಳಬೇಕು. ಅಂತಹ ಕಲಾವಿದರ ಬಾಳಿನಲ್ಲಿ ಕಷ್ಟ ಇರ್ತಾವೆ, ನೋವು ನುಂಗಬೇಕು, ಸಂತೋಷ ಹಂಚಬೇಕು, ಆಗ ಬದುಕು ಸಾರ್ಥಕವಾಗ್ತದೆ.

ಟಿಪ್ಪು ಸುಲ್ತಾನನ ನಾಟಕ ನನಗೆ ತುಂಬಾ ಇಷ್ಟ ಆಗಿತ್ತು. ಇವತ್ತಿಗೂ ಅದರ ಸಂಭಾಷಣೆಗಳು ನನ್ನ ನಾಲಿಗೆ ಮೇಲಿದೆ. ಕಲಾವಿದನಿಗೆ ಅಭಿನಯದ ಹುಚ್ಚು ಇರಬೇಕು. ಆವಾಗ ಮಾತ್ರಾ ಕಲಾವಿದ ಮೇಲೆ ಬರಲಿಕ್ಕೆ ಸಾಧ್ಯ.

ನಾವು ಟಿವಿಯಲ್ಲಿ, ರೇಡಿಯೋದಲ್ಲಿ, ರಂಗಭೂಮಿಯಲ್ಲಿ, ಸಿನಿಮಾದಲ್ಲಿ ವಿವಿಧ ರೀತಿಯ ಕಲಾವಿದರನ್ನು ನೋಡ್ತೀವಿ. ಎಷ್ಟೋ ಪ್ರತಿಭಾವಂತ ಇದ್ರೂ ನಿಷ್ಠೆ ಇಲ್ಲದೆ ಇದ್ರೆ ಅಭ್ಯಾಸ ಮಾಡದೇ ಇದ್ರೆ, ಕಲೆಗೆ ಗೌರವ ಕೊಡದೇ ಇದ್ರೆ ಆತ ಬೆಳೆಯೋಕೆ ಸಾಧ್ಯವಿಲ್ಲ.

ಜಾನಪದ ವಿಶ್ವವಿದ್ಯಾಲಯ ಅಪರೂಪದ ಕಲೆಗಳನ್ನು, ಕಲಾವಿದರನ್ನು ಹಾಗೆಯೇ ಕಲಾ ಪೋಷಕರನ್ನು ಗುರುತಿಸಿ ಗೌರವಿಸುತ್ತಾ ಇದೆ. ಅದು ಬಹಳ ಮುಖ್ಯ ಕಲಾವಿದರಿಗೆ ಬೆನ್ನು ತಟ್ಟಿ ಪ್ರೋತ್ಸಾಹ ನೀಡಿದರೆ ಆಗ ಮಾತ್ರ ಆ ಕಲೆ ಹಾಗೂ ಕಲಾವಿದ ಉಳೀತಾರೆ.

ಈವಾಗ ನನಗೆ ಸಿಗ್ತಾ ಇರೋ ಗೌರವ ಆದ್ರಿಂದ ಆಗ ಬಹುದಾದ ಸಂಪಾದನೆ ಇವನ್ನು ನೋಡಿ ಯಾರಿಗಾದ್ರೂ ಇದನ್ನು ಕಲಿಸೋಣ, ಮುಂದಿನ ತಲೆಮಾರಿಗೆ ಇದು ಉಳೀಲಿ ಅನ್ನಿಸುತ್ತೆ.

ಯಾರೂ ಈ ಕಲೆ ಬಗ್ಗೆ ಅಭಿಮಾನವೇ ತೋರದೇ ಇದ್ರೆ ಆಗ "ಏನು ಮಾಡೋಕಾಗುತ್ತೆ",

ಬೆಳಗಲ್ಲು ವೀರಣ್ಣ ಅಂದರೆ ತೊಗಲು ಗೊಂಬೆಯಾಟ, ತೊಗಲುಬೊಂಬೆಯಾಟ ಅಂದ್ರೆ ಬೆಳಗಲ್ಲು ವೀರಣ್ಣ ಎನ್ನುವಷ್ಟು ಅವಿನಾಭಾವ ಸಂಬಂಧ ಇಲ್ಲಿದೆ.

ಅಂತರವಳ್ಳಿಯ ಜೀವನಗೌಡ್ರು ಸಾಂಪ್ರದಾಯಿಕ ಮಾದರಿಯಾದರೆ, ಗೊಂಬೆ ಮನೆ ಪ್ರಕಾಶ ಗರುಡ ಸಂಪೂರ್ಣ ಆಧುನಿಕ ಗೊಂಬೆ ಆಟಕ್ಕೆ ಸೇರಿಹೋಗಿದ್ದರೆ ಬೆಳಗಲ್ಲು ವೀರಣ್ಣ ಅವೆರಡರಲ್ಲೂ ಹೊಂದಿಕೊಳ್ಳಬಲ್ಲ ಅಪ್ರತಿಮ ಕಲಾಕಾರರಾಗಿದ್ದಾರೆ.

ಕಲಾವಿದರಿಗೆ ಅನುಕೂಲಗಳು ಬೇಕು. ಆದರೆ ಅಧಿಕಾರಿಗಳಿಗೆ ದೊರೆಯುವಷ್ಟು ಅನುಕೂಲ ಕಲಾವಿದರಿಗೆ ದೊರೆಯುವುದಿಲ್ಲ ಎಂಬ ಕೊರಗು ಇವರಿಗೂ ಇದೆ. ಕಲಾವಿದರು ಈ ಬಗ್ಗೆ ಚಕಾರ ಎತ್ತುವುದಿಲ್ಲ ಎಂಬುದಕ್ಕೆ ಒಂದು ಉದಾಹರಣೆ ನೀಡುತ್ತಾರೆ ವೀರಣ್ಣ.

'ಅವತ್ತು ನಾನು ಹಾಗೂ ಯಕ್ಷಗಾನದ ಬಹುದೊಡ್ಡ ಕಲಾವಿದರಾದ ಶ್ರೀ ಶಂಭು ಹೆಗಡೆಯವರು ಇಬ್ಬರೂ ದೆಹಲಿಗೆ ಹೋದೆವು. ಸೆಕೆ ಅಂದ್ರೆ ಸೆಕೆ. ನಮಗೆ ನೀಡಿದ ಕೊಠಡಿಯಲ್ಲಿ ಎ.ಸಿ. ಇರಲಿಲ್ಲ. ಆದರೆ ಬೇರೆ ಅಧಿಕಾರಿಗಳು ಆಗಲೇ ಅಂತಹ ಕೊಠಡಿಯಲ್ಲಿ ಸೇರಿದ್ದರು. ಮುಖ್ಯ ಅತಿಥಿಯಾಗಿ ಬಂದಿದ್ದ ಶಂಭು ಹೆಗಡೆಗಿಂತ ಆಯೋಜಕರಿಗೆ ಅಲ್ಲಿದ್ದ ಅಧಿಕಾರಿಗಳನ್ನು ಓಲೈಸುವುದು ಮುಖ್ಯವಾಗಿತ್ತು. ನಾನು ಹೇಳಿದೆ. 'ಎ.ಸಿ. ರೂಮು ಕೊಡಿ ಅನ್ನೋಣ' ಅಂತ. ಆದ್ರೆ ಶಂಭು ಹೆಗಡೆ ಹೇಳಿದ್ರು "ನಾವು ಇಲ್ಲಿ ಇರೋದು ಎರಡು ದಿನ. ಎಸಿ ಇದ್ರೇನು ಇಲ್ದಿದ್ರೇನು – ನಮ್ಮ ಕೆಲಸ ನಾವು ಮಾಡಿ ಹೋಗೋಣ ಸುಮ್ನಿರಿ" ಅಂದರು. ಸ್ವಾಮಿ ಇದು ಕಲಾವಿದರ ಹೃದಯ. ನನ್ನ ವರ್ಚಸ್ಸಿಗೆ ನನಗೆ ಇಂತಹುದೇ ಬೇಕು ಅಂತ ಕಲಾವಿದ ಕೇಳಲ್ಲ. ಕೊಟ್ಟಿದ್ದನ್ನು ನಮ್ರವಾಗಿ ಸ್ವೀಕರಿಸ್ತಾರೆ. ಬಂದಿದ್ದನ್ನು ಬೇಡ ಅನ್ನಲ್ಲ. ಕೊಡದಿದ್ರೆ ಹಟ ಮಾಡಲ್ಲ. ಆದರೆ ಬದುಕು ದೂಡುವುದಕ್ಕೆ ಕಲಾಭಿಮಾನಿ ಕೊಟ್ಟಿದ್ದನ್ನು ಪಡೀತಾರೆ.

ಕಲಾವಿದರ ಹೃದಯ ಎಂತಹ ಅಪರೂಪದ ಹೃದಯವಂತಿಕೆಯಿಂದ ಕೂಡಿರುತ್ತೆ ಅಲ್ವಾ!. ವೀರಣ್ಣನ ಪ್ರಶ್ನೆ ಎದೆ ತಟ್ಟುವಂತಿರುತ್ತದೆ.

೧೧. ಇತರೆ ಬೊಂಬೆಯಾಟಗಳು

ತೊಗಲುಗೊಂಬೆ ಆಟದಂತೆಯೇ ಇರುವ ಇನ್ನೊಂದು ಆಟ ಸೂತ್ರದ ಬೊಂಬೆಯಾಟ.

ತೊಗಲುಗೊಂಬೆಯಾಟದ ಬೊಂಬೆಗಳು ಚಪ್ಪಟೆಯಾಗಿ ಚರ್ಮದ ರಟ್ಟಿನಿಂದ ಮಾಡಲ್ಪಟ್ಟಿರುತ್ತವೆ. ಅದರಲ್ಲಿ ರಂಧ್ರಗಳನ್ನು ಕೊರೆದು ಬೆಳಕು ಅದರ ಮೇಲೆ ಇದ್ದಾಗ. ಬಿಳಿಯ ಪರದೆಯ ಮೇಲೆ ಬಣ್ಣದ ನೆರಳುಗಳು ಬೀಳುವಂತೆ ತಂತ್ರ ಬಳಸಲಾಗಿರುತ್ತದೆ. ಮುಂದೆ ವೈಟ್‌ಸ್ಕ್ರೀನ್, ಅದರ ಹಿಂದೆ ಚರ್ಮದ ಗೊಂಬೆಗಳು. ಅದರ ಹಿಂದೆ ಬೆಳಕಿನ ವ್ಯವಸ್ಥೆ. ಈ ನೆರಳು ಬೆಳಕಿನ ಆಟದ ಜೊತೆಗೆ ಹಿಮ್ಮೇಳ ಹಿನ್ನೆಲೆ ಸಂಗೀತ ಎದುರು ಕುಳಿತ ಪ್ರೇಕ್ಷಕನಿಗೆ ಕಲೆಯ ರಸದೂಟವನ್ನು ಒದಗಿಸುತ್ತದೆ.

ಸೂತ್ರದ ಗೊಂಬೆಯಾಟದಲ್ಲಿ ಪೂರ್ಣ ರೂಪದ ಗೊಂಬೆಗಳಿರುತ್ತವೆ. ಅವಕ್ಕೆ ಸೂತ್ರದ ದಾರಗಳನ್ನು ಕಟ್ಟಿದ್ದು, ದಾರಗಳನ್ನು ಸೂತ್ರಧಾರ ಬೆರಳಿಗೆ ಕಟ್ಟಿಕೊಂಡಿರುತ್ತಾನೆ. ಗೊಂಬೆಗಳ ಪರದೆಯ ಮುಂದೆ ಇರುತ್ತವೆ. ಸೂತ್ರಧಾರ ಪರದೆಯ ಹಿಂದೆ ನಿಂತು ದಾರಗಳ ಸಹಾಯದಿಂದ ಆ ಗೊಂಬೆಗಳನ್ನು ಆಡಿಸುತ್ತಿರುತ್ತಾನೆ. ಹಿಮ್ಮೇಳದ ಸಂಗೀತ ಹಾಗೂ ಸಂಭಾಷಣೆ ವಿಧಾನಗಳಲ್ಲಿ ಸಾಮ್ಯತೆ ಇರುತ್ತದೆ. ಆದರೆ ಗೊಂಬೆಗಳ ಕುಣಿತದಲ್ಲಿ ಎರಡಕ್ಕೂ ವ್ಯತ್ಯಾಸವಿದೆ.

ತೊಗಲು ಬೊಂಬೆಯಲ್ಲಿ ಚರ್ಮವನ್ನು ಪಾರದರ್ಶಕವಾಗುವಂತೆ ಹದಮಾಡಿ ನಂತರ ಅದಕ್ಕೆ ವಿವಿಧ ಬಣ್ಣಗಳನ್ನು ಬಳಿದು ಆಕರ್ಷಕವಾಗಿ ಕಾಣುವಂತೆ ಮಾಡಲಾಗಿರುತ್ತದೆ ಹಿಂಭಾಗದಲ್ಲಿ ಬೆಳಕಿನ ಆಕರ ಇರಿಸಿ ಆ ಬೆಳಕು ಈ ಗೊಂಬೆಯ ಮೂಲಕ ಹಾದು ಬಿಳಿ ಪರದೆಯ ಮೇಲೆ ಬಿದ್ದಾಗ ಪರದೆಯ ಆ ಕಡೆಗೆ ಅದೇ ಬಣ್ಣದ ಚಿತ್ತಾರದ ಗೊಂಬೆ ಕಾಣಿಸುತ್ತದೆ. ಒಂದು ಗೊಂಬೆಯ ವಿವಿಧ ಭಾಗಗಳನ್ನು ಬೇರೆ ಬೇರೆಯಾಗಿ ತಯಾರಿಸಿ ಜೋಡಿಸಲಾಗಿರುತ್ತದೆ. ಆದುದರಿಂದ ಕೈಕಾಲು ಅಥವಾ ದೇಹದ ನಿರ್ದಿಷ್ಟ ಭಾಗ ಮಾತ್ರ ಚಲಿಸುವಂತೆ ಮಾಡಲು ಸಾಧ್ಯ. ನಿಪುಣ ಕೈಚಳಕ ಹೊಂದಿರುವ ಕಲಾಕಾರ ತನ್ನ ಕೈಯನ್ನು ಆಡಿಸುವ ಮೂಲಕ ಆ ಗೊಂಬೆ ಕುಣಿಯುವಂತೆ ಮಾಡುತ್ತಾನೆ. ಕೋಪದ ರಭಸದಲ್ಲಿ ಗದೆ ಎತ್ತಿ ಹೊಡೆದಂತೆ, ಮಲ್ಲ ಯುದ್ಧ ಮಾಡಿದಂತೆ, ನಿಂತು ವಾಗ್ಯುದ್ಧದಲ್ಲಿ ತೊಡಗಿದಂತೆ ಚಮತ್ಕಾರಯುತವಾಗಿ ಈ ಗೊಂಬೆಗಳ ಕುಣಿತವನ್ನು ತೋರಿಸಲಾಗುತ್ತದೆ. ಕಲಾವಿದನ ಅಪ್ರತಿಮ ಕಲಾ ಕೌಶಲ್ಯದಲ್ಲಿ ಕರ ಚಾಲನೆಯ ಕೌಶಲ್ಯಕ್ಕೆ ಇಲ್ಲಿ ವಿಶೇಷ ಮಾನ್ಯತೆ ಇದೆ. ಆದರಿಂದಲೇ ಗೊಂಬೆ ಕುಣಿಯಲು ಸಾಧ್ಯ.

ಸೂತ್ರದ ಗೊಂಬೆಯಾಟದಲ್ಲಿ ಮರದಿಂದ ವಿವಿಧ ಭಾಗಗಳನ್ನು ಬೇರೆ ಬೇರೆಯಾಗಿ ತಯಾರಿಸಿ ಅವನ್ನು ಜೋಡಿಸಿ ಸೂತ್ರದ ಗೊಂಬೆ ತಯಾರಿಸುತ್ತಾರೆ. ಅದರಲ್ಲಿ ಗೊಂಬೆಗಳು ಸೂತ್ರದ ದಾರದ ಮೂಲಕ ಕಲಾವಿದ ಕುಣಿಸಿದಂತೆ ಕುಣಿಯುತ್ತವೆ. ಇಲ್ಲಿ ಗೊಂಬೆಯ ಕೈ ಕಾಲು ಹಾಗೂ ಇತರೆ ಭಾಗಗಳಿಗೆ ಸೂತ್ರದ ದಾರ ಜೋಡಿಸಿದ್ದು ಅದಕ್ಕೆ ಅನುಗುಣವಾಗಿ ಸೂತ್ರಗಾರನ ಬೆರಳ ಚಲನೆ ಹಾಗೂ ಅದಕ್ಕೆ ಅನುಸಾರವಾಗಿ ಗೊಂಬೆಗಳ ಕುಣಿತ ನಡೆಯುತ್ತದೆ.

ಆಂಧ್ರದ ಚಕ್ಕ ಬೊಮ್ಮಲಾಟ ಎಂಬುದು ಹಾಗೂ ಕೀಲುಗೊಂಬೆಯಾಟ ಎಂಬುದು ಇನ್ನೊಂದು ವಿಧದ ಮರದ ಗೊಂಬೆಗಳನ್ನು ಹೊಂದಿರುವಂತಹ ಆಟ. ಈ ಗೊಂಬೆಗಳು ಮೇಲಿನ ಎರಡು ರೀತಿಯ ಗೊಂಬೆಗಳಿಗಿಂತ ಹೆಚ್ಚು ದೊಡ್ಡದಾಗಿರುತ್ತದೆ. ಮರದ ಕೀಲುಗಳನ್ನು ಹೊಂದಿರುವ ಈ ಗೊಂಬೆಯನ್ನು ಚಾಕಚಕ್ಯತೆಯಿಂದ ಕೀಲುಗಳನ್ನು ಆಡುಸುವುದರಿಂದ ಗೊಂಬೆ ಕುಣಿಯುವಂತೆ ಮಾಡಲಾಗುತ್ತದೆ.

ಅಚ್ಚಟ್ಟನ ಹಳ್ಳಿ ಎಂಬುದು ಕೋಲಾರದ ನರಸಾಪುರ ಬಳಿಯ ಚಿಕ್ಕಹಳ್ಳಿ. ಅಲ್ಲಿ ಸಂಜೀವ ರೆಡ್ಡಿ ಎಂಬುವರು ವಿಚಿತ್ರ ರೀತಿಯ ಕೀಲು ಗೊಂಬೆಗಳನ್ನು ಬಳಸಿ ಆಟ ಆಡಿಸುತ್ತಾರೆ. ಚಕ್ಕ ಬೊಮ್ಮಲಾಟ ಎಂಬುದು ಆಂಧ್ರದ ವಾರಂಗಲ್ ಜಿಲ್ಲೆಯಲ್ಲಿ ಬಹಳ ಪ್ರಖ್ಯಾತವಾಗಿದ್ದು, ಅಲ್ಲಿ ಕೆಲವು ತಂಡಗಳು ಇಂದಿಗೂ ಪ್ರದರ್ಶನ ನೀಡುತ್ತಿವೆ.

ಇವುಗಳಲ್ಲಿ ಕಥೆ ಹೇಳುವ ರೀತಿ, ಸಂಭಾಷಣೆ, ಹಾಡುವಿಕೆ ಇವೆಲ್ಲದರಲ್ಲಿ ಸಾಮ್ಯತೆ ಇದೆ ಎನಿಸಿದರೂ ತೊಗಲು ಬೊಂಬೆಯಾಟದಲ್ಲಿ ಸಂಭಾಷಣೆಯಲ್ಲಿ ಸ್ಪಷ್ಟತೆ ಇರುತ್ತದೆ. ಯಕ್ಷಗಾನದಲ್ಲಿ ಕುಣಿತ ಆರ್ಭಟ ಹೆಚ್ಚಿರುತ್ತದೆ. ಆದರೆ ತೋಲು ಬೊಮ್ಮಲಾಟದಲ್ಲಿ ಕುಣಿತದಲ್ಲಿ ಒಂದು ರೀತಿಯಲ್ಲಿ ತಾರತಮ್ಯತೆ ಇದ್ದು ಆರ್ಭಟಕ್ಕಿಂತ ಲಾವಣ್ಯತೆಗೆ ಹೆಚ್ಚು ಗಮನ ನೀಡಲಾಗಿರುತ್ತದೆ. ಸೂತ್ರದ ಬೊಂಬೆಗಳಂತೂ, ಕುಣಿಯುವಷ್ಟು ಕಾಲ ಮುದ್ದಿನ ಗೊಂಬೆಗಳಂತೆ ಮನವನ್ನು ಸೆರೆಹಿಡಿದಿಟ್ಟು ಬಿಡುತ್ತವೆ.

ಒಟ್ಟಾರೆಯಾಗಿ ಈ ಕುಣಿಯುವ ಗೊಂಬೆಗಳು ಒಂದು ರಮ್ಯ ಲೋಕವನ್ನು ಸೃಷ್ಟಿಸುತ್ತವೆ. ಅದಕ್ಕನುಗುಣವಾಗಿ ಹಿನ್ನೆಲೆಯ ಸಂಗೀತ, ಸಂಭಾಷಣೆ ಹಾಗೂ ಕಥೆಯ ಹಂದರ ಇವು ಭ್ರಮಾಲೋಕವೊಂದನ್ನು ಸೃಷ್ಟಿಸಿ ಅಗತ್ಯ ಮನರಂಜನೆ ಒದಗಿಸುತ್ತವೆ.

ತೊಗಲುಬೊಂಬೆಯಾಟ ಕೇವಲ ರಾಮಾಯಣದ ಕಥೆ ಹೇಳುವುದಕ್ಕೆ ಮಾತ್ರ ಇಂದು ಸೀಮಿತವಾಗಿಲ್ಲ. ಶೈಕ್ಷಣಿಕ ಕಾರ್ಯಕ್ರಮಗಳು, ಜನರನ್ನು ಏಡ್ಸ್ ಮೊದಲಾದ ಮಾರಿ ರೋಗಗಳಿಂದ ಎಚ್ಚರಿಸಲು, ಕುಡಿತದಿಂದಾಗುವ ಅನಾಹುತಗಳ ಕುರಿತು ತಿಳುವಳಿಕೆ ನೀಡುವಂತಹ ಕಾರ್ಯಕ್ರಮಗಳಲ್ಲಿ ನಿರ್ದಿಷ್ಟ ವಿಷಯದ ಕುರಿತು ವಿವರಿಸುವ ಮಾಧ್ಯಮವಾಗಿತೊಗಲುಬೊಂಬೆಯಾಟ ಬಳಕೆಯಾಗುತ್ತಿದೆ.

ಒಟ್ಟಾರೆ ಜನಪದ ಕಲಾವಿದರ ಕ್ರಿಯಾತ್ಮಕ ಶಕ್ತಿಯನ್ನು ಸಮಾಜದ ಒಳತಿಗಾಗಿ ಸಕಾರಾತ್ಮಕವಾಗಿ ಬಳಸಿಕೊಳ್ಳುವ ಪ್ರಯತ್ನ ನಡೆಯುತ್ತಿದೆ. ಬೆಳಗಲ್ಲು ವೀರಣ್ಣನಂತಹ ಪ್ರತಿಭಾವಂತರ ಸಮಾಜ ಸೇವೆ ಕಲೆಯ ಮೂಲಕ ನೆರವೇರುತ್ತಲಿದೆ.

೧೨. ಅಂತರಂಗದ ಮಾತುಗಳು

ತೊಗಲುಗೊಂಬೆಯಾಟಕ್ಕೊಂದು ಅಕಾಡೆಮಿ ಬೇಕಾಗಿದೆಯೇ?

ವೀರಣ್ಣನವರೊಂದಿಗಿನ "ಪಟ್ಟಾಂಗ" ದ ಕಾರ್ಯಕ್ರಮದಲ್ಲಿ ಅವರಿಗೆದುರಾದ ಪ್ರಮುಖ ಪ್ರಶ್ನೆ ಇದು. ಒಂದೆಡೆ ಜಾನಪದಕ್ಕೆ ಒಂದು, ಯಕ್ಷಗಾನಕ್ಕೊಂದು, ಲಲಿತ ಕಲೆಗೊಂದು,..... ಹೀಗೆ ಹತ್ತಾರು ಅಕಾಡೆಮಿಗಳು ರೂಪುಗೊಂಡರೆ ಸರ್ಕಾರಕ್ಕೆ ಹೊರೆ ಹೆಚ್ಚುವುದು ಎಂಬ ಚಿಂತೆ. ಇನ್ನೊಂದೆಡೆ ಪ್ರಮುಖ ಕಲಾಪ್ರಕಾರಕ್ಕೆ ಬೇಕಾದ ಮನ್ನಣೆ ಸಿಗುವುದಿಲ್ಲ ಎಂಬ ಚಿಂತೆ. ಇವೆರಡನ್ನು ಸಮನಾಗಿ ಯೋಚಿಸುವ ವೀರಣ್ಣರ ಖಚಿತ ನಿಲುವು ಹೀಗಿದೆ.

'ತೊಗಲುಬೊಂಬೆಯಾಟಕ್ಕೂ ಒಂದು ಅಕಾಡೆಮಿ ಬೇಕು'

ವೀರಣ್ಣ ಹೇಳುತ್ತಾರೆ. ನಾನೇನೋ ತೊಗಲುಗೊಂಬೆಯಾಟದಿಂದ ಆರ್ಥಿಕವಾಗಿ ಸ್ವಲ್ಪಮಟ್ಟಿಗೆ ಅನುಕೂಲ ಪಡೆದಿದ್ದೇನೆ. ಆದರೆ ಇದನ್ನೇ ನಂಬಿರುವ ಇತರ ಕಲಾವಿದರನ್ನು ನೋಡಿದರೆ ತುಂಬಾ ನೋವಾಗುತ್ತದೆ. ಇದಕ್ಕೆ ಯಕ್ಷಗಾನಕ್ಕೆ ಇರುವಂತಹ ಪೋಷಕರು ಇಲ್ಲ. ದೇವಸ್ಥಾನಗಳು ಈ ತಂಡವನ್ನು ಸಾಕುತ್ತಾ ಇಲ್ಲ. ನಿಜ ಹೇಳಬೇಕೆಂದರೆ ಈ ತೊಗಲುಗೊಂಬೆ ಆಡಿಸೋರಿಗೆ ಯಾರಿಂದ ಸಹಾಯ ಪಡೀಬಹುದು ಅನ್ನೋದೂ ಗೊತ್ತಿಲ್ಲ. ಅವರಿಗೆ ಯೋಗ್ಯತೆಯೇ ಇಲ್ಲ ಅಂದ್ಕೊಂಡು ಸುಮ್ನೆ ಕೂತ್ಬಿಡ್ತಾರೆ. ಇಂತಹ ಪರಿಸ್ಥಿತೀಲಿ ಒಂದು ಅಕಾಡೆಮಿ ಇದಕ್ಕೋಸ್ಕರ ಇದ್ರೆ ಆ ಕಲಾವಿದರಿಗೆ ಧೈರ್ಯ ಬರ್ತದೆ. ನಾವು ಯಾರ ಹತ್ರ ನಮ್ಮ ಕಷ್ಟ ಸುಖ ಹೇಳ್ಕೋಬೇಕು ಅನ್ನೋದು ಗೊತ್ತಾಗ್ತದೆ.

ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಇದ್ದಾಗ ಸಾವಿರಾರು ಕಲೆಗಳ ಮಧ್ಯೆ ಯಾವಾಗಲೋ ಒಮ್ಮೆ ತೊಗಲುಬೊಂಬೆಯಾಟಕ್ಕೆ ಅವಕಾಶ ಸಿಗ್ತಿತ್ತು. ಈ ಪ್ರದರ್ಶನದ ಬಗ್ಗೇನೂ ಮೊದಲು ಯಕ್ಷಗಾನ ಆಮೇಲೆ ದೊಡ್ಡಾಟ, ಆಮೇಲೆ ಸಣ್ಣಾಟ ಅಥವಾ ಶ್ರೀ ಕೃಷ್ಣ ಪಾರಿಜಾತ, ರಾಧಾನಾಟ್ಯ ಯಾವ್ಯಾವುದನ್ನೋ ಮೊದಲು ಯೋಚಿಸಿ ಆಮೇಲೆ ಅಪರೂಪಕ್ಕೆ ಒಂದೊಂದ್ಸಾರಿ ತೊಗಲುಗೊಂಬೆ ಆಟ ಅಂತ ಹುಡುಕುತ್ತಿದ್ದರು. ಅದ್ರಲ್ಲೂ ಸೂತ್ರದ ಬೊಂಬೆಯೇ, ತೊಗಲುಬೊಂಬೆಯೇ ಯೋಚನೆ ಮಾಡಿ, ಯಾವುದೋ ಒಂದು ಗೊತ್ತಿದ್ದ ತಂಡಕ್ಕೆ "ಬನ್ನಿ" ಪ್ರದರ್ಶನ ಕೊಡಿ ಅನ್ನೋರು.

ಜಾನಪದ ಬೇರೆ ಯಕ್ಷಗಾನ ಬೇರೆ ಅಂತ ಎರಡು ಅಕಾಡೆಮಿ ಆದಾಗ ಜಾನಪದವರು ಕರೀತಾರೆ ಅಂತ ಯಕ್ಷಗಾನದೋರು, ಯಕ್ಷಗಾನದೋರು ಕರೀತಾರೆ ಅಂತ ಜಾನಪದದವರು ಇಬ್ರೂ ನಮ್ಮನ್ನು ಪಕ್ಕಕ್ಕೆ ಸರಿಸಿಬಿಟ್ಟರು.

ನಾವು ಬಿಡಲಿಲ್ಲ. ಇಬ್ಬರನ್ನೂ ಕಂಡು ವಿಷಯ ಹೀಗೆ ಹೀಗೆ ಅಂತಾ ಹೇಳಿದೆವು. ಯಕ್ಷಗಾನದ ಭಾಗವತಿಕೆ ಸಂಭಾಷಣೆ ಇವೆಲ್ಲಾ ಇಲ್ಲೂ ಇರೋದ್ರಿಂದ ಯಕ್ಷಗಾನ ಅಕಾಡೆಮಿಗೆ ಇದನ್ನು ಸೇರಿಸಬೇಕು ಅಂತಾನೂ ಅಂದುಕೊಂಡಿದ್ದಾಯ್ತು.

ಆದರೆ ಇದು ನಿಜವಾಗಿ ಕರ್ನಾಟಕದ ಜನಪದ ಕಲೆ. ಪ್ರದರ್ಶನ ಕಲೆ. ಹೀಗಾಗಿ ನಾವು ಜಾನಪದ ಅಕಾಡೆಮಿಯನ್ನೂ ಸಂಪರ್ಕಿಸಬಹುದು.

ಆದ್ರೆ ಮುಖ್ಯ ವಿಷಯ ಏನಪ್ಪಾ ಅಂದ್ರೆ ನಾವು ಕಲಾವಿದರು ಈ ಅಕಾಡೆಮಿಯವರನ್ನೂ ಸಂಪರ್ಕಿಸ್ತಾ ಕೂತ್ಕೋಬೇಕಾ. ನಮಗೂ ಗೊಂಬೆಯಾಟದ್ದೇ ಒಂದು ಅಕಾಡೆಮಿ ಇದ್ದರೆ ಇದರ ತಂಡಗಳ ಬಗ್ಗೆ ಹೆಚ್ಚು ಗಮನ ನೀಡಬಹುದು. ಈ ಬಗ್ಗೆ ಹಲವಾರು ಸಾರಿ ಧ್ವನಿ ಎತ್ತಿದ್ದೀವಿ. ಆದರೆ ಅದು ಅಷ್ಟು ಸುಲಭ ಸಾಧ್ಯವಲ್ಲ.

೧೩. ನಟನೆಗಿಂತ ಸಂಭಾಷಣೆಗೆ ಒತ್ತು ನೀಡಿದ ವೀರಣ್ಣ

ಹೇ ದುರ್ಯೋಧನಾ, ನಾನು ನಿನ್ನ ಮಾವ....... ಶಕುನಿ ಹೇಳ್ತಾ ಇದ್ದೀನಿ ಕೇಳು. ನಿನ್ನ ಹೆಂಡತಿಗೆ ಜಲಸ್ತಂಭ ರತ್ನ ತರಲಿಕ್ಕೆ ಹೇಳು. ನೀನು ಚಿರಂಜೀವಿ ಆಗಿ ಬಿಡ್ತೀಯಾ.

ದುರ್ಯೋಧನ ಹೇಳುತ್ತಾನೆ: "ಶಕುನಿಮಾವಾ, ನೀನು ಎಷ್ಟು ದೂರಾಲೋಚನೆಯಿಂದ ತಂತ್ರಗಳನ್ನು ಹೆಣೆದೆ. ಇಂದು ನೋಡು ಭೀಷ್ಮರು ಶರಶಯ್ಯೆಯಲ್ಲಿ ಮಲಗಿದ್ದಾರೆ. ಅವರು ಯುದ್ಧ ಜಯಿಸುತ್ತಾರೆ ಎಂದುಕೊಂಡಿದ್ದೆ. ಮುಂದೀಗ ದ್ರೋಣರ ಸರದಿ. ಅವರ ಮೆಚ್ಚಿನ ಶಿಷ್ಯನೇ ಅವರೆದುರು ನಿಂತಿದ್ದಾನೆ. ಮಾವಾ ನಿನ್ನ ಯೋಜನೆಗಳು ಸರಿಯಾಗಿ ಫಲ ನೀಡುತ್ತಿವೆಯೋ.........ಶಕುನಿ ಮಾವಾ".

ಶಕುನಿ ಹೇಳುತ್ತಾನೆ:

"ದುರ್ಯೋಧನಾ, ಈ ಶಕುನಿ ಮಾವಾ ಒದು ಹೆಜ್ಜೆ ಮುಂದಿಡುವ ಮುನ್ನವೇ ಮುಂದಿನ ಹತ್ತು ಹೆಜ್ಜೆ ಹೀಗಿರಬೇಕು ಎಂದು ನಿರ್ಧರಿಸಿ ಹೆಜ್ಜೆ ಇಡುತ್ತಾನೆ. ಅಂತಹುದರಲ್ಲಿ ಮಾಡಿದ ಕೆಲಸಕ್ಕೆ ಫಲ ಬರುವುದರ ಬಗ್ಗೆ ಸಂಶಯವೇ ದುರ್ಯೋಧನಾ. ಕಿಂಚಿತ್ತೂ ಚಿಂತಿಸಬೇಡ ಎಲ್ಲಾ ನಾನೆಣಿಸಿದಂತೆಯೇ ನಡೆಯುತ್ತಿದೆ".

ಶಕುನಿಗೆ ವಂದಿಸಿ ದುರ್ಯೋಧನ ಮುಂದಿನ ಕಾರ್ಯ ಯೋಜನೆ ಕಾರ್ಯರೂಪಕ್ಕೆ ತರಲೆಂದು ಹೊರ ಹೋಗುತ್ತಾನೆ.

ಶಕುನಿಯದು ವಿಕಟಾಟ್ಟ ಹಾಸನೆಗೆ ಹ್ಹ....ಹ್ಹ....ಹ್ಹ....

ದುರ್ಯೋಧನಾ, ನೀನೆಂತಹ ಮೂರ್ಖ, ನನ್ನನ್ನು ಸೋದರ ಮಾವನೇ ಎಂದು ನಂಬಿದ್ದೀಯಾ. ನಾನು ಹಳೆಯದೆಲ್ಲವನ್ನೂ ಮರೆತು ನಿನ್ನ ಒಳಿತಿಗಾಗಿ ಹಾಗೂ ನನ್ನ ಬದುಕಿಗಾಗಿ ನಿನ್ನ ಆಶ್ರಯದಲ್ಲಿದ್ದು ಕೆಲಸ ಮಾಡುತ್ತಿದ್ದೀನಿ ಎಂದು ಕೊಂಡಿದ್ದೀಯಾ.

ಸುಳ್ಳು............. ದುರ್ಯೋಧನಾ ಸುಳ್ಳು................ ಯಾವ ನಂಬಿಕೆಯ ಆಸರೆ ಬಯಸಿ ಜಲಸ್ತಂಭನ ಶಕ್ತಿಯಿಂದ ವೈಶಂಪಾಯನ ಸರೋವರಕ್ಕೆ ನೀನು ಇಳಿಯುತ್ತೀಯೋ ಅದೇ ಸರಸ್ಸು ನಿನ್ನ ಮೃತ್ಯು ಕೂಪವಾಗುತ್ತದೆ. ಇದು ಶಕುನಿಮಾವನ ತಂತ್ರ......ಹ್ಹ..ಹ್ಹ...........ಹ್ಹಾ.

ನನ್ನ ಶತ ಸೋದರರ ಮಧ್ಯೆ ಹಿಡಿ ಅನ್ನ ನೀಡಿ ಜೈಲಿನ ಕಪ್ಪು ಕೋಣೆಯಲ್ಲಿ ಕೂಡಿ ಹಾಕಿದಾಗ....... ದುರ್ಯೋಧನಾ.... ನನ್ನ ಆ ಒಬ್ಬೊಬ್ಬ ಸಹೋದರನೂ ಆ ಹಿಡಿ ಕೂಳನ್ನು ನಾನೇ ತಿನ್ನಬೇಕೆಂದು ಬಯಸಿ ಒಬ್ಬೊಬ್ಬರಾಗಿ ಪ್ರಾಣ ಬಿಟ್ಟಿದ್ದನ್ನೂ ನಾನು ಮರೆತು ಬಿಟ್ಟಿದ್ದೇನೆ ಎಂದುಕೊಂಡೆಯಾ?

ನನ್ನ ಬುದ್ಧಿವಂತಿಕೆಯ ಬಗ್ಗೆ ತಂತ್ರಗಾರಿಕೆ ಬಗ್ಗೆ ಸಾಮರ್ಥ್ಯದ ಬಗ್ಗೆ ನನ್ನ ಎಲ್ಲಾ ಸಹೋದರರಿಗೂ ನಂಬಿಕೆಯಿತ್ತು. ಅದಕ್ಕೆ ಅವರಿಗಿತ್ತ ಹಿಡಿ ಕೂಳನ್ನು ನನಗೇ ಕೊಟ್ಟು ನಾವು ಸಾಯುತ್ತೇವೆ. ಆದ್ರೆ ನೀನು ಬದುಕಬೇಕು. ಈ ದುರ್ಯೋಧನನಷ್ಟೇ ಅಲ್ಲ ಇಡೀ ಕೌರವ ಕುಲದ ಸಂಹಾರ ಮಾಡಬೇಕು ಎಂದು ಅಣತಿಯಿತ್ತರಲ್ಲ. ಅದಕ್ಕಾಗಿ ತಾನೇ ನಾನು ಪಾಂಡವರ ಕಡೆ ಸೇರದೆ ನಿನ್ನ ಪಕ್ಷಕ್ಕೆ ಬಂದೆ.

ಅಯ್ಯೋ ಮೂರ್ಖ. ನಿನ್ನ ಮೇಲಿನ ಹಗೆ ತೀರಿಸಲು ನಾನು ಪಾಂಡವರ ಜೊತೆ ಸೇರಿ ನಿನ್ನ ಮೇಲೆ ಯುದ್ಧ ಮಾಡುತ್ತೇನೆ ಎಂದು ಕೊಂಡಿದ್ದೀಯಾ.

ಇದೇ ಕಣೋ ಶಕುನಿ ತಂತ್ರ........ಹ್ಹಹ್ಹಹ್ಹಾ

ಶತ್ರುವೇ ನಿನ್ನ ಪಕ್ಕದಲ್ಲಿದ್ದಾನೆ ಎಂಬುದನ್ನು ನೀನೆಲ್ಲಿ ತಿಳಿದಿದ್ದೀಯಾ. ನಿನಗಾದರೂ ಎಲ್ಲಿ ಗೊತ್ತು ನಾನು ನಿನ್ನೆಲ್ಲಾ ತಂತ್ರಗಳನ್ನೂ ತಿಳಿದುಕೊಂಡು ಇಲ್ಲಿಯೇ ಪ್ರತಿ ತಂತ್ರ ರೂಪಿಸುತ್ತಿದ್ದೇನೆ ಎಂದು. ಎಲ್ಲರನ್ನೂ ಒಟ್ಟಾಗಿ ಹೋರಾಟಕ್ಕಿಳಿಸಿ ಗೆಲವು ತರಬಹುದಿತ್ತು ನಿನಗೆ ದುರ್ಯೋಧನಾ......... ಆದರೆ ನನ್ನ ಸಹೋದರರ ಆತ್ಮ ಇನ್ನೂ ಇನ್ನೂ ಕಾಯುತ್ತಲೇ ಇವೆ, ನಿನ್ನ ಸಾವನ್ನು ನೋಡಲು. ನೀನು ಕೂಡ ನನ್ನಂತೆಯೇ ನಿನ್ನ ಎಲ್ಲಾ ತಮ್ಮಂದಿರೂ ಕಣ್ಣ ಮುಂದೆಯೇ ಸಾಯುವುದನ್ನು ನೋಡಬೇಕು. ನೋಡಿ ನಿನ್ನ ಮನಸ್ಸು ವಿಲವಿಲನೆ ಒದ್ದಾಡಬೇಕು.

ನನ್ನ ಒಬ್ಬೊಬ್ಬ ಸಹೋದರ ಮರಣ ಹೊಂದಿದಾಗಲೂ ನಿನ್ನ ಬಲದ ಪರಾಕ್ರಮದ ಕುರಿತು ನನಗೆ ಎಷ್ಟು ಕೋಪ ದ್ವೇಷ ಉಕ್ಕಿತ್ತೋ ಕಾಣೆ. ಇಂದು ಆ ನಿನ್ನ ಪರಾಕ್ರಮದ ಭುಜಗಳು ಒಂದೊಂದಾಗಿ ತರಿದು ಬೀಳುವುದನ್ನು ನಾನು ಕಾಣಬೇಕು.

ದುರ್ಯೋಧನಾ ತೊಡೆ ತಟ್ಟಿ ಮೆರೆಯುತ್ತಿದ್ದೀಯಾ ಇಂದು ಅದೇ ತೊಡೆಯನ್ನು ತಟ್ಟಿ ನಿನ್ನ ಸಾವು ಬಂದು ಅಪ್ಪಿ ಕೊಳ್ಳುವುದನ್ನು ನಾನು ನೋಡುತ್ತೇನೆ.

ನಿನಗೇನು ಗೊತ್ತು. ಅಶ್ವತ್ಥಾಮ ಇಲ್ಲಿದ್ದಿದ್ದರೆ ನಿನ್ನ ಸೋಲು ಇಷ್ಟು ಸುಲಭ ಆಗುತ್ತಿರಲಿಲ್ಲ. ಬಲರಾಮ ಇದ್ದಿದ್ದರೆ ನಿನಗೆ ಇನ್ನೆಷ್ಟು ಬಲ ಬರುತ್ತಿತ್ತೋ..

ಮೂರ್ಖ ದುರ್ಯೋಧನಾ, ಅವರೆಲ್ಲಾ ನಿನ್ನಿಂದ ದೂರ.....ದೂರ.... ಇರುವಾಗಲೇ ಯುದ್ಧ ನಡೆಯಬೇಕೆಂದು ನಾನು ರೂಪಿಸಿದ ತಂತ್ರದ ಕುರಿತು ನಿನಗೆ ಅರಿವೆಲ್ಲಿತ್ತು. ಹುಂಬನಾಗಿ ನೀನೇ ಕುರುಡನಂತೆ ಪಗಡೆ ಕಾಯಿಗಳನ್ನು ನಡೆಸಿಬಿಟ್ಟೆ. ಕುರುಕ್ಷೇತ್ರದಲ್ಲಿ ಗೆಲ್ಲಬೇಕಾದರೆ ನಿನ್ನ ಕುದುರೆ ಆನೆ, ಒಂಟೆ, ಪದಾತಿ, ಮಂತ್ರಿ ಎಲ್ಲಾ ಬಲಗಳೂ ಬದುಕಿರಬೇಕು. ಆದರೆ ನಿನಗೇ ಗೊತ್ತಿಲ್ಲದಂತೆ ನಾನು ಒಂದೊಂದೇ ಕಾಯಿಯನ್ನು ಬೇರೆ ಬೇರೆಯಾಗಿ ಮುಂದಡಿ ಇಡುವಂತೆ ಮಾಡುವಲ್ಲಿ ನಿನ್ನನ್ನು ಪ್ರೇರೇಪಿಸಿದೆ. ಶಕುನಿ ಮಾವನ ಮಾತಿಗೆ ನೀನು ಮರುಳಾದೆ ದುರ್ಯೋಧನಾ... ಇಂದು ನೀನೀಗ ಒಬ್ಬಂಟಿ. ನಾನು ಸೆರೆಮನೆಯಲ್ಲಿ ಸತ್ತ ತಮ್ಮಂದಿರ ದೇಹದ ನಡುವೆ ಬಿದ್ದು ಹೇಗೆ

ಹೃದಯ ಹಿಂಡುತ್ತಿದ್ದ ನೋವು ಅನಭವಿಸಿದ್ದೇನೋ ಅದೇ ಸ್ಥಿತಿ ನಿನಗೀಗ ಬಂದಿದೆ. ಇದು ಪಾಂಡವರ ಆಟ ಎಂದುಕೊಂಡೆಯಾ, ಕೃಷ್ಣ ಜಾಣ್ಮೆ ಎಂದು ಕೊಂಡೆಯಾ

ಮೂರ್ಖ ದುರ್ಯೋಧನಾ, ಇದು ಈ ಶಕುನಿ ಮಾವನ ತಂತ್ರ......ಹ್ಹ.....ಹ್ಹ.....ಹ್ಹ....

ಇದೊಂದು ಬಹುದೀರ್ಘವಾದ ಆತ್ಮಕಥನ ಅಥವಾ ಸ್ವಾಲಿಲೋಕ್ವಿ, ವೀರಣ್ಣನವರ ಕಂಠ ಸಿರಿಯಲ್ಲಿ ಹೊರಡುವ ಈ ವಾಕ್ಯಗಳು ಕಗ್ಗತ್ತಲಿನ ಕತ್ತಲ ನೀರವ ಮೌನ ರಾತ್ರಿಯಲ್ಲಿ ಕಂಚಿನ ಕಂಠದಿಂದ ಉದುರಿದಾಗ ಸುತ್ತಲಿನ ಪ್ರೇಕ್ಷಕರು ದಂಗು ಬಡಿದು ಆಲಿಸುತ್ತಾರೆ ಈ ಮಾತುಗಳನ್ನು.

ಸ್ವತಃ ನಿಜದ ದುರ್ಯೋಧನ ಕೂಡ ಈ ಮಾತನ್ನು ಕೇಳಿಬಿಟ್ಟರೆ ಅಲ್ಲಿಯೇ ಎದೆಯೊಡೆದು ಸತ್ತು ಬಿಡುತ್ತಾನೇನೋ.

ಅಭಿನಯವಲ್ಲ, ಬರಿಯ ಮಾತುಗಾರಿಕೆಯಲ್ಲಿ ಎಲ್ಲರನ್ನೂ ಹಿಡಿದಿಡುವ ಬೆಳಗಲ್ಲು ವೀರಣ್ಣನಿಗೆ ದೇವರು ಕೊಟ್ಟ ವರ "ಕಂಚಿನ ಕಂಠ".

ಬಹುಶಃ ವೀರಣ್ಣ ಬಹಳ ಮೆಚ್ಚಿದ ತನ್ನ ಪಾತ್ರಗಳಲ್ಲಿ ಶಕುನಿಗೇ ಪ್ರಥಮ ಪ್ರಾಶಸ್ತ್ಯವೇನೋ. ಬ್ರಿಟಿಷರ ವಿರುದ್ಧ ಆರ್ಭಟಿಸುವ ಟಿಪ್ಪು, ಸಂಗೊಳ್ಳಿ ರಾಯಣ್ಣರ ಧ್ವನಿಗಳಲ್ಲೂ ಅದೇ ಗಂಭೀರತೆ ತುಂಬುವ ಬೆಳಗಲ್ಲು ವೀರಣ್ಣ "ಅಪ್ರತಿಮ ಕಲಾವಿದರು". ಬೆಳಗಲ್ಲು ವೀರಣ್ಣ ಹೇಳುತ್ತಾರೆ. ಇಲ್ಲಿ ವಿಲನ್ ಪಾತ್ರ ಅಂತ ನನಗೆ ಆವೇಶ ಬರಲಿಲ್ಲ. ಯಾವ ಪಾತ್ರ ಮಾಡಿದರೂ ಅದಕ್ಕೆ ಬೇಕಾದ ಗುಣಗಳನ್ನು ನಮ್ಮಲ್ಲಿ ಅಳವಡಿಸಿಕೊಂಡು ಅಭಿನಯಿಸಬೇಕು. ಆವಾಗ ಅದಕ್ಕೆ ಬೆಲೆ ಬರುತ್ತೆ. ಕಳೆ ಕಟ್ಟುತ್ತೆ. ನಾಲ್ಕೂ ಜನರು ಮೆಚ್ಚಿ ಕೇಳ್ತಾರೆ.

ಒಬ್ಬ ಕಲಾವಿದನಿಗೆ ನಿನಗೆ ಯಾವುದು ಬೇಕೂ ಅಂದ್ರೆ ವಿಲನ್, ಹೀರೋ, ಹಾಸ್ಯ ಪಾತ್ರ ಅಂತ ಯೋಚನೆ ಮಾಡಲ್ಲ. ಪೌರಾಣಿಕ ಭಾಷೆ ಮಾತಾಡ್ತಿಯಾ, ಸಾಮಾನ್ಯ ಭಾಷೆ ಮಾತಾಡ್ತಿಯಾ ಅನ್ನೋದು ಕಲಾವಿದನಿಗೆ ಮುಖ್ಯವಲ್ಲ. ಹೇಳಬೇಕಾದದ್ದನ್ನು ಸ್ಪಷ್ಟವಾಗಿ ಹೇಳ್ತೀಯೋ ಇಲ್ಲವೋ ಅನ್ನೋದು ಮುಖ್ಯ.

ಯಾರೇ ಆಗಲಿ ಯಾವುದನ್ನೇ ಆಗಲಿ ಹುಟ್ಟುತ್ತಲೇ ಕಲಿತು ಬಂದಿರುವುದಿಲ್ಲ. ಕಲಿಯಬೇಕು. ಅಭ್ಯಾಸ ಮಾಡಬೇಕು. ಶ್ರದ್ಧೆಯಿಟ್ಟು ಕೆಲಸ ಮಾಡಬೇಕು. ಅದರ ಜೊತೆಯಲ್ಲಿ ವಿನಯವಿರಬೇಕು. ವಿನಯವಿಲ್ಲಾ ಅಂದರೆ ಆತ ಎಂತಹ ದೊಡ್ಡ ಕಲಾವಿದರೇ ಆದರೂ ಅವನು ಅಷ್ಟಕ್ಕೆ ಮಲಗಿ ಬಿಡುತ್ತಾನೆ. ಮೇಲೆ ಏಳೋದೇ ಇಲ್ಲ.

ಯುವಕರು ಕಲೆಯ ಬಗ್ಗೆ ಆಕರ್ಷಿತರಾಗ್ತಾರೆ. ಆದರೆ ಅದಕ್ಕಿಂತ ಹೆಚ್ಚು ಹಣ ಮತ್ತು ಜನಪ್ರಿಯತೆಗೆ ಆಸೆ ಪಡ್ತಾರೆ. ಸಿನಿಮಾ ಟೀವಿ ಸಿರಿಯಲ್‌ನಲ್ಲಿ ಹಾಗಾಗುತ್ತೆ. ಆದರೆ ಅಲ್ಲಿ ಎಲ್ಲರಿಗೂ ಆ ಭಾಗ್ಯ ಇರಲ್ಲ. ಒಂದೆರಡು ಸಿನಿಮಾದಲ್ಲಿ ನಟಿಸಿ ಮೂಲೆ ಗುಂಪಾದ ಕಲಾವಿದರು ಬಹಳ ಜನ ಇದ್ದಾರೆ. ಬದುಕನ್ನೂ ಹಾಳು

ಮಾಡಿಕೊಂಡವರಿದ್ದಾರೆ. ಆದ್ರೆ ರಂಗಭೂಮಿ, ಯಕ್ಷಗಾನ, ಗೊಂಬೆಯಾಟ ಹಾಗೂ ಜನಪದ ಕಲೆಗಳು ಹಾಗಲ್ಲ.

ನಿಮಗೆ ಪ್ರತಿಭೆ ಇದ್ದರೆ ಅದನ್ನು ಬೆಳೆಸಿಕೊಳ್ಳಲು ಅವಕಾಶ ನೀಡುತ್ತೆ. ಅದರಿಂದ ನಾಲ್ಕು ಕಾಸೂ ದೊರೆಯುತ್ತೆ. ನಿಧಾನವಾಗಿ ಒಳ್ಳೆಯ ಬದುಕು ರೂಪಿಸಿಕೇಳಬಹುದು. ಇಲ್ಲಿ ದಿಢೀರ್ ಜನಪ್ರಿಯತೆ ಅನ್ನೋದು ಇಲ್ಲ.

ನನ್ನನ್ನೇ ನೋಡಿ. ನಾನು ತೊಗಲುಗೊಂಬೆ ಆಟದ ಹಿಂದೆ ಹೋದವನು ತಿರುಗಿ ನೋಡಿಲ್ಲ. ಅದೇ ನನ್ನ ಬದುಕು. ನನ್ನ ದುಡಿಮೆ, ಹೋರಾಟ, ಸಂತೋಷ, ಸುಖ ಎಲ್ಲಾ ಈ ತೊಗಲುಬೊಂಬೆ ಆಟದಲ್ಲಿಯೇ ಇದೆ. ಇದೇ ನನ್ನ ಬದುಕು. ಅದನ್ನು ನಾನು ನನ್ನ ಅವಿನಾಭಾವ ಸಂಬಂಧವಾಗಿ ಬೆಳೆಸಿಕೊಂಡಿದ್ದೇನೆ. ಇವತ್ತು ಬೆಳಗಲ್ಲು ವೀರಣ್ಣ ಅಂದ್ರೆ ತೊಗಲುಬೊಂಬೆ ಆಡ್ಸೋನು, ತೊಗಲು ಬೊಂಬೆ ಆಟ ಅಂದ್ರೆ ಬೆಳಗಲ್ಲು ವೀರಣ್ಣಂದು ಅನ್ನೋಷ್ಟು ಜನ ಕೂಡ ಗುರುತಿಸಿದ್ದಾರೆ.

ನೀವು ಮುಂದಿನ ದಿನಗಳಲ್ಲಿ ಯಾವ ಜನಪದ ಕಲೆಯನ್ನು ವೃತ್ತಿಯಾಗಿ ತೆಗೆದುಕೊಂಡರೂ ಪರವಾಗಿಲ್ಲ. ಅದರಲ್ಲಿಯೇ ಜೀವನ ರೂಪಿಸಿಕೊಳ್ಳೋಕೆ ಪ್ರಯತ್ನ ಪಡಬೇಕು. ಅದರಿಂದಲೇ ನಿಮಗೆ ಒಳ್ಳೆಯ ಹೆಸರು ಕೀರ್ತಿ ಬರುತ್ತೆ. ನಿಷ್ಠೆ ಮುಖ್ಯ ಪ್ರಯತ್ನ ಮುಖ್ಯ ಆದಾಗ ಸಾಧನೆ ಆಗುತ್ತೆ.

ಬೆಳಗಲ್ಲು ವೀರಣ್ಣನವರ ಮಾತನ್ನು ಇಂದಿನ ಯುವ ಜನತೆ ಆಲಿಸುವುದು ಬಲು ಮುಖ್ಯ. ಏಕೆಂದರೆ ಹೊಸತನ್ನು ಸಾಧಿಸಲು ಜನಪದ ಕಲೆಯೂ ಅವಕಾಶ ನೀಡುತ್ತದೆ ಎಂಬುದನ್ನು ಬೆಳಗಲ್ಲು ವೀರಣ್ಣ ಸಾಧಿಸಿ ತೋರಿಸಿದ್ದಾರೆ.

೧೪. ಜಾಗತೀಕರಣದ ನೆಲೆಯಲ್ಲಿ ತೊಗಲುಗೊಂಬೆ ಕಲೆಯ ಅಳಿವು-ಉಳಿವು

ಕರ್ನಾಟಕದಲ್ಲಿ ಹಾಸನ, ಮಂಡ್ಯ, ಮೈಸೂರು, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕೂಡ ತೊಗಲುಗೊಂಬೆಯಾಟದ ತಂಡಗಳಿವೆ. ಹಾವೇರಿ ಜಿಲ್ಲೆಯ ಅಂತರವಳ್ಳಿಯ ಜೀವನ ಗೌಡ್ರ ರಾಮನಗೌಡ್ರ ಅವರಂತೂ ಗೊಂಬೆಗೌಡ್ರು ಎಂದೇ ಹೆಸರು ವಾಸಿಯಾಗಿದ್ದಾರೆ. ಕೀಲು ಗೊಂಬೆ ಆಡಿಸುವ ಕೋಲಾರದ ನರಸಾಪುರದ ಸಮೀಪದ ಅಚ್ಚಟ್ಟಿನಹಳ್ಳಿಯ ಸಂಜೀವ ರೆಡ್ಡಿಯವರಂತೂ ಕರ್ನಾಟಕದಲ್ಲಿನ ಆ ಕಲೆಯ ಕೊನೆಯ ತಂತು ಎನಿಸುತ್ತದೆ. ಬಳ್ಳಾರಿ ಜಿಲ್ಲೆಯು ಬೆಳಗಲ್ಲು ವೀರಣ್ಣನವರ ಕಾರಣಕ್ಕಾಗಿ ತೊಗಲುಗೊಂಬೆಗಳ ತವರು ಮನೆ ಎನಿಸಿಕೊಂಡಿದೆ.

ಬಳ್ಳಾರಿಯ ಪಕ್ಕದ ಗಡಿಯಾಚೆಯ ಜಿಲ್ಲೆ ಅನಂತಪುರವೂ ಗೊಂಬೆಯಾಟಕ್ಕೆ ಪ್ರಸಿದ್ಧಿ ಪಡೆದಿದೆ. ಲೇಪಾಕ್ಷಿ ಗೊಂಬೆಗಳು ಈ ಗೊಂಬೆಯಾಟದವರಿಗೆ ಬಹಳ ಉಪಯುಕ್ತ ಎನ್ನುತ್ತಾರೆ ಬೆಳಗಲ್ಲು ವೀರಣ್ಣ.

ಆಂಧ್ರದ ಅನಂತಪುರಂ ಸಮೀಪದ ನಿಮ್ಮಲಕುಂಟೆ ಎಂಬ ಹಳ್ಳಿ ತೊಗಲುಗೊಂಬೆ ತಯಾರಿಸುವಲ್ಲಿ ತುಂಬಾ ಹೆಸರು ಮಾಡಿದೆ. ಸಾಂಪ್ರದಾಯಿಕ ಕ್ರಮದಲ್ಲಿ ಗೊಂಬೆಗಳು ಹೇಗಿರಬೇಕು ಎಂಬ ಅರಿವು ಇವರಿಗೆ ಇದೆ.

ಬೆಳಗಲ್ಲು ವೀರಣ್ಣ ಕೂಡ ತನಗೆ ಬೇಕಾದ ಗೊಂಬೆಗಳನ್ನು ನಿಮ್ಮಲ ಕುಂಟೆಯಲ್ಲಿಂದಲೇ ಮಾಡಿಸಿ ತಂದೆ ಎನ್ನುತ್ತಾರೆ. ಜೊತೆಯಲ್ಲಿ ಲೇಪಾಕ್ಷಿ ಮಾಡೆಲ್ ಗೊಂಬೆಗಳಿಂದಲೇ ಝಾನ್ಸಿ ರಾಣಿ ಲಕ್ಷ್ಮೀ ಬಾಯಿಯ ಗೊಂಬೆ, ಗಾಂಧಿಯ ಗೊಂಬೆ, ಅಂಬೇಡ್ಕರ್ ಗೊಂಬೆಗಳನ್ನು ಮಾಡಿಸಿದ್ದೇನೆ ಎನ್ನುತ್ತಾರೆ.

ಇಲ್ಲಿಯೇ ಒಂದು ಸೂಕ್ಷ್ಮ ಬದಲಾವಣೆಗಳ ಗಾಳಿ ಬೀಸುತ್ತಿರುವುದು ಕಣ್ಣಿಗೆ ಕಟ್ಟುತ್ತಿದೆ.

ನಿಮ್ಮಲಕುಂಟೆ ಒಂದು ಚಿಕ್ಕ ಹಳ್ಳಿ. ಅಲ್ಲಿನ ಕಿಳ್ಳೇಕ್ಯಾತರೂ, ಗೊಂಬೆರಾಮರೂ ನಿಜ ಬದುಕಿಗಾಗಿ ಈ ಬಣ್ಣದ ಗೊಂಬೆಗಳನ್ನು ನಂಬಿದ್ದಾರೆ. ಅವರಿಗೆ ಒಳ್ಳೆಯ ಕಾರ್ಯಕ್ರಮಗಳು ದೊರೆತರೆ ಗೊಂಬೆಯಾಟವಾಡಿಸಿ ಕೈತುಂಬಾ ಹಣ ಪಡೆಯಬಹುದು.

ಆದರೆ ಇಂದು ಹಳ್ಳಿಗಳು ಬದಲಾಗಿವೆ. ಪ್ರತಿ ಹಳ್ಳಿಗೂ ಟಿವಿ ಹಾಗೂ ಟೆಂಟ್ ಸಿನಿಮಾಗಳು ಧಾಳಿ ಇಟ್ಟಿವೆ. ಜನಕ್ಕೆ ಮನರಂಜನೆಗಾಗಿ ಜನಪದ ಕಲೆ ಬೇಕೇ ಬೇಕು ಎಂಬುದೇನಿಲ್ಲ. ಅದಕ್ಕಿಂತ ಆ ಕಲೆಗಳನ್ನು ನೇರವಾಗಿ ನೋಡುವ ಬದಲು ಟಿವಿಯಲ್ಲಿ ನೋಡಿ ಬೇಸರವಾದರೆ ಚಾನಲ್ ತಿರುಗಿಸಬಯಸುತ್ತಾರೆ.

ಇಂತಹ ಕಾರಣಗಳಿಂದಾಗಿ ನಿಮ್ಮಲಕುಂಟೆಯ ತೊಗಲುಬೊಂಬೆ ತಯಾರಿಸುವವರ ಆರ್ಥಿಕ ಸ್ಥಿತಿ ಹದೆಗೆಟ್ಟು ಹೋಗಿದೆ. ಆದರೂ ಬದುಕಬೇಕಲ್ಲ.

ಬೆಳಗಲ್ಲು ವೀರಣ್ಣ ಕಲೆಗೆ ಹೊಸ ಸ್ಪರ್ಶ ಕೊಟ್ಟರು. ಜನಕ್ಕೆ ಬೇಕಾದ ಗಾಂಧಿ, ಬಸವಣ್ಣ, ಸ್ವಾತಂತ್ರ್ಯ ಸಂಗ್ರಾಮ, ಝಾನ್ಸಿ ರಾಣಿ, ವಿವೇಕಾನಂದ ಮೊದಲಾದ ಕಥೆ ಸಿದ್ಧಪಡಿಸಿದರು. ಕಂಚಿನಕಂಠದಲ್ಲಿ ಹಾಡುಗಳನ್ನು ಹಾಡಿದರು.

ಅದಕ್ಕಾಗಿ ರಾಮ, ಆಂಜನೇಯ ಮೊದಲಾದ ಗೊಂಬೆ ಬದಲಿಗೆ ಗಾಂಧಿ, ಬಸವಣ್ಣ ಮೊದಲಾದ ಗೊಂಬೆ ಮಾಡಿಸಿ ಪ್ರಯೋಗಮಾಡಿ ಗೆದ್ದರು.

ನಿಮ್ಮಲ ಕುಂಟೆಯ ಜನ ಇನ್ನೂ ಒಂದು ಹೆಜ್ಜೆ ಮುಂದೆ ಹೋದರು. ತೊಗಲುಗೊಂಬೆ ಮಾರಿದರೆ ಎಲ್ಲಿ ಮಾರಾಟಮಾಡುವುದು ಒಂದು ಹೊಸಸೆಟ್ ಗೊಂಬೆ ತಯಾರಿಸಿದರೆ ಎಂಟು ಹತ್ತು ವರ್ಷ ಏನೂ ಆಗದೆ ಹೊಸದಾಗಿರುವಂತೆ ಉಳಿಯುತ್ತದೆ. ಕೆಲವು ತಂಡಗಳ ಬಳಿ ಐವತ್ತು ಅರವತ್ತು ವರುಷಗಳಷ್ಟು ಹಳೆಯದಾದ ಗೊಂಬೆಗಳಿವೆ. ಹೀಗಾಗಿ ಗೊಂಬೆ ಮಾಡುತ್ತಾ ಕುಳಿತರೆ ಅದು ಹೊಟ್ಟೆ ತುಂಬಿಸುವುದಿಲ್ಲ.

ಗೊಂಬೆ ತಯಾರಿಸುವುದು ಸುಲಭವಾದ ಕೆಲಸವೂ ಅಲ್ಲ. ಉತ್ತಮವಾಗಿ ಚರ್ಮವನ್ನು ಹದಮಾಡಿಕೊಳ್ಳಬೇಕು. ಅದನ್ನು ತಿಕ್ಕಿ ತಿಕ್ಕಿ ಪಾರದರ್ಶಕವಾಗಿಸಬೇಕು. ನಿಧಾನವಾಗಿ ಅದರಲ್ಲಿ ಚಿತ್ತಾರದ ಚಿತ್ರಗಳನ್ನು ಕೆತ್ತಬೇಕು. ಸೂಕ್ತವಾದ ಬಣ್ಣಗಳನ್ನು ಕಲಾಪ್ರೌಢಿಮೆಯಿಂದ ತುಂಬಬೇಕು. ಅವುಗಳ ಕಣ್ಣು, ಮೂಗು, ಕಿವಿಗಳು ಅಳತೆಗೆ ಅನುಗುಣವಾಗಿದ್ದು ಸುಂದರವಾಗಿ ಕಾಣುವಂತಿರಬೇಕು. ಅವುಗಳ ಉಡುಗೆ ತೊಡುಗೆಯ ತುಂಬ ಚಿಕ್ಕ ಚಿಕ್ಕ ಕಲಾತ್ಮಕ ಕುಸುರಿ ಕೆಲಸಗಳಾಗಿ ಎಂಬ್ರಾಯಿಡರಿಯಂತೆ ಕಾಣುವ ಕೆಲಸವೂ ಇರಬೇಕು. ಇದಕ್ಕೆಲ್ಲಾ ಎಷ್ಟು ಶ್ರಮ ಹಾಕಬೇಕು.

ನಿಮ್ಮಲಕುಂಟೆಯ ಜನ ಆಲೋಚನೆ ಮಾಡಿದರು ಇವೇ ಕಲೆಯ ಕೌಶಲಬಳಸಿ ಅದೇ ಚರ್ಮದಿಂದ ಗೊಂಬೆ ತಯಾರಿಸುವ ಬದಲು ಟೇಬಲ್ ಲ್ಯಾಂಪ್‌ನ ಕವರ್‌ಗಳನ್ನು ಸಿದ್ಧಪಡಿಸಿ ಆಧುನಿಕ ಮಾಲ್‌ಗಳಲ್ಲಿ, ಸಂತೆಗಳಲ್ಲಿ, ಮಾರ್ಕೆಟ್‌ಗಳಲ್ಲಿ, ರಸ್ತೆ ಬದಿಗಳಲ್ಲಿ ಅವನ್ನಿಟ್ಟು ಅವರ ಆರ್ಥಿಕ ಸ್ಥಿತಿ ಸುಧಾರಿಸಿತು. ಅವರು ಕಷ್ಟ ಪಡುವ ಕೆಲಸವನ್ನೇನೂ ಬಿಡಲಿಲ್ಲ. ಆದರೆ ಇಂದಿನ ಸಮಾಜ ನಮ್ಮಿಂದ ಏನೇನು ಕೊಳ್ಳುತ್ತದೆ ಎಂಬುದನ್ನು ಅರ್ಥಮಾಡಿಕೊಂಡು ಅದಕ್ಕೆ ಅಗತ್ಯವಾದ ವಸ್ತುಗಳನ್ನು ತಯಾರು ಮಾಡಲಾರಂಭಿಸಿದರು. ಇದೇ ಜಾಗತೀಕರಣ ಅವರ ಮೇಲೆ ಹಾಗೂ ಕಲೆ ಮೇಲೆ ಮಾಡಿರುವ ಪರಿಣಾಮ ಎಂದರೆ ತಪ್ಪಾಗುವುದಿಲ್ಲ.

ಅವರಲ್ಲಿ ಕ್ರಿಯೇಟಿವಿಟಿ ಇತ್ತು, ಕಲೆ ಇತ್ತು ಎರಡನ್ನೂ ಜೊತೆಗೂಡಿಸಿ ಬಳಸಿಕೊಂಡರು. ಹೊಸತೊಂದು ವಸ್ತು ತಯಾರಿಸಿ ನಗರದ ಜನಕ್ಕೆ ಜನಪದ ಕಲೆಯ ನೆಲೆಯಿಂದ ಹೊರಬಂದ ಷೋಕೇಸ್ ಐಟಂಗಳು ಇಷ್ಟವಾದುವು. ಇದರಿಂದ ನಿಮ್ಮಲ ಕುಂಟೆ ಇಂದು ಹೊಸರೀತಿಯ ಉದ್ಯಮದಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಗೋಡೆಯ ಮೇಲೆ ತೊಗಲುಗೊಂಬೆಗಳಲ್ಲಿ ಚಿತ್ತಾರದ ವಾಲ್ ಪ್ಲೇಟ್‌ಗಳು ಕಂಗೊಳಿಸಲಾರಂಭಿಸಿವೆ.

೧೫. ಬೆಳಗಲ್ಲು ವೀರಣ್ಣನ ಬವಣೆಯ ಬದುಕು

ಈಗಿನ ಹುಡುಗರಿಗೆ ಕಲೆಯನ್ನು ಉಳಿಸಲು ಏನು ಮಾಡಬೇಕು ಅಂತ ಹೇಳುತ್ತೀರಾ ಅಂತ ಕೇಳಿದರೆ ವೀರಣ್ಣ ಹೇಳಿದ ಮಾತುಗಳು ಮನಕಲಕುವಂತ ಸ್ಥಿತಿ ನಿರ್ಮಾಣ ಮಾಡಿತು. ಅವರು ಹೇಳುತ್ತಾರೆ.

"ಸ್ವಾಮಿ, ಈ ಕಲೆ ಉಳಿಸಬೇಕು ಅಂದ್ರೆ ಒಂದು ರೀತೀಲಿ ನೀವು ಪೂರ್ಣ ವೃತ್ತಿಕಲಾವಿದರಾಗಬೇಕು. ಆಗ ಕಲೆ ಉಳಿಯುತ್ತೆ. ಅದರ ಸತ್ಯ ಹೇಳ್ತೀನಿ. ನೀವೇನಾದ್ರೂ ವೃತ್ತಿಕಲಾವಿದನಾಗ್ತೀನಿ, ಜೀವನ ಇಡೀ ತೊಗಲುಬೊಂಬೆ ಆಡಿಸಿ ಅದ್ರಿಂದ ಬಂದ ಹಣದಿಂದಲೇ ಜೀವನ ಮಾಡ್ತೀನಿ ಅಂದ್ರೆ ಕಲೆ ಉಳಿಬಹುದು ಆದರೆ ನೀವೇ ಬದುಕಿ ಉಳಿಯೋದು ಕಷ್ಟ'.

ಇವತ್ತಿಗೂ ಹೇಳ್ತೀನಿ. ನನ್ನ ಕಲಾಸೇವೆಯ ಬದುಕಿಗೆ ನನ್ನ ಹೆಂಡತಿ ಮಾಡಿರೋ ಸೇವೆ ನೀಡಿರೋ ಸಹಕಾರ ಎರಡರ ಪಾಲೂ ತುಂಬಾ ಇದೆ.

ನನ್ನ ಬದುಕಿನ ಏಳ್ಗೆಯಲ್ಲಿ ಅವಳ ಕಷ್ಟ, ನೋವು ಎಲ್ಲಾ ತುಂಬಿದೆ. ನಾನು ನಾಟಕದಲ್ಲಿ ಕೆಲಸ ಮಾಡ್ತಿದ್ದಾಗ ಪಾತ್ರಗಳನ್ನು ಮಾಡಲಿಕ್ಕೆ, ನಾಟಕ ಕಲಿಸಲಿಕ್ಕೆ, ಕ್ಯಾಂಪ್ ಹಾಕಲಿಕ್ಕೆ, ಜಾತ್ರೆ, ಹಬ್ಬ, ಹರಿದಿನ ಅಂತ ನೋಡಿಕೊಂಡು ಊರೂರು ಅಲೆಕೊಂತ ಹೋಗಿ ಬಿಡ್ತಿದ್ದೆ. ನನ್ನ ಹೆಂಡತಿ ಮನೆಗೆ ಹೋದ್ರೆ ಹತ್ತಿರ ಸೇರಿಸುತ್ತಿರಲಿಲ್ಲ. ನನಗೆ ಮನೆಗೆ ಹೋಗೋದು ಅಂದ್ರ ಒಂದು ರೀತಿ ಭಯವಾಗ್ತಿತ್ತು. ಅವಳು 'ಪುರುಷನ ಯಶಸ್ಸಿನ ಹಿಂದೆ ಸ್ತ್ರೀ' ಅಂತಾರಲ್ಲ ಹಾಗೆ ನಾನು ಏನು ಮಾಡಿದ್ರೂ ಜೈ ಅಂತ ಹೇಳಿ ಸಪೋರ್ಟ್ ಮಾಡ್ತಿದ್ದೋಳು ಆಗಿರಲಿಲ್ಲ ಮನೆಗೆ ಹೋದ್ರೆ ಸಾಕು

ಅಕ್ಕಿ ಇಲ್ಲ
ಬ್ಯಾಳಿ ಇಲ್ಲ
ಕುಬುಸ ಇಲ್ಲ
ಹುಡುಗರಿಗೆ ಚೊಣ್ಣ ಇಲ್ಲ
ನಿಕ್ಕರ್ ಇಲ್ಲ

ಮನೆಗೆ ಹೋದ ಕೂಡಲೇ ಇದೇ ಶುರುವಾಗ್ತಿತ್ತು. ನಾನು ನಾಟಕದೊಳಗೆ ಪಾತ್ರ ಮಾಡಾಕ ಹೋಗ್ತೀನಿ ಅಂದ್ರೆ ಬೆಂಕಿ ಕೋಪ ಅವಳಿಗೆ. ಏಕೆಂದರೆ ಹೋಗಿ ಬರುವಾಗ ನಾನು ಮನೀಗೆ ಏನೂ ತರಂಗಿಲ್ಲ.

ಮನೀಗೆ ನಾಲ್ಕುಕಾಳು ತರಂಗಿಲ್ಲ

ನಾಟಕ ಎದಕ್ಕೆ ಮಾಡಕ್ಕೂ ಹೋಗ್ತಿ
ಅನ್ನೋಳು

ಆದ್ರೆ ನಾನು ತೊಗಲುಗೊಂಬೆ ಆಟ ಆಡಿಸಕ್ಕೆ ಶುರು ಹಚ್ಚಿದೆನಲ್ಲ. ಆಗಿನಿಂದ ನೋಡ್ರಿ ಅವಳದೇ ಎಲ್ಲಾ ಕಾರು ಭಾರು ಶುರುವಾತು. ಆಕೀದೇ ಎಲ್ಲಾದಕ್ಕೂ ಸೂತ್ರ. ಹಣ ಬಂತು. ಇಪ್ಪತ್ತ್ನಾಲ್ಕು ಘಂಟೆ ನನ್ನ ಹೆಂಡತಿ ನನ್ನ ಮಕ್ಕಳು ನಮ್ಮದೇ ತಂಡ. ಎಲ್ಲೀಗೆ ನಾವು ಗೊಂಬೆಯಾಟಕ್ಕೆ ಹೋದರೂ ನಮ್ಮ ಜೊತೆ ಬರುತ್ತಿದ್ದಳು.

ವಿದೇಶಕ್ಕೂ ನಮ್ಮ ಜೊತೆ ಬಂದಿದ್ದಳು. ಈವಾಗ ಅವಳಿಗೆ "ಭಲೇ ನನ್ನ ಗಂಡ" ಅನ್ನಿಸಿರಬೋದು. ಅವಳದು ಆ ಕೋಪದ ಮುಖಾನೂ ಉಂಟು. ಈ ಪ್ರೀತಿಯ ಅಭಿಮಾನದ ಮುಖಾನೂ ಉಂಟು. ಇವತ್ತು ನಾನು ಇಲ್ಲಿ ನಿಂತು ನನ್ನ ಬದುಕಲ್ಲಿ ನಡೆದಿದ್ದೆಲ್ಲಾ ಒಂದು ಸಾರಿ ನೆನಸಿಕೊಂಡ್ರೆ ಅಬ್ಬಾ ಅನ್ಸುತ್ತೆ. ಎಷ್ಟೆಲ್ಲಾ ಕಷ್ಟ ಇತ್ತು ಅನ್ಸುತ್ತೆ. ಎಂತೆಂಥಾ ಒಳ್ಳೆ ಅವಕಾಶ ಬಂತಲ್ಲಾ ಅಂತ ಖುಷಿಯಾಗುತ್ತೆ.

ಒಟ್ಟಾರೆ ನನ್ನ ಬದುಕು ಕಲೆಗೆ ಅರ್ಪಿತವಾಗಿದೆ. ನನ್ನ ಬಡತನ ಕಷ್ಟ ಪರಿಪಾಟಲು ಪಟ್ಟ ಬದುಕು ಇವೆಲ್ಲದಕ್ಕೂ ಕಲೆಯೇ ಕಾರಣ. ಹಾಗೆಯೇ ನನಗೆ ಸಿಗೋ ಸನ್ಮಾನ, ನನ್ನ ವಿದೇಶ ಯಾತ್ರೆ, ನಾನು ದುಡಿದ ಹಣ, ನನ್ನನ್ನು ಊರೂರು ಸುತ್ತಿಸಿ ಸಂತಸಪಡಿಸಿದ ಕ್ಷಣಗಳು ಸಿಕ್ಕಿದ್ದು ಎಲ್ಲವೂ ಈ ತೊಗಲುಬೊಂಬೆ ಆಟದಿಂದಾಗೆ.

ಆದ್ರಿಂದ ನನ್ನ ಉಸಿರು ಇರೋವರೆಗೂ ಈ ಕಲಾ ಸೇವೆ ಮಾಡ್ಕೊಂಡೇ ಇರ್ತೀನಿ ನಾನು.

ಬೆಳಗಲ್ಲು ವೀರಣ್ಣನವರ ಈ ಮಾತು ಅಕ್ಷರಶಃ ನಿಜ. ಇವರು ಅತ್ಯಂತ ವಿನಯವಂತ ಕಲಾಕಾರ. ತಮಗೆ ಅಂತಹ ಹೆಸರು ಪ್ರಸಿದ್ಧಿ ಇದೆ ಅಂತ ಅಹಂಕಾರವಿಲ್ಲ. ವಯಸ್ಸಾಗಿದೆ. ಈಗ್ಯಾಕೆ ಈ ಕಲಾಸೇವೆ ಎನ್ನುವ ಆಲಸ್ಯ–ಸೋಮಾರಿತನ ಇಲ್ಲ. ಇಂದಿಗೂ ಚಟುವಟಿಕೆಯ ಆಗರ ಬೆಳಗಲ್ಲು ವೀರಣ್ಣ.

೧೬. ಕಿಳ್ಳೇಕ್ಯಾತ

ತೊಗಲುಗೊಂಬೆ ಆಡಿಸುವ ಒಂದು ವೃತ್ತಿಯನ್ನೇ ಕುಲಕಸುಬನ್ನಾಗಿ ಹೊಂದಿರುವ ಸಮುದಾಯವೊಂದಿದೆ. ಅವರೇ "ಕಿಳ್ಳೇಕ್ಯಾತ"ರು.

"ಕಿಳ್ಳೇಕ್ಯಾತ" ಎಂಬ ಪಾತ್ರವೊಂದು ಕೂಡ ತೊಗಲುಗೊಂಬೆಯಾಟದಲ್ಲಿ ಇದ್ದು ಹಾಸ್ಯ ವಿಡಂಬನೆ ಹಾಗೂ ಸೂತ್ರಧಾರಿ ಕೆಲಸಗಳನ್ನು ಈ ಪಾತ್ರ ನಿರ್ವಹಿಸುತ್ತದೆ.

ಕಿಳ್ಳೇಕ್ಯಾತರು ಎಂಬುದು ಒಂದು ವೃತ್ತಿ ಆಧಾರಿತ ಜಾತಿ. ತೊಗಲುಗೊಂಬೆ ಆಡಿಸುವ ಇವರಿಗೆ ಗೊಂಬೆರಾಮರು ಎಂಬ ಹೆಸರೂ ಇದೆ. ಇವರು "ಕಿಳ್ಳೇಕ್ಯಾತ" ಎಂಬಾತನೇ ತಮ್ಮ ಕುಲದ ಮೂಲಪುರುಷ ಎಂದು ನಂಬಿದ್ದಾರೆ.

ತೊಗಲುಗೊಂಬೆಯಾಟ ಅತ್ಯಂತ ಪ್ರಾಚೀನ ಗೊಂಬೆಯಾಟ. ಒರಿಸ್ಸಾ ಹಾಗೂ ಕೇರಳ ರಾಜ್ಯಗಳಲ್ಲಿ ತೊಗಲುಗೊಂಬೆ ಆಡಿಸುವವರು ಅಲ್ಲಿನ ಸ್ಥಳೀಯ ಕುಲಕ್ಕೆ ಸೇರಿದವರೆಂದು ತಿಳಿದು ಬಂದಿದೆ. ಆದರೆ ಕರ್ನಾಟಕ ಹಾಗೂ ಉಳಿದ ದಕ್ಷಿಣ ರಾಜ್ಯಗಳಲ್ಲಿ ಈ ತೊಗಲುಗೊಂಬೆ ಆಡಿಸುವವರು ಅರೆ ಮರಾಠಿ ಭಾಷೆ ಮಾತನಾಡುವ ಕ್ಷತ್ರೀಯ ಕುಲವರ್ಗಕ್ಕೆ ಸೇರಿದವರು. ಕರ್ನಾಟಕದಲ್ಲಿ ಇವರಿಗೆ ಕಿಳ್ಳೇಕ್ಯಾತ, ಗೊಂಬೆರಾಮ, ಕಟುಬುಜಾತ ಇತ್ಯಾದಿ ಹೆಸರಿನಿಂದ ಕರೆಯುತ್ತಾರೆ. ಮಹಾರಾಷ್ಟ್ರದಲ್ಲಿ ಇವರದ್ದು ಟಾಕರ್‌ಲೋಗ್ ಎಂದೂ ತೊಗಲುಗೊಂಬೆಯಾಟವನ್ನು "ಚಮಡಾಚೆ ಬಾವಲಿ ಖೇಲ್" ಎಂದೂ ಕರೆಯುತ್ತಾರೆ. ತಮಿಳುನಾಡಿನಲ್ಲಿ "ತೋಲ್ ಸಾವ್ಯೆ ಕೂತ್ತು" ಎಂದು ಆಂಧ್ರದಲ್ಲಿ "ತೋಲುಬೊಮ್ಮಲಾಟ" ಎಂದೂ ಇದನ್ನು ಕರೆಯುತ್ತಾರೆ. ಒರಿಸ್ಸಾದಲ್ಲಿ ಇದನ್ನು "ರಾವಣ ಛಾಯಾ" ಎಂದೂ ಕರೆಯಲಾಗುತ್ತದೆ.

ಇವರು ರಾಮಾಯಣದಲ್ಲಿ ಬರುವ "ಗುಹ" ನೆಂಬ ಅಂಬಿಗನ ವಂಶಕ್ಕೆ ಸೇರಿದವರೆಂದೂ, ಗೊಂಬೆಯಾಟ ಇವರ ಕುಲಕಸುಬಾಗಿ ಉಳಿಯಲು ರಾಮನ ಶಾಪ ಕಾರಣವೆಂದೂ ಇವರ ಕುಲಪುರಾಣಕ್ಕೆ ಸಂಬಂಧಿಸಿದ ವಿವರಗಳಲ್ಲಿ ಉಲ್ಲೇಖಗಳು ಸಿಗುತ್ತವೆ ಎಂದು ನಂಬಿದ್ದಾರೆ. ಹಾಗಾಗಿಯೇ ಇವರನ್ನು "ಗೊಂಬೆ ರಾಮರು" ಎಂದೂ ಕರೆಯಲಾಗುತ್ತದೆ.

ಈ ವಂಶದವರ್‍ಯಾರೋ ಪೂರ್ವದಲ್ಲಿ ಶ್ರೀರಾಮ, ಸೀತೆ, ಲಕ್ಷ್ಮಣ ಇವರುಗಳನ್ನು ಗಂಗಾನದಿಯ ತಟಾಕದಲ್ಲಿ ದೋಣಿ ಮೂಲಕ ಒಂದು ದಡದಿಂದ ಮತ್ತೊಂದು ದಡಕ್ಕೆ ತಲುಪಿಸಿದ್ದರಂತೆ.

ಬದುಕಿನ ಕೊನೆಯ ದಿನಗಳಲ್ಲಿ ಶ್ರೀರಾಮ ಏನನ್ನಾದರೂ ಕೊಟ್ಟು ಸ್ವರ್ಗಾರೋಹಣಕ್ಕೆ ಹೋಗಲು ಸಿದ್ಧನಾಗುವನು ಎಂಬುದು ಪ್ರಜೆಗಳಿಗೆಲ್ಲಾ ತಿಳಿದಿದ್ದ ವಿಷಯ. ಆ ಹಂತದಲ್ಲಿ ಸೀತಾದೇವಿಯನ್ನು ಹುಡುಕಲು ಸಹಾಯ ಮಾಡಿದ ಎಲ್ಲರೂ ಶ್ರೀರಾಮನಿಂದ ಏನನ್ನಾದರೂ ಪಡೆದು ಕೃಪಾರ್ಥರಾಗುತ್ತಿದ್ದರು. ಶ್ರೀರಾಮ ಸೀತಾದೇವಿಯೊಂದಿಗೆ ಸಂತಸದಿಂದ ರಾಜ್ಯಭಾರ ಮಾಡುತ್ತಿದ್ದ. ಇನ್ನೂ ಸೀತಾ ವಿಯೋಗದ ಎರಡನೆ ಅಂಕ ಆರಂಭವಾಗಿರಲಿಲ್ಲ. ಈ ಮಧ್ಯೆ ಸೀತೆಗೊಂದು ಅಳುಕು ಪ್ರಾರಂಭವಾಗಿತ್ತು. ವನವಾಸದ ನಂತರ ರಾವಣನಿಂದ ಅಪಹೃತಗಳಾಗಿ ಲಂಕೆಯ ಅಶೋಕವನದಲ್ಲಿ ಇದ್ದ ಸಂದರ್ಭದಲ್ಲಿ ಶೂರ್ಪಣಕಿ ಚರ್ಮದಿಂದ ರಾವಣನ ಗೊಂಬೆಯೊಂದನ್ನು ಮಾಡಿ ತಂದು ಸೀತೆಗೆ ಕೊಟ್ಟಿದ್ದಳು. ಮುದ್ದಾದ ರಾವಣನ ಗೊಂಬೆ ಸೀತೆಗೆ ತುಂಬಾ ಇಷ್ಟವಾಗಿತ್ತು. ಅಲ್ಲಿಂದ ರಾಮ ರಾವಣನನ್ನು ಕೊಂದು ಸೀತೆಯನ್ನು ಅಯೋಧ್ಯೆಗೆ ಕರೆ ತಂದಾಗ ಯಾರಿಗೂ ಕಾಣದಂತೆ ಸೀತೆ "ಚರ್ಮದ ಚಿತ್ರಪಟವನ್ನು ತನ್ನೊಂದಿಗೆ ತಂದಿದ್ದಳು. ರಾವಣನ ಆ ಚಿತ್ರವನ್ನು ಆಗಾಗ ನೋಡುವ ಬಯಕೆ ಅವಳಿಗೆ ಬಂದಿತ್ತೇನೋ. ಆದರೆ ಅಯೋಧ್ಯೆಗೆ ಬಂದನಂತರ ತ್ರಿಕರಣ ಶುದ್ಧಿ ಹೊಂದಿರಬೇಕೆಂಬ ಪರಿಜ್ಞಾನದಿಂದ ಈ ಚಿತ್ರಪುಟವನ್ನು ಶೂರ್ಪಣಖಿ ಕೊಟ್ಟದ್ದೆಂದು ಸೀತೆ ಶ್ರೀರಾಮನಲ್ಲಿ ಅರಿಕೆ ಮಾಡಿಕೊಂಡಳು. ಆ ಚರ್ಮದ ಚಿತ್ರಪಟ ನೋಡಿದ ಶ್ರೀರಾಮ ಕೋಪಾವಿಷ್ಟನಾಗಿ ತನ್ನ ಖಡ್ಗದಿಂದ ಆ ಚಿತ್ರಪಟವನ್ನು ಕತ್ತರಿಸಿಹಾಕಿದ. ಅವನು ರಾವಣನನ್ನೇ ಕತ್ತರಿಸಿ ಹಾಕುವಂತೆ ಆ ಚಿತ್ರಪಟವನ್ನು ಹರಿದು ಹಾಕಿ ಬಿಟ್ಟಿದ್ದ. ಆ ಸಮಯದಲ್ಲಿ ಗುಹ ಶ್ರೀರಾಮನ ಬಳಿ ಬಂದು ತನ್ನ ಹಾಗೂ ತನ್ನವರ ಬದುಕಿಗಾಗಿ ಏನಾದರೊಂದು ಕಾಯಕಬೇಕೆಂದು ಕೇಳಿದ.

ಹರಿದುಹೋದ ಗೊಂಬೆಯನ್ನು ಸರಿಪಡಿಸಿಕೊಂಡು ರಾಮಾಯಣ ಕಥಾಸಾರವನ್ನು ಜನರಿಗೆ ತಿಳಿಸು ಎಂದು ರಾಮ ಗುಹನಿಗೆ ಕುಲವೃತ್ತಿಯಾಗಿ ಈ ಗೊಂಬೆಯಾಟವನ್ನು ವರವಾಗಿ ನೀಡಿದ.

ಈ ಹರಿದು ಹೋದ ಗೊಂಬೆಗಳನ್ನು ಹೇಗೆ ಹೊಲಿಯಲಿ? ಎಂದು ಗುಹ ಕೇಳಿದಾಗ ನಿನಗೆ ಶಿಖೆ ಹಾಗೂ ಜನಿವಾರ ಎರಡೂ ಇದೆ. ಶಿಖೆ ಹಾಗೇ ಇರಲಿ. ನಿನ್ನ ಜನಿವಾರ ಹರಿದುಕೊಂಡು ಆ ದಾರದಿಂದ ಚರ್ಮದ ಗೊಂಬೆ ಹೊಲಿದು ಸರಿಪಡಿಸಿಕೊಂಡು ಗೊಂಬೆಯಾಟದ ಮೂಲಕ ಕಥೆ ಹೇಳು ಎಂದ ಶ್ರೀರಾಮ.

ವೃತ್ತಿಯೊಂದು ತಮ್ಮ ಕುಲಕ್ಕೆ ಹೇಗೆ ಅಂಟಿಕೊಂಡಿತು ಎಂದು ತಿಳಿಸುವ ಕುಲಪುರಾಣಗಳು ಅನೇಕವಿದೆ. ಈ ಕಥೆಯೂ ಅಂತಹುದೇ ಆಗಿದೆ.

ಆದರೆ ಈ ಕಥೆಯನ್ನು ವಿಶ್ಲೇಷಿಸುವಾಗ ಇವರು ಮೂಲ ಅಂಬಿಗರೆಂದೂ ಗಂಗಾನದಿಯ ದಡದ ನಿವಾಸಿಗಳೆಂದೂ, ಜುಟ್ಟು ಜನಿವಾರ ಹೊಂದಿದ್ದವರು ಜನಿವಾರ ಕಳೆದುಕೊಂಡು ಕೇವಲ ಶಿಖೆ ಉಳಿಸಿಕೊಂಡವರು ಎಂದೂ ಈ ಕಥೆಯಿಂದ ತಿಳಿದು

ಬರುತ್ತದೆ. ಇವರಲ್ಲಿ ಹಳೆಯ ತಲೆಮಾರಿನವರು ಜುಟ್ಟು ಬಿಡುವ ಪದ್ಧತಿ ಇರುವುದಕ್ಕೆ ಇದೊಂದು ಸಮಜಾಯಿಷಿಯಾಗಿ ತೋರುತ್ತದೆ.

ಇವರನ್ನು ಗೊಂಬೆ ರಾಮರು ಎಂದು ಕರೆಯುವಲ್ಲಿ ಈ ಕಥೆಯ ಪ್ರಭಾವ ಇದೆಯಾದರೂ ಈ ತೊಗಲು ಗೊಂಬೆಯಾಟದಲ್ಲಿ ಮೂಲತಃ ರಾಮಾಯಣದ ಕಥೆಯನ್ನು ಹೇಳುತ್ತಿದ್ದುದು ಪ್ರಮುಖ ಕಾರಣ ಎಂಬುದನ್ನು ವಿಶ್ಲೇಷಣೆಯಿಂದ ಅರ್ಥಮಾಡಿಕೊಳ್ಳಬಹುದು.

ಕಿಳ್ಳೇಕ್ಯಾತ ಎಂಬುದು ವಕ್ರಮೊಗದ, ದಪ್ಪ ತುಟಿಯ, ಬೆನ್ನುಬಾಗಿದ, ಕಪ್ಪಾದ ಒಂದು ಗೊಂಬೆ, ಈತನನ್ನು ತಮ್ಮ ಕುಲಪುರುಷ ಎಂದು ನಂಬಿರುವಂತೆಯೇ ಸತ್ತ ಪಿತೃರೂಪಿ ಎಂದೂ ಇವರು ಭಾವಿಸುತ್ತಾರೆ. ಇಂದಿಗೂ ಮರಣಾನಂತರದ ಕರ್ಮಕ್ರಿಯೆಗಳಲ್ಲಿ ಇವರು ಕಿಳ್ಳೇಕ್ಯಾತ ರೂಪದ ಚಿತ್ರವನ್ನು ಬೆಳ್ಳಿ ತಗಡಿನಲ್ಲಿ ಕೊರೆದು ದೇವಾಲಯಕ್ಕೆ ದಾನ ಮಾಡುವ ಸಂಪ್ರದಾಯವಿದೆ. ಒಟ್ಟಿನಲ್ಲಿ ಇದು ಕಿಳ್ಳೇಕ್ಯಾತರ ಹಿರಿಯ. ನೋಡುವವರಿಗೆ ಇದೊಂದು ಹಾಸ್ಯಪಾತ್ರ, ಆದರೆ ಅವರಿಗೆ ಅದು ಕುಲದೇವತೆ. ಮರಾಟಿಯಲ್ಲಿ ಈ ಕುಲದ ನಿಜನಾಮ ದಾಯತ್ ಕರ್. ಅಂದರೆ ದೇವರ ಕಥೆಗಳನ್ನು ಹೇಳುವವರು ಎಂದು ಅರ್ಥ.

ಕರ್ನಾಟಕದಲ್ಲಿರುವ ಗೊಂಬೆಯಾಟದವರ ಮೂಲಸ್ಥಳ ಮಹಾರಾಷ್ಟ್ರ. ಇವರನು ರಾಜ್‌ಮರಾಠಿ ಎಂದೂ ಕರೆಯುತ್ತಾರೆ.

ಹಿಂದೆ ಅವರು ಮರಾಠ ರಾಜರಿಗಾಗಿ ಗುಪ್ತಚಾರದಳದವರಾಗಿ ಕೆಲಸ ಮಾಡುತ್ತಿದ್ದಿರಬಹುದೆಂದೂ ಯುದ್ಧತಂತ್ರದಲ್ಲಿ ಬಹಳ ನಿಪುಣರಾಗಿದ್ದವರೆಂದೂ ಈಗಿನ ಕಿಳ್ಳೇಕ್ಯಾತರು ನಂಬಿದ್ದಾರೆ. ಬಾಡಿಗೆ ಯೋಧರಾಗಿ ಕರೆದಲ್ಲಿಗೆ ಹೋಗಿ ಯುದ್ಧ ಮಾಡುತ್ತಿದ್ದ ಇವರು ಕಾಲಾಂತರದಲ್ಲಿ ಕರ್ನಾಟಕದ ವಿವಿಧ ಭಾಗಗಳಲ್ಲಿ ನೆಲೆ ನಿಂತಿರಬಹುದು.

ಪ್ರದರ್ಶನ ಸಂದರ್ಭದಲ್ಲಿ ಕಿಳ್ಳೇಕ್ಯಾತ ಮತ್ತು ಬಂಗಾರಕ್ಕ ಎಂಬ ಎರಡು ಪಾತ್ರಗಳ ಪ್ರವೇಶ ಬಹಳ ವಿಶಿಷ್ಟವಾದುದು. ಕಿಳ್ಳೇಕ್ಯಾತ ಪಾತ್ರವು ಅಶ್ಲೀಲವಾಗಿ ಬಿಂಬಿತವಾಗುತ್ತದೆ ಎಂದು ಶಿಷ್ಟರು ಆ ಪಾತ್ರ ಪ್ರವೇಶ ಬೇಡವೆಂದು ಸಲಹೆ ಮಾಡುತ್ತಾರಂತೆ ಆದರೆ ಹಳ್ಳಿಗರು ಅ ಪಾತ್ರಕ್ಕೆಂದೇ ಕಾದು ಕುಳಿತಿರುತ್ತಾರಂತೆ.

ಬಂಗಾರಕ್ಕ ಮತ್ತು ಕಿಳ್ಳೇಕ್ಯಾತ ಪಾತ್ರಗಳ ಮುಖ್ಯ ಕೆಲಸವೇ ಸಾಮಾಜಿಕ ವಿಡಂಬನೆ. ಸುತ್ತ ಹತ್ತೂರಿನ ಹಳ್ಳಿಗಳಲ್ಲಿ ನಡೆಯುವ ವಿದ್ಯಮಾನಗಳ ಸುದ್ದಿ ಪ್ರಸಾರವೇ ಅವರ ಸಂಭಾಷಣೆಯ ಸಾರ. ಒಗಟು, ಹಾಡು, ಉಪಕಥೆ, ಹಾಸ್ಯದ ತುಣುಕುಗಳು ಇವನ್ನೆಲ್ಲಾ ಈ ಸಂದರ್ಭದಲ್ಲಿ ಯಥೇಚ್ಛವಾಗಿ ತುರುಕಲಾಗಿರುತ್ತದೆ. ಈ ಎರಡು ಪಾತ್ರಗಳು ಮುಖ್ಯ ಕಥೆಗೆ ಸಂಬಂಧ ಹೊಂದಿರಲೇಬೇಕು. ಎಂದೇನಿಲ್ಲ. ಅಶ್ಲೀಲ ಸಂಭಾಷಣೆ, ತತ್ವ, ಲಾವಣಿ ಪದಗಳ ಮೂಲಕ ಸಮಾಜದಲ್ಲಿ ನಡೆಯುವ ಒಳ್ಳೆಯ ಹಾಗೂ ಕೆಟ್ಟ

ಕೆಲಸಗಳ ವಿಶ್ಲೇಷಣೆ ಇಲ್ಲಿ ನಡೆಯುತ್ತದೆ. ಒಗಟುಗಳ ಪಂಥ ಆರಂಭಿಸಿ ನೆರೆದ ಜನರ ಬುದ್ಧಿಗೆ ಸಾಣೆ ಹಿಡಿಯುವ ಮೋಜಿನಾಟ ಕೂಡ ಇಲ್ಲಿ ನಡೆಯುತ್ತದೆ.

ಕಿಳ್ಳೇಕ್ಯಾತರು ಮೀನು ಹಿಡಿಯುವುದರಲ್ಲಿ ನಿಷ್ಣಾತರು. ಕಿಳ್ಳೇಕ್ಯಾತ ಹೆಂಗಸರು ಹಚ್ಚೆ ಕಲೆಯಲ್ಲಿ ನೈಪುಣ್ಯತೆ ಸಾಧಿಸಿದವರು. ಹಗಲಿನಲ್ಲಿ ಸುತ್ತಲಿನ ಹಳ್ಳಿಗಳಲ್ಲಿ ಸುತ್ತಿ ಕಾಳು, ಕಡ್ಡಿ, ಅಕ್ಕಿ, ಬೇಳೆ ಬೇಡುವುದಲ್ಲದೆ ರಾತ್ರಿ ಆಟ ಇರುವುದರ ಸೂಚನೆ ಕೂಡ ನೀಡುತ್ತಾರೆ.

ಕಲಾ ಪ್ರದರ್ಶನದಲ್ಲಿ ಮಾತ್ರ ಇದೇ ಸ್ತ್ರೀ ಅತ್ಯಂತ ನಾಜೂಕಾಗಿ ಹಿನ್ನೆಲೆ ಧ್ವನಿ ನೀಡುವ ಮೂಲಕ ತನ್ನ ಕಲಾಪ್ರತಿಭೆಯನ್ನು ಹೊರ ಸೂಸುತ್ತಾಳೆ.

ಬಡತನದ ಬದುಕಿನ ಕಿಳ್ಳೇಕ್ಯಾತರಿಗೆ ಇದೊಂದು ಆರ್ಥಿಕ ಮೂಲ. ಆದರೆ ಅದರಿಂದಲೇ ಅವರ ಬಡತನ ತೀರುವುದಿಲ್ಲ. ಭಿಕ್ಷಾಟನೆ ಅಲ್ಲದಿದ್ದರೂ ಮನೆ ಮನೆಗೆ ಹಚ್ಚೆ ಹೊಯ್ಯಲು, ಕೌದಿ ಹೊಲಿಯಲು ತಿರುಗುವ ಇವರ ಸ್ಥಾನಮಾನ ಅದಕ್ಕಿಂತ ಹೆಚ್ಚಿನ ಸ್ಥಿತಿಯಲ್ಲಿಲ್ಲ. ಕ್ಯಾತರ ಕ್ಯಾಂಪು ಹಿನ್ನೀರಿನ ಸ್ಥಳಗಳಲ್ಲಿ ಇದ್ದು ಅಲ್ಲಿನ ಕಿಳ್ಳೇಕ್ಯಾತರು ಪೂರ್ಣವಾಗಿ ಮೀನು ಹಿಡಿಯುವುದರಲ್ಲಿ ತೊಡಗಿದ್ದಾರೆ.

ಕಿಳ್ಳೇಕ್ಯಾತರ ದೈನಂದಿನ ಬದುಕಿಗೂ ಅದರಲ್ಲಿ ಕಲೆಯ ಪ್ರತಿಭೆಯನ್ನು ಚೆನ್ನಾಗಿ ದುಡಿಸಿಕೊಂಡ ಬೆಳಗಲ್ಲು ವೀರಣ್ಣ ಅವರ ಬದುಕಿಗೂ ಇಂದು ಸಾಕಷ್ಟು ಅಂತರವಿದೆ. ಪರಿಸರದ ಪ್ರಜ್ಞೆ ಆರ್ಥಿಕ ವ್ಯವಹಾರದ ಜಾಣ್ಮೆ, ಓದಿನ ಬಗ್ಗೆ ಗೌರವ ಇರುವ ಬೆಳಗಲ್ಲು ವೀರಣ್ಣ ಇಂದು ನಿಷ್ಠೆಯಿಂದ ದುಡಿದ ಫಲವಾಗಿ ಒಂದು ನೆಲೆ ಕಂಡುಕೊಂಡಿದ್ದಾರೆ. ಉಳಿದ ಕಲಾವಿದರಿಗೆ ಮಾದರಿಯಾಗಿದ್ದಾರೆ. ಆರ್ಥಿಕ ಸಂಕಷ್ಟ, ಸಾಮಾಜಿಕವಾಗಿ ಅವಗಣನೆ, ಹಾಗೂ ಅರಿವು ಬಾರದಂತಹ ಮೌಢ್ಯತೆ, ಸಾಮಾಜಿಕವಾಗಿ ನಿಕೃಷ್ಟ ಎನ್ನಿಸುವಂತಹ ಬದುಕು ಬಾಳುವ ಸಮುದಾಯವೊಂದರ ಒಡಲಲ್ಲಿ ಅಡಗಿರುವ ಅಪ್ರತಿಮ ಕಲಾ ವಿಶೇಷ ತೊಗಲುಗೊಂಬೆಯಾಟದ್ದು. ಅಂತಹ ಕಲೆಯ ಸೇವೆ ಮಾಡುತ್ತಲೆ ಈ ಕಲೆಯ ಮೂಲ ಕುಲದ ಬದುಕಿನ ರೀತಿಗೆ ಅಂಟಿಕೊಳ್ಳದೇ ಬೆಳವಣಿಗೆಯ ಕುರುಹು ತೋರಿದ ಬೆಳಗಲ್ಲು ವೀರಣ್ಣ. ತಮ್ಮ ಕಲಾ–ಪ್ರೌಢಿಮೆಯಿಂದಲೇ ಇಂದು ಸಮಾಜದಲ್ಲಿ ಉತ್ತಮ ಗೌರವ ಸಂಪಾದಿಸಿದ್ದಾರೆ.

ಬೆಳಗಲ್ಲು ವೀರಣ್ಣ ಅವರ ಹಿನ್ನೆಲೆ, ಮುನ್ನೆಲೆಯ ಬದುಕು, ಹೋರಾಟ, ಸಾಧನೆ ಎಲ್ಲವನ್ನೂ ಪರಿಗಣಿಸಿದಲ್ಲಿ ಅವರು ಬೆಳೆದು ಬಂದ ದಾರಿ ಹಾಗೂ ಯಶಸ್ಸಿನ ಸಾಧನೆ ಎರಡರ ಕುರಿತು ಮನಸ್ಸಿಗೆ ಆಶ್ಚರ್ಯ ಎನಿಸುತ್ತದೆ.

ಬೆಳಗಲ್ಲು ವೀರಣ್ಣ ಅಪ್ರತಿಮ ಜನಪದ ಕಲಾವಿದರು. ಅವರ ಬದುಕಿನ ಕ್ಷಣಗಳಲ್ಲಿ ನೋವು ನಲಿವಿನ ಕ್ಷಣಗಳೆರಡೂ ಇವೆ; ಅವರದೇ ಕನಸಿನ ಪ್ರಯೋಗಗಳಿಂದಾಗಿ ತೊಗಲುಬೊಂಬೆಯಾಟದಲ್ಲಿ ಹೊಸಹೊಸ ಕ್ರಿಯಾತ್ಮಕ ಪ್ರಯೋಗಗಳು ನಡೆಯುತ್ತಿವೆ.

ನಮ್ಮ ಪ್ರಕಟಣೆಗಳು

ಕ್ರಸಂ.	ಕೃತಿಯ ಹೆಸರು ಲೇಖಕ/ ಸಂಪಾದಕರ ಹೆಸರು	ಬೆಲೆ
೧.	ಇಂದಿನ ಕನಸು ನಾಳಿನ ನನಸು *ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ*	೧೦೦.೦೦
೨.	ಜಾನಪದ ವರ್ಷ–೨೦೧೧ *ಸಂ : ಡಾ. ಎಸ್.ಪಿ. ಪದ್ಮಪ್ರಸಾದ್*	೧೦೦.೦೦
೩.	ಜಾನಪದ ವಸ್ತುಕೋಶ *ಸಂ : ಪ್ರೊ. ಸ.ಚಿ. ರಮೇಶ*	೧೪೦.೦೦
೪.	ಕೇರಳದ ಜನಪದವೀರ ತಚ್ಚೋಳಿ ಒದೇನನ್ *ಡಾ. ಕೆ. ಕಮಲಾಕ್ಷ*	೧೪೦.೦೦
೫.	ಕಾಡುಗೊಲ್ಲರ ಕೋಲಾಟದ ಪದಗಳು *ಸಂ : ಮೋಹನಕುಮಾರ ಎನ್.*	೮೦.೦೦
೬.	ತುಳುನಾಡಿನ ಜನಪದ ಕತೆಗಳು *ಸಂ : ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್*	೧೦೦.೦೦
೭	ಕರ್ನಾಟಕ ಸಂಶೋಧನ ಜಾನಪದ *ಸಂ : ಪ್ರೊ.ಎ.ವಿ. ನಾವಡ*	೯೫೦.೦೦
೮.	ಮಲೆನಾಡ ನುಡಿಕೋಶ *ಸಂ : ವೇಣಾಕ್ಷಿ ಎಸ್.ಡಿ.*	೧೫೦.೦೦
೯.	ಬುರ್ರಕಥಾ ಜಯಮ್ಮ *ಡಾ. ಕೆ. ಪ್ರೇಮಕುಮಾರ*	೪೦.೦೦
೧೦.	ಗೊಂಬೇಗೌಡರ ರಾಮನಗೌಡರು *ಡಾ. ಚಂದ್ರಪ್ಪ ಸೊಬಟಿ*	೮೦.೦೦
೧೧.	ನಮ್ಮ ಪರಿಸರದ ಲಂಬಾಣಿಗರು *ಡಾ. ಮಲ್ಲಿಕಾರ್ಜುನ ಕುಂಬಾರ*	೬೦.೦೦
೧೨.	ಕಾಡುಗೊಲ್ಲರ ಬೆಡಗಿನ ಪದಗಳು *ಸಂ : ಶ್ವೇತಾ ಎಂ.ಬಿ., ಶ್ರೀ ಮೋಹನಕುಮಾರ್ ಎನ್.*	೬೦.೦೦
೧೩.	ಹುಮಾಯೂನ್ ಹರಲಾಪುರ *ಡಾ. ವೃಷಭಕುಮಾರ*	೬೦.೦೦
೧೪.	ಅಪ್ಪಗೆರೆ ತಿಮ್ಮರಾಜು *ಶ್ವೇತಾ ಎಂ.ಬಿ.*	೮೦.೦೦
೧೫.	ನೆಲದ ನೆನಪು *ಡಾ. ಜಯಪ್ರಕಾಶ್ ಶೆಟ್ಟಿ ಹೆಚ್, ಡಾ. ಚಿಕ್ಕಮಗಳೂರು ಗಣೇಶ*	೨೦೦.೦೦
೧೬.	ನಮ್ಮ ಗಿಡಮರಬಳ್ಳಿಗಳು *ಶಾಂತಿ ನಾಯಕ*	೪೦.೦೦

೧೭.	ದೇಶೀಯ ಕೃಷಿ ಹತೋಟಿ ಮತ್ತು ಸಂರಕ್ಷಣಾ ಕ್ರಮಗಳು *ಸಂ : ಪ್ರೊ. ಪ್ರಕಾಶ ಕಮ್ಮರಡಿ*	೧೦೦.೦೦
೧೮.	ಜಾನಪದ ವರ್ಷ-೨೦೧೨ *ಸಂ : ಡಾ. ಕೆ.ವಿ. ಮುದ್ದವೀರಪ್ಪ*	೧೨೦.೦೦
೧೯.	ದಕ್ಷಿಣ ಭಾರತೀಯ ದೇಶೀ ಕೃಷಿವಿಜ್ಞಾನ ಕೋಶ (ಎರಡು ಸಂಪುಟಗಳು ಸೇರಿ) *ಪ್ರ.ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ* ಕಾ.ನಿ.*ಸಂ : ಪ್ರೊ. ಆರ್ಲಿಯಸ್ ಸುಂದರಂ,* *ಸಂ : ಪ್ರೊ. ಸ.ಚಿ. ರಮೇಶ*	೧೦೦೦.೦೦
೨೦.	ವಿಸ್ತೃತ ಜಾನಪದ ಗ್ರಂಥಸೂಚಿ *ಪ್ರ.ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ* *ಸಂ : ಶ್ರೀ ಕ್ಯಾತನಹಳ್ಳಿ ರಾಮಣ್ಣ, ಶ್ರೀ ಟಿ.ಎಸ್. ರಾಜಪ್ಪ*	೭೦೦.೦೦
೨೧.	ಮೂಲತಾನದ ನಾಗಬ್ರಹ್ಮ ಮತ್ತು ಪರಿವಾರ ದೈವಗಳ ಪಾಡ್ದನ *ಸಂ : ಡಾ. ಇಂದಿರಾ ಹೆಗ್ಗಡೆ*	೧೫೦.೦೦
೨೨.	ಉತ್ತರ ಕನ್ನಡ ಕರಾವಳಿಯ ಜನಪದ ಕತೆಗಳು *ಸಂ : ಶಾಂತಿ ನಾಯಕ*	೧೨೦.೦೦
೨೩.	**Manteswamy Epic Tradition of South Karnataka** ***Prof. Ambalike Hiriyanna***	೨೮೦.೦೦
೨೪.	**Dakshinatya Abhinaya Siddhanta** ***Dr. Guru Rao Bapat***	೧೦೦.೦೦
೨೫.	ನಾಡವರ ಜಾನಪದ ತವನಿಧಿ *: ಪ್ರೊ. ಎನ್.ಆರ್. ನಾಯಕ*	೨೬೦.೦೦
೨೬.	**The Bayalatas of North Karnataka** ***Dr. Basavaraja Malashetty*** ***Translated by: Dr. Parvathi G. Aithal***	೧೩೦.೦೦
೨೭.	ತಾತ್ಯಾ-ಬಾಪು ಅವರ ಲಾವಣಿಗಳು *ಸಂ : ಡಾ. ಹರಿಲಾಲ ಪವಾರ*	೮೦.೦೦
೨೮.	ಪೂಜಾರಿ ಶಿವಣ್ಣ ಹೇಳಿದ ಜುಂಜಪ್ಪ ಮಹಾಕಾವ್ಯ *ಸಂ : ಡಾ. ತೀ.ನಂ. ಶಂಕರನಾರಾಯಣ, ಡಾ. ಎಂ.ಎನ್. ವೆಂಕಟೇಶ್*	೧೭೦.೦೦
೨೯.	ಬೆಳಗಲ್ಲು ವೀರಣ್ಣ *ಡಾ. ಎಂ.ಎನ್. ವೆಂಕಟೇಶ್*	೭೦.೦೦
೩೦.	ಮಂಜಮ್ಮ ಜೋಗತಿ *ಡಾ. ಚಂದ್ರಪ್ಪ ಸೊಬಟಿ*	೮೦.೦೦
೩೧.	ಡಾ. ಪಿ.ಕೆ. ರಾಜಶೇಖರ *ಸಂಗಮೇಶ ಎಸ್. ಗಣಿ*	೧೨೦.೦೦
೩೨.	ಜಾನಪದ ಜಗಲಿ (ಸಂಶೋಧನಾ ಅರ್ಧವಾರ್ಷಿಕ ಪತ್ರಿಕೆ) ಸಂಚಿಕೆ-೧, ೨, ೩ & ೪	ಬಿಡಿ ಪ್ರತಿಗೆ ೫೦.೦೦

ಜನಪದರಿಗೆ ಬದುಕು ಮತ್ತು ಕಲೆ ಬೇರೆ ಬೇರೆಯಲ್ಲ. ಆಧುನಿಕತೆಯ ಓಘಕ್ಕೆ ಸಿಲುಕಿರುವ ಜನಪದರು ತಮ್ಮ ಪರಂಪರಾಗತ ಕಲೆಗಳನ್ನು ಪೋಷಿಸಿಕೊಂಡು ಬರುವಲ್ಲಿ ಹೆಣಗಾಡುತ್ತಿದ್ದಾರೆ. ಅಲ್ಲದೆ, ಇಂದು ಕಲೆಯನ್ನೇ ನಂಬಿಕೊಂಡು ಜೀವನ ನಡೆಸುವ ಸ್ಥಿತಿಯಲ್ಲೂ ಕಲಾವಿದರಿಲ್ಲ. ಆದ್ದರಿಂದ ನೆಲಮೂಲಜ್ಞಾನ ಪರಂಪರೆ ಕಣ್ಮರೆಯಾಗುತ್ತಿದೆ. ಪಾರಂಪರಿಕ ಕಲೆಗಳು ಅಳಿವಿನಂಚಿನಲ್ಲಿವೆ. ಈ ನಡುವೇ ಪರಂಪರಾಗತ ಕಲೆಯನ್ನೇ ತಮ್ಮ ಜೀವನದ ಉಸಿರೆಂದು ಭಾವಿಸಿ, ಅದರ ಸಂರಕ್ಷಣೆ ಮತ್ತು ಸಂವರ್ಧನೆಗಾಗಿ ಶ್ರಮಿಸುತ್ತಿರುವ ಕಲಾವಿದರು ಇರುವುದು ಆಶಾದಾಯಕ ಬೆಳವಣಿಗೆ. ತೊಗಲುಗೊಂಬೆಯಂಥ ಅಪ್ಪಟ ಜನಪದ ಕಲೆಯನ್ನು ನಾಡಿನ ಮೂಲೆಮೂಲೆಗೂ ತಲುಪಿಸಿದ ಕೀರ್ತಿಗೆ ಭಾಜನರಾದ ಶ್ರೀ ಬೆಳಗಲ್ಲು ವೀರಣ್ಣ ಅವರು ಆ ಕಲೆಯನ್ನು ಪೋಷಿಸಿಕೊಂಡು ಬರುತ್ತಿರುವ ವಿರಳ ಕಲಾವಿದರಲ್ಲಿ ಅಗ್ರಗಣ್ಯರು. ಅವರ ಜೀವನದ ಏಳು-ಬೀಳುಗಳನ್ನು ಹಾಗೂ ಅವರ ಕಲಾಬದುಕಿನ ಯಶೋಗಾಥೆಯನ್ನು ಡಾ. ಎಂ.ಎನ್. ವೆಂಕಟೇಶ ಅವರು 'ಬೆಳಗಲು ವೀರಣ್ಣ' ಕೃತಿಯಲ್ಲಿ ಅಚ್ಚುಕಟ್ಟಾಗಿ ನಿರೂಪಿಸಿದ್ದಾರೆ. ಬೆಳಗಲ್ಲು ವೀರಣ್ಣ ಹಾಗೂ ಅವರ ಜೀವನದ ಮುಖ್ಯ ಉಸಿರೇ ಆಗಿರುವ ತೊಗಲುಗೊಂಬೆಯಾಟ ಕಲೆಯ ಬಗ್ಗೆ ಅರಿಯಲು ಈ ಕೃತಿ ಸಹಾಯಕವಾಗಿದೆ. ಕೃತಿಯನ್ನು ರಚಿಸಿಕೊಟ್ಟಿರುವ ಡಾ. ಎಂ.ಎನ್. ವೆಂಕಟೇಶ ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

■ ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

ISBN 978-93-83149-29-2

₹ : ೭೦/-

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

Printed at : Raja Printers, Bangalore-560 027, Ph.: 22234066